VOLUME: 16 | 27 MARCH 2026 | ಶುಕ್ರವಾರ | RS: 2 | PAGE: 06 ISSUE: 59 ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

ರಶ್ಮಿಕಾ, ವಿಜಯ್ ದೇವರಕೊಂಡ ಮದುವೆಯ ಬಳಿಕ ಮೊದಲ ಪ್ರವಾಸಕ್ಕೆ ತೆರಳಿದ್ದು, ಸ್ವಚ್ಛಂದವಾಗಿ ವಿಹರಿಸಲು ಥಾಯ್ಲೆಂಡ್ ದೇಶವನ್ನು ಆರಿಸಿಕೊಂಡಿದ್ದಾರೆ. ವಿಶೇಷ ಎಂದರೆ ಇದು ಹನಿಮೂನ್ ಅಲ್ವಂತೆ. ಇದನ್ನು ಬಡ್ಡೀಮೂನ್ ಎಂದು ಕರೆಯಬೇಕೆಂಬ ಟ್ರೆಂಡ್‌ಗೆ ಭಾರತದಲ್ಲಿ ಚಾಲನೆ ಕೊಟ್ಟಿದ್ದಾರೆ. ಮದುವೆ ಬಳಿಕ ದಂಪತಿ ಇಬ್ಬರೇ ಪ್ರವಾಸಕ್ಕೆ ಹೋದರೆ ಅದು ಹನಿಮೂನ್.



BHARATHA SARATHI
KANNADA DAILY NEWS PAPER
# ಭಾರತ ಸಾರಥಿ
CALL 9740160669
RNI KARKAN2011/44806
ಸದಾ ನಿಮ್ಮೊಂದಿಗೆ ಕನ್ನಡ ದಿನಪತ್ರಿಕೆ



ಸಂಪಾದಕ
ಗಂಡಸಿ ಸದಾನಂದಸ್ವಾಮಿ



## ಭಾರತ ಸೇರಿ 5 ರಾಷ್ಟ್ರಗಳಿಗೆ ಹಾರ್ಮುಜ್ ಜಲಸಂಧಿ ಮುಕ್ತ

ಟೆಹ್ರಾನ್: ಪಶ್ಚಿಮ ಏಷ್ಯಾದಲ್ಲಿ ಉಲ್ಬಣಗೊಳ್ಳುತ್ತಿರುವ ಸಂಘರ್ಷದ ಮಧ್ಯೆ ಇರಾನ್ ಭಾರತಕ್ಕೆ ಗುಡ್ ನ್ಯೂಸ್ ನೀಡಿದೆ. ಇಂಧನ ಹಡಗುಗಳ ಸಾಗಾಟಕ್ಕೆ ನಿರ್ಣಾಯಕವಾಗಿರುವ ಹಾರ್ಮುಜ್ ಜಲಸಂಧಿಯೊಳಗೆ ಪ್ರವೇಶಿಸಲು ಭಾರತಕ್ಕೆ ಅನುಮತಿ ನೀಡಲಾಗಿದೆ. ವಿಶ್ವದ ತೈಲದ ಐದನೇ ಒಂದು ಭಾಗದಷ್ಟು ಹಡಗುಗಳ ಸಂಚಾರಕ್ಕೆ ಪ್ರಮುಖ ಮಾರ್ಗವಾಗಿರುವ ಪರ್ಷಿಯನ್ ಕೊಲ್ಲಿಯ ಕಿರಿದಾದ ಜಲಮಾರ್ಗವಾದ ಹಾರ್ಮುಜ್ ಜಲಸಂಧಿಯನ್ನು ಕಳೆದ ತಿಂಗಳು ಯುನೈಟೆಡ್ ಸ್ಟೇಟ್ಸ್ ಮತ್ತು ಇಸ್ರೇಲ್ ಇರಾನ್ ವಿರುದ್ಧ ಯುದ್ಧವನ್ನು ಪ್ರಾರಂಭಿಸಿದಾಗಿನಿಂದ ಇರಾನ್ ಬಂದ್ ಮಾಡಿತ್ತು.

ಇದೀಗ ಭಾರತ ಸೇರಿದಂತೆ ಇರಾನ್‌ನ 5 ಸ್ನೇಹಿತ ರಾಷ್ಟ್ರಗಳಿಗೆ ಹಾರ್ಮುಜ್ ಜಲಸಂಧಿಯನ್ನು ಪ್ರವೇಶಿಸಲು ಅನುಮತಿ ನೀಡಲಾಗಿದೆ. ಈ ಬಗ್ಗೆ ಇರಾನಿನ ರಾಜ್ಯ ಟಿವಿಯೊಂದಿಗೆ ಮಾತನಾಡಿದ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ,



"ಹಲವು ಹಡಗುಗಳ ಮಾಲೀಕರು ಅಥವಾ ಈ ಹಡಗುಗಳನ್ನು ಹೊಂದಿರುವ ದೇಶಗಳು ನಮ್ಮನ್ನು ಸಂಪರ್ಕಿಸಿ ಹಾರ್ಮುಜ್ ಜಲಸಂಧಿಯ ಮೂಲಕ ಸಂಚರಿಸಲು ಅನುಮತಿ ಪಡೆದಿದ್ದವು. ಅವರಿಗೆ ನಾವು ಸುರಕ್ಷಿತ ಮಾರ್ಗವನ್ನು ಒದಗಿಸಿದ್ದೇವೆ. ನಾವು ಸ್ನೇಹಪರ ರಾಷ್ಟ್ರಗಳೆಂದು ಪರಿಗಣಿಸುವ ಕೆಲವು ದೇಶಗಳಿಗೆ ಈ ಜಲಮಾರ್ಗವನ್ನು ಬಳಸಲು ಅನುಮತಿ ನೀಡಲಾಗಿದೆ" ಎಂದು ತಿಳಿಸಿದ್ದಾರೆ.

"ಚೀನಾ, ರಷ್ಯಾ, ಪಾಕಿಸ್ತಾನ, ಇರಾಕ್ ಮತ್ತು ಭಾರತದ ಎರಡು ಹಡಗುಗಳು ಕೆಲವು ರಾತ್ರಿಗಳ ಹಿಂದೆ ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋದವು. ಇನ್ನೂ ಕೆಲವು ದೇಶಗಳು ಕೂಡ ನಮ್ಮೊಂದಿಗೆ ಮಾತನಾಡಿ, ನಮ್ಮೊಂದಿಗೆ ಸಮನ್ವಯ ಸಾಧಿಸಿವೆ. ನಮ್ಮ ಜೊತೆ ಉತ್ತಮ ಬಾಂಧವ್ಯ ಹೊಂದಿರುವ ದೇಶಗಳಿಗೆ ಈ ಜಲಮಾರ್ಗ ಬಳಸಲು ಯಾವುದೇ ಅಡ್ಡಿಪಡಿಸುವುದಿಲ್ಲ. ಆದರೆ, ಶತ್ರು ದೇಶಗಳಿಗೆ ಹಾರ್ಮುಜ್ ಜಲಸಂಧಿಯೊಳಗೆ ಪ್ರವೇಶಿಸಲು ಅನುಮತಿ ನೀಡುವುದಿಲ್ಲ" ಎಂದು ಅವರು ಹೇಳಿದ್ದಾರೆ.

> "ಚೀನಾ, ರಷ್ಯಾ, ಪಾಕಿಸ್ತಾನ, ಇರಾಕ್ ಮತ್ತು ಭಾರತದ ಎರಡು ಹಡಗುಗಳು ಕೆಲವು ರಾತ್ರಿಗಳ ಹಿಂದೆ ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋದವು. ಇನ್ನೂ ಕೆಲವು ದೇಶಗಳು ಕೂಡ ನಮ್ಮೊಂದಿಗೆ ಮಾತನಾಡಿ, ನಮ್ಮೊಂದಿಗೆ ಸಮನ್ವಯ ಸಾಧಿಸಿವೆ. ನಮ್ಮ ಜೊತೆ ಉತ್ತಮ ಬಾಂಧವ್ಯ ಹೊಂದಿರುವ ದೇಶಗಳಿಗೆ ಈ ಜಲಮಾರ್ಗ ಬಳಸಲು ಯಾವುದೇ ಅಡ್ಡಿಪಡಿಸುವುದಿಲ್ಲ. ಆದರೆ, ಶತ್ರು ದೇಶಗಳಿಗೆ ಹಾರ್ಮುಜ್ ಜಲಸಂಧಿಯೊಳಗೆ ಪ್ರವೇಶಿಸಲು ಅನುಮತಿ ನೀಡುವುದಿಲ್ಲ" ಎಂದು ಅವರು ಹೇಳಿದ್ದಾರೆ.

ಪ್ರಸ್ತುತ ಬಿಕ್ಕಟ್ಟಿನಲ್ಲಿ ಪಾತ್ರವಹಿಸುವ ಅಮೆರಿಕ, ಇಸ್ರೇಲ್ ಮತ್ತು ಕೆಲವು ಗಲ್ಫ್ ರಾಷ್ಟ್ರಗಳ ಹಡಗುಗಳಿಗೆ ಹಾರ್ಮುಜ್ ಜಲಸಂಧಿಯ ಮೂಲಕ ಸಾಗಲು ಅನುಮತಿ ನೀಡಲಾಗುವುದಿಲ್ಲ ಎಂದು ಅವರು ಹೇಳಿದ್ದಾರೆ.

ಗಮನಿಸಬೇಕಾದ ವಿಷಯವೆಂದರೆ ಈ ವಾರದ ಆರಂಭದಲ್ಲಿ ಇರಾನ್ ಪಾಕಿಸ್ತಾನಕ್ಕೆ ಹೋಗುವ ಕಂಟೇನರ್ ಹಡಗನ್ನು ಹಾರ್ಮುಜ್ ಜಲಸಂಧಿಯನ್ನು ದಾಟದಂತೆ ತಡೆದಿತ್ತು. ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಪ್ರಕಾರ, ಯುನೈಟೆಡ್ ಅರಬ್ ಎಮಿರೇಟ್ಸ್‌ನ ಶಾರ್ಜಾದಿಂದ ಕರಾಚಿ ಕಡೆಗೆ ಪ್ರಯಾಣಿಸುತ್ತಿದ್ದ ಹಡಗು ಸಾಗಾಟಕ್ಕೆ ಅನುಮತಿ ಪಡೆಯದ ಕಾರಣದಿಂದ ಹಾರ್ಮುಜ್ ಜಲಮಾರ್ಗದ ಪ್ರವೇಶದ್ವಾರದಲ್ಲಿ ವಾಪಾಸ್ ತೆರಳಬೇಕಾಯಿತು.

ಹಾರ್ಮುಜ್ ಜಲಸಂಧಿಯು ವಿಶ್ವದ ಅತ್ಯಂತ ನಿರ್ಣಾಯಕ ಇಂಧನ ಕಾರಿಡಾರ್‌ಗಳಲ್ಲಿ ಒಂದಾಗಿದೆ. ಇದು ಸೌದಿ ಅರೇಬಿಯಾ, ಯುನೈಟೆಡ್ ಅರಬ್ ಎಮಿರೇಟ್ಸ್, ಕತಾರ್, ಕುವೈತ್, ಇರಾಕ್, ಬಹ್ರೇನ್ ಮತ್ತು ಇರಾನ್‌ನಂತಹ ದೇಶಗಳಿಂದ ಕಚ್ಚಾ ತೈಲ ಮತ್ತು ಎಲ್‌ಎನ್‌ಜಿ ರಫ್ತಿಗೆ ಅನುಕೂಲ ಮಾಡಿಕೊಡುತ್ತದೆ.

ಈ ಮಾರ್ಗದ ಮೂಲಕ ಸಂಚರಿಸುವ ಪ್ರಮುಖ ಗ್ರಾಹಕರಲ್ಲಿ ಭಾರತ, ಚೀನಾ, ಜಪಾನ್ ಮತ್ತು ದಕ್ಷಿಣ ಕೊರಿಯಾ ಸೇರಿವೆ. ಭಾರತವು ತನ್ನ ಕಚ್ಚಾ ತೈಲದ ಸುಮಾರು 40 ಪ್ರತಿಶತ ಮತ್ತು ಅದರ ಎಲ್‌ಎನ್‌ಜಿಯ ಶೇ. 54ಕ್ಕಿಂತ ಹೆಚ್ಚು ಈ ಜಲಮಾರ್ಗದ ಮೂಲಕ ಆಮದು ಮಾಡಿಕೊಳ್ಳುತ್ತದೆ.



ಶ್ರೀರಾಮನವಮಿ ಹಿನ್ನೆಲೆಯಲ್ಲಿ ಶ್ರೀರಾಮ ಜನ್ಮಭೂಮಿಯಾದ ಅಯೋಧ್ಯೆಯ ಶ್ರೀರಾಮ ಮಂದಿರ ದೇಗುಲ ಸಂಕೀರ್ಣದಲ್ಲಿ ದೇಗುಲದ ಮೇಲೆ ನವರಾತ್ರ ಹಿನ್ನೆಲೆಯಲ್ಲಿ ಕೇಸರಿ ಧ್ವಜ ಹಾರಿಸಿ ಧಾರ್ಮಿಕ ಆಚರಣೆಗಳಿಗೆ ಗುರುವಾರ ಚಾಲನೆ ನೀಡಲಾಯಿತು. ಇದೇ ವೇಳೆ ರಾಮಲಲ್ಲನಿಗೆ ಮಾಡಲಾಗಿದ್ದ ವಿಶಿಷ್ಟ ಅಲಂಕಾರ ಆಸ್ತಿಕರ ಭಾವಪರವಶತೆ ಇಂಬುಗೊಳಿಸಿತ್ತು.

## ಬಸ್ ದುರಂತ: 10 ಜನರು ಜೀವಂತ ದಹನ

ಮಾರ್ಕಾಪುರಂ: ಇತ್ತೀಚೆಗೆ ಖಾಸಗಿ ಬಸ್‌ಗಳಿಗೆ ಬೆಂಕಿ ಹೊತ್ತಿಕೊಳ್ಳುವ ಪ್ರಕರಣಗಳು ಹೆಚ್ಚಾಗಿದ್ದು, ಆಂಧ್ರಪ್ರದೇಶದಲ್ಲಿ ಅದೇ ರೀತಿಯ ಮತ್ತೊಂದು ಪ್ರಕರಣ ನಡೆದಿದೆ. ಆಂಧ್ರದ ಮಾರ್ಕಾಪುರಂ ಜಿಲ್ಲೆಯಲ್ಲಿ ಟಿಪ್ಪರ್ ಟ್ರಕ್ ಖಾಸಗಿ ಬಸ್‌ಗೆ ಡಿಕ್ಕಿ ಹೊಡೆದಿದೆ. ಇದರಿಂದ ಬಸ್ ಇದ್ದಕ್ಕಿದ್ದಂತೆ ಬೆಂಕಿಗೆ ಆಹುತಿಯಾಗಿ ಸಂಪೂರ್ಣವಾಗಿ ಸುಟ್ಟುಹೋಗಿದೆ. ಈ ಘಟನೆಯಲ್ಲಿ ಬಸ್‌ನೊಳಗಿದ್ದ 10 ಜನರು ಜೀವಂತವಾಗಿ ಸುಟ್ಟು ಕರಕಲಾಗಿದ್ದಾರೆ.

ಇನ್ನುಳಿದವರನ್ನು ರಕ್ಷಿಸಲಾಗಿದ್ದು, ತೀವ್ರವಾಗಿ ಗಾಯಗಳಾಗಿರುವ 18 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ ಬಗ್ಗೆ ಮಾಹಿತಿ ಪಡೆದ ನಂತರ ಪೊಲೀಸರು ಮತ್ತು ಅಗ್ನಿಶಾಮಕ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆ ಕೈಗೊಂಡರು. ಮಾರ್ಕಾಪುರಂ ಜಿಲ್ಲೆಯ ರಾಯವರಂ ಬಳಿಯ ಹಲಗೆ ಕ್ವಾರಿಗಳ ಬಳಿ ಈ ಭೀಕರ ಅಪಘಾತ ಸಂಭವಿಸಿದೆ. 18 ಗಾಯಾಳುಗಳನ್ನು ಹತ್ತಿರದ ಆಸ್ಪತ್ರೆಗಳಿಗೆ ಸ್ಥಳಾಂತರಿಸಲಾಗಿದೆ. ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆಯಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಹೈದರಾಬಾದ್‌ನಿಂದ ಪಾಮೂರ್‌ಗೆ ಹೋಗುತ್ತಿದ್ದ ಖಾಸಗಿ ಟ್ರಾವೆಲ್ ಬಸ್ ಮತ್ತು ಚಿಮಕುರ್ತಿಯಿಂದ ಜಲ್ಲಿಕಲ್ಲು ಸಾಗಿಸುತ್ತಿದ್ದ ಟಿಪ್ಪರ್ ಮುಖಾಮುಖಿ ಡಿಕ್ಕಿ ಹೊಡೆದ ಪರಿಣಾಮವಾಗಿ ಈ ಅಪಘಾತ ಸಂಭವಿಸಿದೆ ಎನ್ನಲಾಗಿದೆ. ಇದರಿಂದಾಗಿ ಬೆಂಕಿ ಹೊತ್ತಿಕೊಂಡು ಎರಡೂ ವಾಹನಗಳು ಸಂಪೂರ್ಣವಾಗಿ ಸುಟ್ಟುಹೋಗಿವೆ. ಹರಿಕೃಷ್ಣ ಖಾಸಗಿ ಟ್ರಾವೆಲ್ ಬಸ್‌ನಲ್ಲಿ ಸುಮಾರು 40 ಪ್ರಯಾಣಿಕರಿದ್ದರು ಎಂದು ತಿಳಿದುಬಂದಿದೆ. ಅವರಲ್ಲಿ 10 ಮಂದಿ ಸುಟ್ಟು ಕರಕಲಾಗಿದ್ದಾರೆ. 18 ಜನರನ್ನು ಗಂಭೀರ ಗಾಯಗಳೊಂದಿಗೆ ಆಸ್ಪತ್ರೆಗೆ ದಾಖಲಿಸಲಾಗಿದೆ. ಉಳಿದವರು ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ.

ಈ ಘಟನೆಯ ಬಗ್ಗೆ ಮಾಹಿತಿ ಪಡೆದ ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿಯನ್ನು ನಂದಿಸಿದರು. ಆದರೆ ನಿಯಂತ್ರಣಕ್ಕೆ ಬರುವ ಮೊದಲೇ ವಾಹನಗಳು ಸಂಪೂರ್ಣವಾಗಿ ಸುಟ್ಟುಹೋಗಿದ್ದವು. ಅಪಘಾತದಲ್ಲಿ ಸಾವನ್ನಪ್ಪಿದವರಲ್ಲಿ ಹೆಚ್ಚಿನವರು ಕಣಿಗಿರಿ ಮತ್ತು ಪಾಮೂರ್ ಪ್ರದೇಶದ ನಿವಾಸಿಗಳು ಎಂದು ತಿಳಿದುಬಂದಿದೆ.

## ಸದನದಲ್ಲಿ ಮುನಿ–ಡಿಕೆಶಿ ವಾರ್..!

ಬೆಂಗಳೂರು: ವಿಧಾನಸಭೆಯಲ್ಲಿ ಇಂದು ಡಿಸಿಎಂ ಡಿಕೆ ಶಿವಕುಮಾರ್ ಹಾಗೂ ಆರ್‌ಆರ್ ನಗರದ ಬಿಜೆಪಿ ಶಾಸಕ ಮುನಿರತ್ನ ನಡುವೆ ತೀವ್ರ ಮಾತಿನ ಚಕಮಕಿ ನಡೆಯಿತು.

ಬೆಂಗಳೂರಿನ ಅಭಿವೃದ್ಧಿಗೆ ಸಂಬಂಧಿಸಿದ ಚರ್ಚೆಗೆ ಉತ್ತರ ನೀಡುತ್ತಿರುವ ಸಂದರ್ಭದಲ್ಲಿ ಡಿಕೆಶಿ ಹಾಗೂ ಮುನಿರತ್ನ ನಡುವೆ ಆಕ್ಷೇಪಾರ್ಹ ಪದ ಬಳಕೆ ನಡೆಯಿತು. ಇದೇ ಸಂದರ್ಭದಲ್ಲಿ ಡಿಕೆಶಿ ಕುರಿತಾಗಿ ಆಡಿದ ಮಾತಿಗೆ ಕೆರಳಿದ ಕಾಂಗ್ರೆಸ್ ಶಾಸಕರು ಸದನದ ಬಾವಿಗಿಳಿದು ಧರಣಿ ನಡೆಸಿ ಮುನಿರತ್ನ ವಿರುದ್ಧ ಕ್ರಮಕ್ಕೆ ಆಗ್ರಹಿಸಿದರು. ಕೊನೆಗೂ ಸ್ಪೀಕರ್ ಯು.ಟಿ ಖಾದರ್ ಅವರು ಆಕ್ಷೇಪಾರ್ಹ ಪದಗಳನ್ನು ಸದನದ ಕಡತದಿಂದ ತೆಗೆದುಹಾಕುವಂತೆ ಸೂಚಿಸಿದರು.

ಮುನಿರತ್ನ ಕೇಸ್‌ಗಳ ಬಗ್ಗೆ ಮಾತನಾಡುವುದು ಬೇಕಾದಷ್ಟಿದೆ. ಆರ್.ಅಶೋಕ್‌ಗೆ ಹೇಗೆ ಏಡ್ಸ್ ಇಂಜೆಕ್ಷನ್ ಚುಚ್ಚೋಕ್ಕೆ ಹೋದರು ಎಂದು ಎಫ್‌ಐಆರ್ ಇದೆ. ಅದರ ಬಗ್ಗೆ ಚರ್ಚೆ ಮಾಡಬೇಕು ಅಂದರೆ ಮಾಡುತ್ತೇನೆ ಎಂದು ಡಿಕೆ ಹೇಳಿದರು.

ಇದರಿಂದ ರೊಚ್ಚಿಗೆದ್ದ ಮುನಿರತ್ನ, 'ಈ ವೇಳೆ ಎಲ್ಲವನ್ನೂ ಹೇಳಿ' ಎಂದು ಸವಾಲು ಹಾಕಿದರು. ಡಿಕೆ ಮಾತಿಗೆ ಅಶೋಕ್, ಅಶ್ವಥ್ ನಾರಾಯಣ್ ಆಕ್ಷೇಪ ವ್ಯಕ್ತಪಡಿಸಿದರು. ಆದರೆ ಮುನಿರತ್ನ ಚರ್ಚೆಗೆ ಪಟ್ಟು ಹಿಡಿದರು. ಹೀಗಾಗಿ ಸದನದಲ್ಲಿ ಭಾರಿ ಗದ್ದಲ ಉಂಟಾಯಿತು.

ಡಿಕೆಶಿ ಮಾತಿಗೆ ಕೆಂಡಾಮಂಡಲರಾದ ಮುನಿರತ್ನ, ಇವರಿಗೆ ಮೂರು ಮಕ್ಕಳಿವೆ ಅದನ್ನು ಮರೆಯಬೇಡಿ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದಕ್ಕೆ, ಹೇ ರೇಪಿಸ್ಟ್ ಕುಳಿತುಕೋ ಎಂದು ಡಿಕೆಶಿ ಕಿಡಿಕಾರಿದರು.

ವೈಯಕ್ತಿಕ ನಿಂದನೆ ಸರಿಯಲ್ಲ ಎಂದ ಕಾಂಗ್ರೆಸ್ ಶಾಸಕರು ಕೂಡಲೇ ಮುನಿರತ್ನರನ್ನು ಸದನದಿಂದ ಹೊರಗೆ ಹಾಕುವಂತೆ ಆಗ್ರಹಿಸಿದರು. ಸದನದ ಬಾವಿಗಿಳಿದು ಮುನಿರತ್ನ ವಿರುದ್ಧ ಕ್ರಮ ಆಗಬೇಕೆಂದು ಧರಣಿ ನಡೆಸಿದರು.

ಸಂವಿಧಾನದ 1950ನೇ (ಅನುಸೂಚಿತ ಜಾತಿ) ಆದೇಶದ ಕ್ಲಾಸ್ 3ರಡಿ ಎಸ್ಸಿ ಎಂದು ಪರಿಗಣಿಸಲ್ಪಟ್ಟ ವ್ಯಕ್ತಿಯಷ್ಟೇ ಸಂವಿಧಾನ, ಸಂಸತ್ತು ಅಥವಾ ವಿಧಾನಸಭೆಗಳು ಜಾರಿ ಮಾಡಿದ ಕಾನೂನಿನಡಿ ಶಾಸನಬದ್ಧ ಅನುಕೂಲಗಳು, ರಕ್ಷಣೆ ಅಥವಾ ಮೀಸಲಾತಿಗೆ ಅನರ್ಹನಾಗುತ್ತಾನೆ. ಯಾವುದೇ ವ್ಯಕ್ತಿ ತನ್ನನ್ನು ತಾನು ಪರಿಶಿಷ್ಟ ಜಾತಿಗೆ ಸೇರಿದವನು ಎಂದು ಕ್ಲೇಮ್ ಮಾಡಿಕೊಳ್ಳಬೇಕಿದ್ದರೆ ಆತ ಕ್ಲಾಸ್ 3ರಲ್ಲಿ ಹೇಳಲಾದ ಧರ್ಮಗಳನ್ನು ಪಾಲಿಸುವುದು ಕಡ್ಡಾಯ ಎಂದು ಕೋರ್ಟ್ ಹೇಳಿದೆ.


## ಹಿಂದೂ, ಸಿಖ್ ಅಥವಾ ಬೌದ್ಧ ಧರ್ಮಕಷ್ಟೇ ಎಸ್‌ಸಿ ಸ್ಥಾನ

ಬೆಂಗಳೂರು: ಹಿಂದೂ, ಸಿಖ್ ಅಥವಾ ಬೌದ್ಧ ಧರ್ಮ ಹೊರತು ಬೇರಿನ್ಯಾವುದೇ ಧರ್ಮಕ್ಕೆ ಮತಾಂತರಗೊಂಡ ವ್ಯಕ್ತಿ ಆ ಕ್ಷಣದಿಂದಲೇ ಪರಿಶಿಷ್ಟ ಜಾತಿಯ ಸ್ಥಾನಮಾನ ಕಳೆದುಕೊಳ್ಳುತ್ತಾನೆ.

ಅಂಥ ವ್ಯಕ್ತಿ ಎಸ್ಸಿ,ಎಸ್ಟಿ ಕಾಯ್ದೆಯಡಿ ಕಾನೂನಿನ ರಕ್ಷಣೆಯಾಗಲಿ, ಮೀಸಲಾತಿಯ ಲಾಭವನ್ನಾಗಲಿ ಪಡೆಯಲು ಅನರ್ಹನಾಗುತ್ತಾನೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಮಹತ್ವದ ತೀರ್ಪು ನೀಡಿದೆ.

ಈ ಕುರಿತು ಆಂಧ್ರಪ್ರದೇಶ ಹೈಕೋರ್ಟ್ ನೀಡಿದ್ದ ಆದೇಶವನ್ನು ಎತ್ತಿಹಿಡಿದ ನ್ಯಾ.ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ನ್ಯಾ. ಎನ್.ವಿ. ಅಂಜಾರಿಯಾ ಅವರಿದ್ದ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠವು ಈ ತೀರ್ಪು ನೀಡಿದೆ.

ಸಂವಿಧಾನದ 1950ನೇ (ಅನುಸೂಚಿತ ಜಾತಿ) ಆದೇಶದ ಕ್ಲಾಸ್ 3ರಡಿ ಎಸ್ಸಿ ಎಂದು



ಪರಿಗಣಿಸಲ್ಪಟ್ಟ ವ್ಯಕ್ತಿಯಷ್ಟೇ ಸಂವಿಧಾನ, ಸಂಸತ್ತು ಅಥವಾ ವಿಧಾನಸಭೆಗಳು ಜಾರಿ ಮಾಡಿದ ಕಾನೂನಿನಡಿ ಶಾಸನಬದ್ಧ ಅನುಕೂಲಗಳು, ರಕ್ಷಣೆ ಅಥವಾ ಮೀಸಲಾತಿಗೆ ಅನರ್ಹನಾಗುತ್ತಾನೆ. ಯಾವುದೇ ವ್ಯಕ್ತಿ ತನ್ನನ್ನು ತಾನು ಪರಿಶಿಷ್ಟ ಜಾತಿಗೆ ಸೇರಿದವನು ಎಂದು ಕ್ಲೇಮ್ ಮಾಡಿಕೊಳ್ಳಬೇಕಿದ್ದರೆ ಆತ ಕ್ಲಾಸ್ 3ರಲ್ಲಿ ಹೇಳಲಾದ ಧರ್ಮಗಳನ್ನು ಪಾಲಿಸುವುದು ಕಡ್ಡಾಯ ಎಂದು ಕೋರ್ಟ್ ಹೇಳಿದೆ.

ಆಂಧ್ರಪ್ರದೇಶ ಹೈಕೋರ್ಟ್ ಏ.30, 2025ರಂದು ನೀಡಿದ್ದ ತೀರ್ಪಿನಲ್ಲಿ, ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡು, ಅದನ್ನು ಪಾಲನೆ ಮಾಡಿಕೊಂಡು ಬಂದಿರುವ ವ್ಯಕ್ತಿ, ತಾನು ಎಸ್ಸಿ ಸಮುದಾಯಕ್ಕೆ ಸೇರಿದವನು ಎಂದು ಕ್ಲೇಮ್ ಮಾಡಿಕೊಳ್ಳಲು ಸಾಧ್ಯವಿಲ್ಲ. ಕ್ರಿಶ್ಚಿಯನ್ ಧರ್ಮದಲ್ಲಿ ಜಾತಿ ವ್ಯವಸ್ಥೆ ಇಲ್ಲ. ಹೀಗಾಗಿ ಎಸ್ಸಿ ಕಾಯ್ದೆ ಅನ್ವಯಿಸಲು ಸಾಧ್ಯವಿಲ್ಲ ಎಂದು ಹೇಳಿತ್ತು.

ಈ ಪ್ರಕರಣದಲ್ಲಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡು ಪಾಸ್ಟರ್ ಆಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯೊಬ್ಬರು ತಮ್ಮ ಮೇಲೆ ಹಲ್ಲೆ ನಡೆಸಿ, ಜಾತಿ ನಿಂದನೆ ಮಾಡಿದವರ ವಿರುದ್ಧ ಎಸ್ಸಿ,ಎಸ್ಟಿ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದರು. ಈ ಪ್ರಕರಣದ ವಿಚಾರಣೆ ವೇಳೆ ಆಂಧ್ರ ಹೈಕೋರ್ಟ್, ಆತನ ಕೇಸು ತಿರಸ್ಕರಿಸಿತ್ತು.

## ತಪ್ಪಿದ ವಿಮಾನ ದುರಂತ..?

ನವದೆಹಲಿ: ಲಂಡನ್‌ಗೆ ಹೊರಟಿದ್ದ ಏರ್ ಇಂಡಿಯಾ ವಿಮಾನವು ತಾಂತ್ರಿಕ ದೋಷದ ಹಿನ್ನೆಲೆ ದೆಹಲಿಗೆ ಹಿಂತಿರುಗಿದೆ. ವಿಮಾನವು ಸುಮಾರು 7 ಗಂಟೆಗಳ ಕಾಲ ಆಕಾಶದಲ್ಲೇ ಇದ್ದು, ಪ್ರಯಾಣಿಕರ ಸುರಕ್ಷತೆಯ ದೃಷ್ಟಿಯಿಂದ ಹಿಂದಿರುಗುವ ನಿರ್ಧಾರ ಕೈಗೊಳ್ಳಲಾಗಿದೆ.

ವಿಮಾನ ಸಂಖ್ಯೆ ಆಗಿದ್ದು, ಏರ್‌ಬಸ್ ಮಾದರಿಯ ವಿಮಾನವನ್ನು ಬಳಸಲಾಗಿತ್ತು. ದೆಹಲಿಯಿಂದ ಬೆಳಗ್ಗೆ ಸುಮಾರು 6 ಗಂಟೆಗೆ ಟೇಕ್ ಆಫ್ ಆದ ಮೇಲೆ ಹಾರುತ್ತಿರುವಾಗ ವಿಚಿತ್ರವಾದ ಶಬ್ದ ಕೇಳಿಸಿವೆ. ಇದರಿಂದಾಗಿ ಪೈಲಟ್ ವಾಪಸ್ ದೆಹಲಿಗೆ ಹಿಂದಿರುಗುವ ನಿರ್ಧಾರ ತೆಗೆದುಕೊಂಡಿದ್ದು, ಮಧ್ಯಾಹ್ನ ಸುಮಾರು 12:30 ಗಂಟೆಗೆ ದೆಹಲಿ ವಿಮಾನ ನಿಲ್ದಾಣಕ್ಕೆ ಸುರಕ್ಷಿತವಾಗಿ ಇಳಿದಿದೆ. ಒಂದೇ ತಿಂಗಳಲ್ಲಿ ಈ ವಿಮಾನದಲ್ಲಿ ಎರಡನೇ ಬಾರಿ ತಾಂತ್ರಿಕ ಸಮಸ್ಯೆ ಎದುರಾಗಿದೆ.

ಏರ್ ಇಂಡಿಯಾ ವಕ್ತಾರರ ಮಾಹಿತಿ ಪ್ರಕಾರ, ಸುರಕ್ಷತಾ ದೃಷ್ಟಿಯಿಂದ ವಿಮಾನ ಹಿಂದಿರುಗಿದೆ. ಪ್ರಸ್ತುತ ತಾಂತ್ರಿಕ ಪರಿಶೀಲನೆಗೆ ವಿಮಾನವನ್ನು ಒಳಪಡಿಸಲಾಗಿದೆ. ಇದಕ್ಕೆ ಹೆಚ್ಚುವರಿ ಸಮಯ ಬೇಕಾಗಬಹುದು ಎಂದಿದ್ದಾರೆ.

ಪ್ರಯಾಣಿಕರಿಗೆ ಉಂಟಾದ ಅನಾನು ಕೂಲತೆಗೆ ಏರ್ ಇಂಡಿಯಾ ವಿಷಾದ ವ್ಯಕ್ತಪಡಿಸಿದೆ. ಪ್ರಯಾಣಿಕರನ್ನು ಲಂಡನ್‌ಗೆ ತ್ವರಿತವಾಗಿ ಕಳುಹಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ವಿಮಾನ ಸಂಸ್ಥೆ ತಿಳಿಸಿದೆ.

## 2 ವರ್ಷದಲ್ಲಿ ಮೇಕೆದಾಟಿಗೆ ಶಂಕುಸ್ಥಾಪನೆ: ಡಿಕೆಶಿ ವಿಶ್ವಾಸ

ಬೆಂಗಳೂರು: "ಬೆಂಗಳೂರು ನಗರದ ಹಿತಕ್ಕೆ ನಾವು ಕೈಗೊಂಡಿರುವ ಅನೇಕ ತೀರ್ಮಾನಗಳ ಬಗ್ಗೆ ವಿರೋಧ ಪಕ್ಷದವರು ಟೀಕೆ ಮಾಡಬಹುದು, ಮಾಡಲಿ. ಆದರೆ ಮುಂದಿನ ಐದು ವರ್ಷಗಳ ನಂತರ ಡಿ.ಕೆ. ಶಿವಕುಮಾರ್ ಅವರು ಉತ್ತಮ ನಿರ್ಧಾರ ಕೈಗೊಂಡರು ಎಂದು ಹೇಳುತ್ತಾರೆ. ನನಗೆ ಅಷ್ಟೇ ಸಾಕು. ಈಗ ನಾನು ಬೇರೆಯವರಿಗೆ ಒಪ್ಪಿಸಲು ಆಗದೇ ಇರಬಹು, ಆದರೆ ಸಮಯ ಬಂದಾಗ ಅವರು ಒಪ್ಪುತ್ತಾರೆ" ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ವಿರೋಧ ಪಕ್ಷಗಳ ನಾಯಕರಿಗೆ ತಿರುಗೇಟು ನೀಡಿದರು.

ವಿಧಾನಸಭೆಯಲ್ಲಿ ಗ್ರೇಟರ್ ಬೆಂಗಳೂರು ವಿಚಾರವಾಗಿ ನಡೆದ ಚರ್ಚೆಗೆ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಗುರುವಾರ ಉತ್ತರಿಸಿದರು.

"ಜಿಬಿಎ ಸಂಬಂಧಿಸಿದಂತೆ ವಿರೋಧ ಪಕ್ಷದ ನಾಯಕರು ಅನೇಕ ಚರ್ಚೆ ನಡೆಸಿದ್ದಾರೆ. ಅರ್.ಅಶೋಕ್ ಅವರು ಅಶ್ವಥ್ ನಾರಾಯಣ್ ಅವರು ಅನೇಕ ಸಲಹೆಗಳನ್ನು ನೀಡಿದ್ದಾರೆ. ಇವರ ಸಲಹೆಗಳನ್ನು ನಾನು ಒಪ್ಪುತ್ತೇನೆ. ಜೊತೆಗೆ ಟೀಕೆಯನ್ನೂ ಸಹ ಮಾಡಿದ್ದಾರೆ. ನಾನು ಟೀಕೆಯನ್ನು ಯಾವಾಗಲೂ ಸ್ವೀಕಾರ ಮಾಡುವವನು. ಟೀಕೆ ಇಲ್ಲದೇ ಹೋದರೆ ಯಾವುದೇ ಮನುಷ್ಯನನ್ನು ಬದಲಾವಣೆ ಮಾಡಲು ಸಾಧ್ಯವಿಲ್ಲ. ಚಿನ್ನ ಪರೀಕ್ಷೆ ಮಾಡುವಾಗ ಬೆಂಕಿಗೆ ಹಾಕುತ್ತಾರೆ. ಮನುಷ್ಯನನ್ನು ಪರೀಕ್ಷೆ ಮಾಡುವಾಗ ಟೀಕೆಗಳು, ಆಪಾದನೆ ಮಾಡುತ್ತಾರೆ. ಇದನ್ನು ನಾವು ಯಾವ ರೀತಿ ತಿದ್ದಿಕೊಳ್ಳಬೇಕು ಎಂಬುದು ಇಲ್ಲಿ ಮುಖ್ಯವಾದುದು. ಟೀಕೆ ಮಾಡಿದರು ಎಂದ ತಕ್ಷಣ ನಾನು ಸಿಟ್ಟು ಮಾಡಿಕೊಳ್ಳುವುದು ಮಾಡುವುದಿಲ್ಲ" ಎಂದರು.

ಈ ಸದನದಲ್ಲಿ ಈ ಹಿಂದೆ ಇದ್ದ ನಾಯಕರಾದ ಬಂಗಾರಪ್ಪ, ಕಾಗೋಡು ತಿಮ್ಮಪ್ಪ, ಲಕ್ಕಪ್ಪ, ಮೇಲ್ಮನೆಯಲ್ಲಿ ನಾಣಯ್ಯ, ಎಕೆ ಸುಬ್ಬಯ್ಯ, ಎಂ.ಸಿ ನಾಣಯ್ಯ ಸೇರಿದಂತೆ ಅನೇಕರು ಚೆನ್ನಾಗಿ ಚರ್ಚೆ ಮಾಡುತ್ತಿದ್ದರು. ಆಗಿನ ಚರ್ಚೆಸಕಾರಾತ್ಮಕವಾಗಿ ನಡೆಯುತ್ತಿತ್ತು.



ಚರ್ಚೆ ಈಗ ನಕರಾತ್ಮಕವಾಗಿ ಹೋಗುತ್ತಿದೆ. "ಕುಮಾರಸ್ವಾಮಿ ಅವರಿಗೆ ಇದೇ ಸದನದಲ್ಲಿ ಒಮ್ಮೆ ಡಿವಿಜಿ ಅವರ ಸಾಲುಗಳನ್ನು ಹೇಳಿದ್ದೆ. ಎದ್ದೆದ್ದು ಬೀಳುತಿಹೆ ಗುದ್ದಾಡಿ ಸೋಲುತಿಹೆ ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ, ಜಗವನ್ನು ಉದ್ಧರಿಸುವೆ ಎನುತಿಹೆ ಸಖನೇ ನಿನ್ನ ಉದ್ಧಾರ ಎಷ್ಟಾಯಿತೋ ಮಂಕುತಿಮ್ಮ ಎನ್ನುವ ಮಾತು ವಿರೋಧ ಪಕ್ಷದ ನಾಯಕರ ಮಾತು ಕೇಳಿ ನೆನಪಿಗೆ ಬಂತು. ನಾನು ಬೆಂಗಳೂರು ಅಭಿವೃದ್ಧಿ ಇಲಾಖೆ ಜವಾಬ್ದಾರಿ ಹೊತ್ತುಕೊಂಡ ಮೇಲೆ ಸಾಕಷ್ಟು ಅಧ್ಯಯನ ನಡೆಸಿದ್ದೇನೆ. ಬೆಂಗಳೂರಿನ ಸಮಸ್ಯೆಗಳಿಗೆ ಪರಿಹಾರ ಹುಡುಕುತ್ತಿದ್ದೇನೆ. ಆಗ 70 ಲಕ್ಷ ಇದ್ದ ಜನಸಂಖ್ಯೆ ಈಗ 1.40 ಕೋಟಿ ಆಗಿದೆ. 1.30 ಲಕ್ಷ ವಾಹನಗಳಿವೆ. ಬೇರೆ ನಗರಗಳಲ್ಲಿ ದೊಡ್ಡ ರಸ್ತೆಗಳು ಶೇ.16 ರಷ್ಟಿವೆ. ನಮ್ಮಲ್ಲಿ ಶೇ. 8 ರಷ್ಟು ಮಾತ್ರ ಇದೆ. ಈ ಹಿಂದೆ ನೈಸ್ ರಸ್ತೆ ಮಾಡಿದರೂ ಪೂರ್ಣಗೊಳಿಸಲಿಲ್ಲ. ಫೆರಿಫೆರಲ್ ರಿಂಗ್ ರಸ್ತೆ ಅಂದು ಮಾಡಿದ್ದರೆ 3 ಸಾವಿರ ಕೋಟಿಗೆ ಮುಗಿದು ಹೋಗುತ್ತಾ ಇತ್ತು. ಈ ಎಲ್ಲಾ ಕಾರಣಗಳಿಂದ ಸಂಚಾರ ದಟ್ಟಣೆ ಉಂಟಾಗಿದೆ" ಎಂದರು.

"ಬೆಂಗಳೂರು ನಗರದ ಆಡಳಿತ ಸುಧಾರಣೆಗಾಗಿ 2025 ಮೇ 15 ರಂದು ಹೊಸ ನೋಟಿಫಿಕೇಶನ್ ಮಾಡಿ ಪ್ರಸ್ತುತ ಇರುವ ಪ್ರದೇಶಗಳನ್ನು ಸೇರಿ ಐದು ಪಾಲಿಕೆಗಳನ್ನು ಮಾಡಲಾಯಿತು. ಸೆಪ್ಟೆಂಬರ್ 2 ರಂದು 74 ನೇ ತಿದ್ದುಪಡಿ ತರಬೇಕು ಎಂದು ಹೊರಡಲಾಯಿತು. ಏಕಾಏಕಿ ತೀರ್ಮಾನ ಮಾಡಲಿಲ್ಲ. ವಿರೋಧ ಪಕ್ಷದ ನಾಯಕರ ಮಾತಿನಂತೆ ಸದನ ಸಮತಿ ರಚನೆ ಮಾಡಿ ಅವರು ನೀಡಿದ ಸಲಹೆಗಳನ್ನು ತೆಗೆದುಕೊಳ್ಳಲಾಯಿತು. ಇದರಲ್ಲಿ ತಪ್ಪುಗಳಿದ್ದರೆ ಅದನ್ನೂ ಸಹ ತಿದ್ದುಪಡಿ ಮಾಡಲಾಗುವುದು. ಈಗ 369 ವಾರ್ಡ್ ಗಳನ್ನು ಮಾಡಲಾಗಿದೆ. ಬೆಂಗಳೂರನ್ನು ಯಾವುದೇ ಕಾರಣಕ್ಕೂ ಒಡೆಯುತ್ತಿಲ್ಲ. ಇದು ಆಡಳಿತದ ವಿಕೇಂದ್ರಿಕರಣ. ಬೆಂಗಳೂರಿನಲ್ಲಿ ದೊಡ್ಡ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ ಅದಕ್ಕೆ ಸರ್ಕಾರ ಸಹಾಯ ಬೇಕುತ್ತದೆ ಅದಕ್ಕೆ ಜಿಬಿಎಗೆ ಮುಖ್ಯಮಂತ್ರಿಯವರನ್ನು ಮುಖ್ಯಸ್ಥರನ್ನಾಗಿ ಮಾಡಲಾಗಿದೆ ಎಂದರು.

ಭಾರತ ಸಾರಥಿ
27/03/2026
BHARATHA SARATHI KANNADA DAILY NEWS PAPER
ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

## ಟಾಟಾ ಇವಿ ಶೆಲ್ ಮೆಗಾ ಚಾರ್ಜಿಂಗ್ ಹಬ್ ಆರಂಭ

ಮಂಗಳೂರು/ಮೈಸೂರು

ಲಭ್ಯವಿರುವ, ವೇಗವಾದ ಹಾಗೂ ವಿಶ್ವಾಸಾರ್ಹ ಚಾರ್ಜಿಂಗ್ ನೆಟ್‌ವರ್ಕ್ ನಿರ್ಮಿಸುವ ತನ್ನ ಧ್ಯೇಯದ ಭಾಗವಾಗಿ, ಭಾರತದ ಅತಿದೊಡ್ಡ ನಾಲ್ಕು ಚಕ್ರದ ಎಲೆಕ್ಟ್ರಿಕ್ ವಾಹನ ತಯಾರಕ ಟಾಟಾ ಇವಿ, ಶೆಲ್ ಇಂಡಿಯಾ ಮೊಬಿಲಿಟಿ ಜೊತೆ ಕೈಜೋಡಿಸಿ ಮಂಗಳೂರು–ಮೈಸೂರು ಹೆದ್ದಾರಿಯ ಹುಣಸೂರಿನಲ್ಲಿ ಹೊಸ ಟಾಟಾ ಇವಿ ಥ ಶೆಲ್ ಮೆಗಾ ಚಾರ್ಜಿಂಗ್ ಹಬ್ ಅನ್ನು ಆರಂಭಿಸಿದೆ.

ಈ ಚಾರ್ಜಿಂಗ್ ಹಬ್‌ಗಳು ಬೆಂಗಳೂರು, ಚೆನ್ನೈ, ಮೈಸೂರು, ಪುಣೆ ಹಾಗೂ ವಡೋದರ ನಗರಗಳಲ್ಲಿ ಸ್ಥಾಪಿಸಲಾಗುತ್ತಿರುವ 21 ಹೊಸ ಟಾಟಾ ಇವಿ ಶೆಲ್ ಮೆಗಾ ಚಾರ್ಜಿಂಗ್ ಹಬ್‌ಗಳ ಭಾಗವಾಗಿವೆ. ಇವುಗಳಲ್ಲಿ 120 ಕಿಲೋವ್ಯಾಟ್ ಸಾಮರ್ಥ್ಯದ ವೇಗದ ಚಾರ್ಜರ್‌ಗಳನ್ನು ಅಳವಡಿಸಲಾಗಿದೆ.

ಕನಿಷ್ಠ ಕಾಯುವ ಸಮಯದಲ್ಲಿ ತ್ವರಿತ ಹಾಗೂ ವಿಶ್ವಾಸಾರ್ಹ ಚಾರ್ಜಿಂಗ್ ಸೌಲಭ್ಯ ಒದಗಿಸುತ್ತವೆ.

ಇವಿ ಬಳಕೆದಾರರಿಗೆ ಉತ್ತಮ ಅನುಭವ ಕಲ್ಪಿಸಲು, ಚಾರ್ಜಿಂಗ್ ಪ್ರಕ್ರಿಯೆಯ ಬಗ್ಗೆ ಯಾವುದೇ ಪ್ರಶ್ನೆಗಳಿಗೆ ಸಹಾಯ ಮಾಡಲು ಮಾನವ ಮಾರ್ಷಲ್‌ಗಳ ವ್ಯವಸ್ಥೆ ಮಾಡಲಾಗಿದೆ.

ಜೊತೆಗೆ, ಶೆಲ್ ಸೆಲೆಕ್ಟ್ ಮತ್ತು ಡೆಲಿ2ಗೋ ಮಳಿಗೆಗಳಲ್ಲಿ ತಾಜಾ ಆಹಾರ, ಪಾನೀಯಗಳು ಹಾಗೂ ಸ್ವಚ್ಛ ವಿಶ್ರಾಂತಿ ಕೊಠಡಿಗಳ ಸೌಲಭ್ಯವೂ ಲಭ್ಯವಿದೆ.

ಇದಲ್ಲದೆ, ಟಾಟಾ ಎಲೆಕ್ಟ್ರಿಕ್ ವಾಹನಗಳ ಮಾಲೀಕರಿಗಾಗಿ ವಿಶೇಷವಾಗಿ ಸಿದ್ಧಪಡಿಸಲಾದ ಆಹಾರ ಮತ್ತು ಪಾನೀಯಗಳ ವಿಶೇಷ ಕೊಡುಗೆಗಳನ್ನು ಮಳಿಗೆಗಳಲ್ಲಿ ನೀಡಲಾಗುತ್ತಿದೆ.

ಈ ಉಪಕ್ರಮವು ಮಂಗಳೂರು–ಮೈಸೂರು ಮಾರ್ಗದಲ್ಲಿ ಎಲೆಕ್ಟ್ರಿಕ್ ವಾಹನಗಳ ಬಳಕೆಯನ್ನು ಮತ್ತಷ್ಟು ಉತ್ತೇಜಿಸುವುದರ ಜೊತೆಗೆ, ಹಸಿರು ಸಾರಿಗೆ ವ್ಯವಸ್ಥೆಗೆ ಮಹತ್ವದ ಉತ್ತೇಜನ ನೀಡಲಿದೆ.

## ಅಸ್ಸಾಂನಲ್ಲಿ ಗೆಲುವು ಖಚಿತ ಎಂದ ಶಿವಕುಮಾರ್

ಬೆಂಗಳೂರು

ಡಬ್ಲ್ಯೂಐಟಿಟಿ ಸಬ್‌ಮಿಟ್ 2026ಕಾರ್ಯಕ್ರಮದಲ್ಲಿ ಮಾತನಾಡಿದ ಡಿ.ಕೆ.ಶಿವಕುಮಾರ್ ಅವರು, ಪಕ್ಷದ ಸೈನಿಕನಾಗಿ ಯಾವಾಗ ಬೇಕಾದರೂ ಹೋರಾಡುವುದು ತನ್ನ ಕರ್ತವ್ಯ ಎಂದು ಹೇಳಿದರು. "ಸೈನಿಕನಂತೆ ಆಯಾಸವಾಗಿದ್ದರೂ ಹೋರಾಟ ನಿಲ್ಲುವುದಿಲ್ಲ. ದೇಶ ಮತ್ತು ಪಕ್ಷಕ್ಕಾಗಿ ಹೋರಾಟ ಮುಂದುವರಿಸಲೇಬೇಕು" ಎಂದು ಅವರು ಅಭಿಪ್ರಾಯಪಟ್ಟರು.

ತಮ್ಮ ವಿರುದ್ಧದ ಆರೋಪಗಳನ್ನು ಅವರು ರಾಜಕೀಯ ಪ್ರತೀಕಾರ ಎಂದು ತಳ್ಳಿಹಾಕಿ, ಸುಮಾರು 70 ಸ್ಥಳಗಳಲ್ಲಿ ನಡೆದ ದಾಳಿಗಳಲ್ಲಿಯೂ ಯಾವುದೇ ಮಹತ್ವದ ಸಾಕ್ಷ್ಯ ಸಿಕ್ಕಿಲ್ಲ ಎಂದು ತಿಳಿಸಿದರು. "ನ್ಯಾಯ



ಪ್ರಕ್ರಿಯೆ ನನ್ನನ್ನು ಮುಕ್ತಗೊಳಿಸಿದೆ. ನನ್ನ ಕುಟುಂಬಕ್ಕೆ ಅನಗತ್ಯ ತೊಂದರೆ ಉಂಟಾಯಿತು, ಆದರೆ ನಾವು ತಪ್ಪೇನೂ ಮಾಡಿಲ್ಲ" ಎಂದು ಹೇಳಿದರು.

ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಪುನರುಜ್ಜೀವನಗೊಳ್ಳಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ ಅವರು, ಅಸ್ಸಾಂ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಲಿದೆ ಎಂದು ಹೇಳಿದರು.

ಇದೇ ವೇಳೆ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ ಅವರು, "ಆಪರೇಷನ್ ಲೋಟಸ್" ಮೂಲಕ ರಾಜಕೀಯ ಪಕ್ಷಭೇದಗಳನ್ನು ಪ್ರೋತ್ಸಾಹಿಸುತ್ತಿದ್ದಾರೆ ಎಂದು ಆರೋಪಿಸಿದರು.

ಕರ್ನಾಟಕ ಹಾಗೂ ಮಹಾರಾಷ್ಟ್ರದ ರಾಜಕೀಯ ಬೆಳವಣಿಗೆಗಳನ್ನು ಉದಾಹರಣೆಯಾಗಿ ಉಲ್ಲೇಖಿಸಿದರು

## ಪಿಜನ್‌ನಿಂದ ನೂತನ ಎಲೆಕ್ಟ್ರಿಕ್ ಶಾವಿಗೆ ಮೇಕರ್ ಬಿಡುಗಡೆ




ಬೆಂಗಳೂರು

ಭಾರತದ ಪ್ರಮುಖ ಅಡುಗೆ ಉಪಕರಣಗಳ ತಯಾರಕ ಕಂಪನಿಯಾದ 'ಸ್ಟವ್‌ಕ್ರಾಫ್ಟ್ ಲಿಮಿಟೆಡ್', ತನ್ನ ಜನಪ್ರಿಯ 'ಪಿಜನ್' ಬ್ರ್ಯಾಂಡ್‌ನಡಿ ಹೊಸ 'ಪಿಜನ್ ಎಲೆಕ್ಟ್ರಿಕ್ ಶಾವಿಗೆ ಮೇಕರ್' ಅನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಈ ಬಹುಮುಖಿ ವಿದ್ಯುತ್ ಚಾಲಿತ ಸಾಧನವನ್ನು ಬಳಸಿಕೊಂಡು ಮುರುಕು, ಶಾವಿಗೆ, ಚಕ್ಲಿ, ಸೇವಿಯ, ನೂಡಲ್ಸ್ ಹಾಗೂ ಸ್ಪಾಗೆಟ್ಟಿಯಂತಹ ಜನಪ್ರಿಯ ತಿನಿಸುಗಳನ್ನು ಅತ್ಯಂತ ಸುಲಭವಾಗಿ ಮತ್ತು ವೇಗವಾಗಿ ತಯಾರಿಸಬಹುದು.

ಸಾಂಪ್ರದಾಯಿಕವಾಗಿ ಕೈಯಿಂದ ತಿರುಗಿಸಿ ಶಾವಿಗೆ ಅಥವಾ ಮುರುಕು ಮಾಡುವ ಸಾಧನಗಳು ಹೆಚ್ಚು ಶ್ರಮ ಹಾಗೂ ಸಮಯವನ್ನು ಬೇಡುತ್ತಿದ್ದವು. ಇದರಿಂದಾಗಿ ಇಂತಹ ತಿನಿಸುಗಳನ್ನು ಕೇವಲ ವಿಶೇಷ ಹಬ್ಬ–ಹರಿದಿನಗಳಲ್ಲಿ ಮಾತ್ರ ಮಾಡುವಂತಾಗಿತ್ತು. ಆದರೆ, ಆಧುನಿಕ ಗೃಹಣಿಯರ ಕೆಲಸವನ್ನು ಹಗುರ ಮಾಡಲು ಬಂದಿರುವ ಈ ಹೊಸ ಎಲೆಕ್ಟ್ರಿಕ್ ಸಾಧನವು ಹಳೆಯ ವಿಧಾನಗಳಿಗೆ ತ್ವರಿತ ಹಾಗೂ ಅನುಕೂಲಕರ ಪರ್ಯಾಯ.

ಆಧುನಿಕ ಜೀವನಶೈಲಿಗೆ ತಕ್ಕಂತೆ ವಿನ್ಯಾಸಗೊಳಿಸಲಾದ ಈ ಬ್ಯಾಟರಿ ಚಾಲಿತ ಸಾಧನವು, 'ಟ್ರಿಗ್ಗರ್–ಪ್ರೆಸ್' (ಒತ್ತುವ) ಕಾರ್ಯಾಚರಣೆ ಹಾಗೂ 'ಟೈಪ್–ಸಿ' ಚಾರ್ಜಿಂಗ್ ಸೌಲಭ್ಯವನ್ನು ಹೊಂದಿದೆ. ಯಾವುದೇ ದೈಹಿಕ ಶ್ರಮವಿಲ್ಲದೆ, ನಿಖರವಾದ ಆಕಾರದೊಂದಿಗೆ ಸಾಂಪ್ರದಾಯಿಕ ರುಚಿಯನ್ನು ಉಳಿಸಿಕೊಳ್ಳಲು ಇದು ನೆರವಾಗುತ್ತದೆ. (ಗಮನಿಸಿ: ಇದೇ ಉತ್ಪನ್ನವನ್ನು ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ 'ಪಿಜನ್ ಮುರುಕುಳು ಮೇಕರ್' ಎಂಬ ಹೆಸರಿನಲ್ಲಿ ಬಿಡುಗಡೆ ಮಾಡಲಾಗಿದೆ).

## 4ನೇ ಆವೃತ್ತಿಯ ಐಐಜೆಎಸ್ ಭಾರತ್ ತೃತೀಯ 2026 ಯಶಸ್ವಿ ಸಮಾರೋಪ

ಬೆಂಗಳೂರು

ರತ್ನ ಮತ್ತು ಆಭರಣ ರಫ್ತು ಉತ್ತೇಜನಾ ಮಂಡಳಿ (ಜಿಜೆಇಪಿಸಿ) ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ (ಬಿಐಇಸಿ) ಆಯೋಜಿಸಿದ್ದ 4ನೇ ಆವೃತ್ತಿಯ ಆಭರಣ ಪ್ರದರ್ಶನ ಮೇಳವಾದ 'ಐಐಜೆಎಸ್ ಭಾರತ್ ತೃತೀಯ 2026' ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಸಮಾರೋಪಗೊಂಡಿದೆ.

ಈ ಬಾರಿಯ ಪ್ರದರ್ಶನ ಕಾರ್ಯಕ್ರಮವು ದೊಡ್ಡ ಮಟ್ಟದಲ್ಲಿ ಆಯೋಜನೆಗೊಂಡಿದ್ದು, 1,100ಕ್ಕೂ ಹೆಚ್ಚು ಪ್ರದರ್ಶಕರು ಮತ್ತು 1,900 ಮಳಿಗೆಗಳು ಭಾಗವಹಿಸಿದ್ದವು. ಭಾರತದ 500 ನಗರಗಳು ಹಾಗೂ ವಿದೇಶದ 40 ರಾಷ್ಟ್ರಗಳಿಂದ ಸುಮಾರು 15,000 ವ್ಯಾಪಾರ ಖರೀದಿದಾರರು ಈ ಮೇಳಕ್ಕೆ ಭೇಟಿ ನೀಡಿದರು. ಈ ಮೂಲಕ ಈ ಪ್ರದರ್ಶನ ಕಾರ್ಯಕ್ರಮವು ಭಾರತದ ಮೂರನೇ ಅತಿದೊಡ್ಡ 'ಬಿ2ಬಿ' ಆಭರಣ ಪ್ರದರ್ಶನ ಎಂಬ ತನ್ನ ಸ್ಥಾನವನ್ನು ಮತ್ತಷ್ಟು ಗಟ್ಟಿಗೊಳಿಸಿಕೊಂಡಿದೆ.

ಕೇವಲ ನಾಲ್ಕು ಆವೃತ್ತಿಗಳಲ್ಲಿ ಈ ಪ್ರದರ್ಶನವು ಈ ಮಟ್ಟಿಗೆ ವೇಗದ ಬೆಳವಣಿಗೆ ಹೊಂದಿರುವುದು,




ಈ ಪ್ರದರ್ಶನವು ಜಾಗತಿಕ ಮಟ್ಟದ ಪ್ರಮುಖ ವ್ಯಾಪಾರ ಕೇಂದ್ರವಾಗಿ ಮತ್ತು ಅಂತಾರಾಷ್ಟ್ರೀಯ ರತ್ನ ಹಾಗೂ ಆಭರಣ ಪ್ರದರ್ಶನ ಕಾರ್ಯಕ್ರಮವಾಗಿ ಹೊರಹೊಮ್ಮಿರುವುದನ್ನು ಸಾಬೀತುಪಡಿಸಿದೆ.

ಆ ಕಾರ್ಯಕ್ರಮದ ಯಶಸ್ಸಿನ ಕುರಿತು ಮಾತನಾಡಿದ ಜಿಜೆಇಪಿಸಿ ಅಧ್ಯಕ್ಷರಾದ ಶ್ರೀ ಕಿರೀಟ್ ಭನ್ಸಾಲಿ ಅವರು, "ಐಐಜೆಎಸ್ ಭಾರತ್ ತೃತೀಯ ಕಾರ್ಯಕ್ರಮದ 4ನೇ ಆವೃತ್ತಿಯು ನಮ್ಮ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿದೆ. ಜಾಗತಿಕ ಮಾರುಕಟ್ಟೆಯ ಏರಿಳಿತಗಳ ನಡುವೆಯೂ ಭಾರತದ ರತ್ನ ಮತ್ತು ಆಭರಣ ಕ್ಷೇತ್ರವು ಹೊಸತನ ಮತ್ತು ಕುಶಲಕರ್ಮಿತನದ ವಿಚಾರದಲ್ಲಿ ದಾರಿದೀಪವಾಗಿ ಮುಂದುವರಿದಿದೆ ಎಂಬುದನ್ನು ಇದು ಸಾಬೀತುಪಡಿಸಿದೆ. ಬೆಂಗಳೂರಿಗೆ 15,000ಕ್ಕೂ ಹೆಚ್ಚು ಜಾಗತಿಕ ಮಟ್ಟದ ಖರೀದಿದಾರರನ್ನು ಕರೆತರುವ ಮೂಲಕ, ನಾವು ಕೇವಲ ವ್ಯವಹಾರದ ವೇದಿಕೆಯನ್ನಷ್ಟೇ ಅಲ್ಲದೆ, ಭವಿಷ್ಯದ ಬೆಳವಣಿಗೆಗೆ ಪೂರಕವಾದ ಸುಸ್ಥಿರ ಪರಿಸರ ವ್ಯವಸ್ಥೆಯನ್ನು ನಿರ್ಮಿಸಿದ್ದೇವೆ. ಇಲ್ಲಿ ಕಂಡುಬಂದ ಹುಮ್ಮಸ್ಸು ನಮ್ಮ ಉದ್ಯಮವು ಹೊಸ ಆವಿಷ್ಕಾರಗಳ ಮೂಲಕ ನಿರಂತರವಾಗಿ ಬೆಳಗುತ್ತಿದೆ ಎಂಬುದನ್ನು ತೋರಿಸುತ್ತದೆ. ಇದು ಮುಂದಿನ ವರ್ಷದ ವ್ಯವಹಾರದ ಬಗ್ಗೆ ಇಡೀ ಸಮುದಾಯದಲ್ಲಿ ಹೊಸ ಆತ್ಮವಿಶ್ವಾಸವನ್ನು ತುಂಬಿದೆ," ಎಂದು ಹರ್ಷ ವ್ಯಕ್ತಪಡಿಸಿದರು.

## ಮೊಳಕಾಲ್ಮೂರಿನಲ್ಲಿ ಕಲ್ಲುಗಣಿಗಾರಿಕೆ ವಿರೋಧಿಸಿ ರೈತಸಂಘ ಪ್ರತಿಭಟನೆ

ಚಿತ್ರದುರ್ಗ

ಮೊಳಕಾಲ್ಮೂರು ತಾಲ್ಲೂಕು ಮರ್ಲಹಳ್ಳಿಯಲ್ಲಿ ಕಲ್ಲು ಗಣಿಗಾರಿಕೆಗೆ ಅನುಮತಿ ನೀಡುವ ಷಡ್ಯಂತರ ನಡೆಸಲಾಗು ತ್ತಿದೆ ಎಂದು ಆರೋಪಿಸಿ ರೈತಸಂಘ–ಹಸಿರು ಸೇನೆ ಕಾರ್ಯಕರ್ತರು ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಜಿಲ್ಲಾಧಿಕಾರಿ ಕಚೇರಿ ಬಳಿ ಮುಷ್ಕರ ನಡೆಸಿದ ನೂರಾರು ಕಾರ್ಯಕರ್ತರು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಕೂಡಲೇ ಜಿಲ್ಲಾಡಳಿತ ಗಣಿಗಾರಿಕೆಗೆ ಅನುಮತಿ ನೀಡುವುದಿಲ್ಲವೆಂಬ ಆದೇಶ ಹೊರಡಿಸಬೇಕು. ಇಲ್ಲದಿದ್ದರೆ ಮೊಳಕಾಲ್ಮೂರು ತಾಲ್ಲೂಕಿನಲ್ಲ ಹಾದು ಹೋಗಿರುವ ಹೆದ್ದಾರಿಗಳ ಬಂದ್ ಚಳವಳಿ, ತಾಲ್ಲೂಕು, ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಕಾರ್ಯಕ್ರಮ ಹಮ್ಮಿಕೊಳ್ಳಬೇಕಾಗುತ್ತದೆ. ಇದಕ್ಕೆ ಆಡಳಿತ ವರ್ಗ ಅವಕಾಶ ನೀಡಬಾರದು ಎಂದು ರೈತಮುಖಂಡರು ಕೋರಿದರು.

ಸಂಘದ ರಾಜ್ಯ ಕಾರ್ಯಾಧ್ಯಕ್ಷ ಬೇಡರೆಡ್ಡಿಹಳ್ಳಿ ಬಸವರೆಡ್ಡಿ ಮಾತನಾಡಿ, ಬಯಲುಸೀಮೆ ಪ್ರದೇಶದಲ್ಲಿ ಗುಡ್ಡಗಾಡು ಪ್ರದೇಶಗಳೇ ಅಂತರ್ಜಲ ರಕ್ಷಣೆಯ ಜಲಪಾತ್ರೆಗಳು. ಅವುಗಳ ರಕ್ಷಣೆ ಸರ್ಕಾರದ ಹೊಣೆಗಾರಿಕೆ. ಆದರೆ, ಅಂತಹ ಅಮೂಲ್ಯ ಸಂಪತ್ತಿಗೆ ಕನ್ನ ಹಾಕುವ ದುಷ್ಕೃತ್ಯ ಇಡೀ ಜೀವಸಂಕುಲವನ್ನೇ ಸಂಕಷ್ಟಕ್ಕೆ ಸಿಲುಕಿಸುವ ನಡೆ ಆಗಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದ ಗಡಿಪ್ರದೇಶ, ಹನಿ ನೀರಿಗೂ ಪರದಾಡುವ ಸ್ಥಿತಿ ಯಲ್ಲಿರುವ ಮೊಳಕಾಲ್ಮೂರು ಜನರ ಬದುಕಿಗೆ ಕಲ್ಲು ಬಂಡೆಗಳೇ ಜೀವನಾಧಾರ. ಈ ಕೃಷಿಯನ್ನು ಅನೇಕ ಜೀವಿಗಳು ಅವಲಂಬಿಸಿವೆ. ಜೊತೆಗೆ ನೂರಾರು ಜನರ ಜೀವನ ಅಡಕವಾಗಿದೆ ಎಂದರು. ಒಂದು ವೇಳೆ ಅಸಡ್ಡೆ ತೋರಿದರೆ ಅನಿವಾರ್ಯವಾಗಿ ಪ್ರತಿಭಟನೆ ತೀವ್ರಗೊಳಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮುಖಂಡ ಮರ್ಲಹಳ್ಳಿ ರವಿಕುಮಾರ್ ಮಾತನಾಡಿ, ಯಾವುದೇ ಕಾರಣಕ್ಕೂ ಗಣಿಗಾರಿಕೆ ಅನುಮತಿ ನೀಡಲು ನಾವು ಅವಕಾಶ ನೀಡುವುದಿಲ್ಲ. ಒಂದು ವೇಳೆ ಅನುಮತಿ ನೀಡಿದಲ್ಲಿ ಗಣಿಗಾರಿಕೆ ಪ್ರದೇಶಕ್ಕೆ ಸ್ಥಳೀಯ ಗ್ರಾಮಸ್ಥರು ನುಗ್ಗಿ ಯಂತ್ರಗಳನ್ನೇ ಧ್ವಂಸ ಮಾಡಲಿದ್ದಾರೆ. ಈಗಾಗಲೇ ಜನರು ರೊಚ್ಚಿಗೆದ್ದಿದ್ದು, ಅದನ್ನು ತಣಿಸಲು ಜಿಲ್ಲಾಡಳಿತ ತಕ್ಷಣವೇ ಮಧ್ಯ ಪ್ರವೇಶಿಸಬೇಕು ಎಂದು ಆಗ್ರಹಿಸಿದರು. ಮೊಳಕಾಲ್ಮೂರು ತಾಲ್ಲೂಕು, ಮರ್ಲಹಳ್ಳಿ ಬಳಿಕ ದೂರದಿಂದ ಜಿಲ್ಲಾಧಿಕಾರಿ ಕಚೇರಿಗೆ ಬಂದು ನ್ಯಾಯ ಕೇಳುತ್ತಿದ್ದೇವೆ. ನಮ್ಮ ಕೂಗು, ಆತಂಕ, ಭವಿಷ್ಯದಲ್ಲಿ ಕೃಷಿ ಹಾಗೂ ಜೀವಸಂಕುಲಗಳ ಮೇಲಾಗುವ ಹಾನಿ ಕುರಿತು ದೂರದೃಷ್ಟಿ ಜಿಲ್ಲಾಡಳಿತ ಪ್ರದರ್ಶಿಸಬೇಕು. ಇಲ್ಲದಿದ್ದರೆ ಅನಿವಾರ್ಯವಾಗಿ ಹೋರಾಟವನ್ನು ತೀವ್ರಗೊಳ್ಳಲಿದೆ ಎಂದು ಎಚ್ಚರಿಸಿದರು.

ಜಿಲ್ಲಾಧ್ಯಕ್ಷ ಕೆ.ಟಿ.ತಿಪ್ಪೇಸ್ವಾಮಿ ಮಾತನಾಡಿ, ಕೃಷಿಕರ ಬದುಕು ಉನ್ನತಗೊಳಿಸಲು ಸರ್ಕಾರ ಪ್ರಯತ್ನಿಸಬೇಕು. ಆದರೆ, ಆಡಳಿತ ವರ್ಗ ರೈತರ ಬದುಕಿಗೆ ಬರೆ ಎಳೆಯುವ ಕೆಲಸ ಮಾಡುತ್ತಿರುವುದು ಆತಂಕದ ವಿಷಯ ಎಂದರು. ಒಂದು ವೇಳೆ ಅನ್ನದಾತ ಕೈಕಟ್ಟಿ ಕುಳಿತರೆ ಇಡೀ ಜಗತ್ತು ಹಸಿವಿನಿಂದ ಬಳಲಿದೆ. ಈ ಸತ್ಯ ಅರಿತು ಸರ್ಕಾರಗಳು ಕೃಷಿ ವಿರುದ್ಧ ನೀತಿ ಕೈಬಿಡಬೇಕು.

## ಪಾಲ್ ಜಾನ್ 'ಕಾರಿಗರಿ' ಬಿಡುಗಡೆ

ಬೆಂಗಳೂರು

ಪಾಲ್ ಜಾನ್ ವಿಸ್ಕಿಯ 'ಕಾರಿಗರಿ' ಬೆಂಗಳೂರು ನಗರದಲ್ಲಿ ಬಹುಇಂದ್ರಿಯ ಅನುಭವವಾಗಿ ಆರಂಭಗೊಂಡಿದ್ದು, ಭಾರತೀಯ ಕೈಗಾರಿಕೆಯ ಕೌಶಲ್ಯವನ್ನು ಆಚರಿಸುವ ವಿಶಿಷ್ಟ ವೇದಿಕೆಯಾಗಿತ್ತು. ದಿ ಹಮ್ಮಿಂಗ್ ಟ್ರೀನಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ವಿಸ್ಕಿ, ಸಂಗೀತ, ಕವಿತೆ ಹಾಗೂ ವಸ್ತುಶಿಲ್ಪ ಒಂದೇ ಸರಣಿಯಲ್ಲಿ ಸಂಯೋಜನೆಯಾಗಿ, ಪ್ರತಿಯೊಂದು ಅಂಶವೂ ಉದ್ದೇಶಪೂರ್ವಕವಾಗಿ ರೂಪುಗೊಂಡ ಅನುಭವವಾಗಿ ಮೂಡಿಬಂದಿತು.

ಕಾರ್ಯಕ್ರಮದ ಆರಂಭಿಕ ವಾಕ್‌ಥ್ರೂ ಮರದ ನವೀನ ಕಲಾಕೃತಿಗಳ ಮತ್ತು ವಿಸ್ಕಿ ತಯಾರಿಕೆಯ ನಡುವಿನ ಸಾಮ್ಯತೆಯನ್ನು ಒತ್ತಿಹೇಳುತ್ತ, ಅತಿಥಿಗಳನ್ನು ವಸ್ತು, ಪ್ರಕ್ರಿಯೆ ಮತ್ತು ಸೂಕ್ಷ್ಮತೆಗಳೊಂದಿಗೆ ಸಂಪರ್ಕಿಸುವಂತೆ ಮಾಡಿತು. ಅತಿಥಿಗಳಿಗೆ ಮೊದಲು ಪಾಲ್ ಜಾನ್‌ನ ನಿರ್ವಾಣ ಎಕ್ಸ್‌ಪ್ರೆಷನ್ ಪರಿಚಯಿಸಲಾಯಿತು. ನಂತರ ಗ್ಲೋಬಲ್ ಅಂಬಾಸಿಡರ್ ಶ್ರೀ ಹೀಮಾಂಶು ಅಶರ್ ಅವರಿಂದ ಬ್ರಿಲಿಯನ್ಸ್ ಎಕ್ಸ್‌ಪ್ರೆಷನ್‌ನ ಆಚರಣಾತ್ಮಕ ಆರಂಭದೊಂದಿಗೆ ಕಾರ್ಯಕ್ರಮಕ್ಕೆ ಅಧಿಕೃತ ಚಾಲನೆ ನೀಡಲಾಯಿತು.

ಸಂಜೆಯ ಪ್ರಮುಖ ಆಕರ್ಷಣೆಯಾಗಿ ಕವಿ ಹಾಗೂ ಪ್ರದರ್ಶಕಿ ಪ್ರಿಯಾ ಮಾಲಿಕ್ ಮತ್ತು ಸಿತಾರ್



ವಾದಕ ಮೆಹ್ತಾಬ್ ಅಲಿ ನಿಯಾಜಿ ತಮ್ಮ ಕಲೆಯ ಮೂಲಕ ವಿಭಿನ್ನ ಮಾಯಾಜಾಲ ಸೃಷ್ಟಿಸಿದರು. ಇದು ಕೇವಲ ಪ್ರದರ್ಶನವಾಗಿರದೆ, ಸಂವೇದನಾತ್ಮಕ ಅನುಭವವಾಗಿತ್ತು. ಅವರ ಕಾರ್ಯಕ್ರಮ ಪಿಎಕ್ಸ್ ಎಕ್ಸ್‌ಪ್ರೆಷನ್‌ನೊಂದಿಗೆ ಜೋಡಣೆಗೊಂಡು, ಅನುಭವಕ್ಕೆ ಮತ್ತಷ್ಟು ಆಳವನ್ನು ನೀಡಿತು.

ಸಂಜೆ ಮುಂದುವರಿದಂತೆ, ಭಾರತೀಯ ಪ್ರಾದೇಶಿಕ ರುಚಿಗಳಿಂದ ಪ್ರೇರಿತವಾದ ವಿಶಿಷ್ಟ ಆಹಾರ ವ್ಯವಸ್ಥೆ ಕಥನವನ್ನು ಪೂರೈಸಿತು. ಪಾಲ್ ಜಾನ್ ಮಡೆರಾ ಎಕ್ಸ್‌ಪ್ರೆಷನ್ ಕಾರ್ಯಕ್ರಮದ ಅಂತಿಮ ಹಂತವನ್ನು ಗುರುತಿಸಿ, ಅನುಭವವನ್ನು ಸೊಗಸಾಗಿ ಪೂರ್ಣಗೊಳಿಸಿತು. ಪ್ರತಿಯೊಂದು ವಿಸ್ಕಿ ಎಕ್ಸ್‌ಪ್ರೆಷನ್ ಸರಿಯಾದ ಕ್ಷಣದಲ್ಲಿ ಪರಿಚಯವಾಗಿದ್ದು, ಸಾಮಾನ್ಯ ಟೇಸ್ಟಿಂಗ್ ಕಾರ್ಯಕ್ರಮದ ಬದಲು ಕಥಾನಕ ಆಧಾರಿತ ಅನುಭವವಾಗಿ ರೂಪುಗೊಂಡಿತು.

"ಕಾರಿಗರಿ ಬೈ ಪಾಲ್ ಜಾನ್ ವಿಸಿಟರ್ ಸೆಂಟರ್ ಭಾರತೀಯ ಕೈಗಾರಿಕೆಯ ಮೇಲಿನ ನಮ್ಮ ಆಳವಾದ ನಂಬಿಕೆಯ ಪ್ರತಿಬಿಂಬವಾಗಿದೆ.

ಈ ಪ್ರಯತ್ನದ ಮೂಲಕ ಪರಂಪರೆಯ ಕಲೆಯನ್ನು ಹೊಸ ದೃಷ್ಟಿಕೋಣದಿಂದ ಅನುಭವಿಸಲು ಮತ್ತು ವಿಶಾಲ ಪ್ರೇಕ್ಷಕರಿಗೆ ತಲುಪಿಸಲು ನಾವು ಹೆಮ್ಮೆಪಡುತ್ತೇವೆ," ಎಂದು ಪಾಲ್ ಜಾನ್ ಇಂಡಿಯನ್ ಸಿಂಗಲ್ ಮಾಲ್ಟ್ ವಿಸ್ಕಿಯ ಚೇರ್ಮನ್ ಶ್ರೀ ಪಾಲ್ ಪಿ ಜಾನ್ ಹೇಳಿದ್ದಾರೆ.

## ಇಂದು ಸಂಭ್ರಮದ 'ಶ್ರೀ ರಾಮನವಮಿ' ಆಚರಣೆ

ಹೊಸಪೇಟೆ

ಅಯೋಧ್ಯೆಯ ಆರಾಧ್ಯ ದೈವ, ಮರ್ಯಾದಾ ಪುರುಷೋತ್ತಮ ಶ್ರೀರಾಮನ ಜನ್ಮದಿನವಾದ 'ಶ್ರೀ ರಾಮನವಮಿ' ಹಬ್ಬವನ್ನು ಈ ಬಾರಿ ಇಂದು ಅತ್ಯಂತ ಭಕ್ತಿ–ಭಾವದಿಂದ ಆಚರಿಸಲಾಗುತ್ತಿದೆ. ಈ ಪವಿತ್ರ ದಿನದ ಕುರಿತು ಹಿರಿಯ ಸಾಹಿತಿಗಳಾದ ಶಾಂತರಾಜ್ ಮೇದಾರ್ ಅವರು ಶ್ರೀರಾಮನ ಆದರ್ಶಗಳು ಹಾಗೂ ಹಬ್ಬದ ಹಿನ್ನೆಲೆಯನ್ನು ಹಂಚಿಕೊಂಡಿದ್ದಾರೆ.

ಪಂಚಾಂಗದ ಪ್ರಕಾರ, ಚೈತ್ರ ಮಾಸದ ಶುಕ್ಲ ಪಕ್ಷದ ನವಮಿ ತಿಥಿಯು ಮಾರ್ಚ್ 26ರ ಗುರುವಾರ ಮಧ್ಯಾಹ್ನ 02:30ಕ್ಕೆ ಪ್ರಾರಂಭವಾಗಿ, ಮಾರ್ಚ್ 27ರ ಶುಕ್ರವಾರ ಮಧ್ಯಾಹ್ನ 12:20ಕ್ಕೆ ಮುಕ್ತಾಯವಾಗಲಿದೆ. ಭಗವಾನ್ ಶ್ರೀರಾಮನು ಮಧ್ಯಾಹ್ನ ಕಾಲದಲ್ಲಿ ಜನಿಸಿದ ಕಾರಣ, ಮಾರ್ಚ್ 27ರ ಮಧ್ಯಾಹ್ನದ ಪೂಜೆಗೆ ವಿಶೇಷ ಮಹತ್ವವಿದೆ ಎಂದು ಅವರು ತಿಳಿಸಿದ್ದಾರೆ.

### » ಪೌರಾಣಿಕ ಹಿನ್ನೆಲೆ:

ಪುತ್ರಕಾಮೇಷ್ಟಿ ಯಜ್ಞ: ವಾಲ್ಮೀಕಿ ರಾಮಾಯಣದಂತೆ, ಸಂತಾನ ಭಾಗ್ಯವಿಲ್ಲದ ದಶರಥ ಮಹಾರಾಜರು ಗುರು ವಸಿಷ್ಠರ ಮಾರ್ಗದರ್ಶನದಲ್ಲಿ ಯಜ್ಞ ಮಾಡಿದರು. ಯಜ್ಞಕುಂಡದಿಂದ ಬಂದ ದಿವ್ಯ ಅಮೃತದ (ಖೀರು) ಪ್ರಭಾವದಿಂದ ಕೌಸಲ್ಯೆ, ಕೈಕೇಯಿ ಮತ್ತು ಸುಮಿತ್ರೆಯರಿಗೆ ನಾಲ್ವರು ದಿವ್ಯ ಪುತ್ರರು ಜನಿಸಿದರು.

ರಾಮಾವತಾರ: ಪುನರ್ವಸು ನಕ್ಷತ್ರದ ಶುಭ ಘಳಿಗೆಯಲ್ಲಿ ಮಾತಾ ಕೌಸಲ್ಯೆಯ ಗರ್ಭದಿಂದ ಲೋಕಪೂಜಿತ ಶ್ರೀರಾಮನು ಜನಿಸಿದನು. ಶ್ರೀರಾಮನನ್ನು 'ಮರ್ಯಾದಾ ಪುರುಷೋತ್ತಮ' ಎಂದು ಕರೆಯಲಾಗುತ್ತದೆ. ಅವರು ಒಬ್ಬ ಆದರ್ಶ ಪುತ್ರ, ಸಹೋದರ, ಪತಿ ಮತ್ತು ಜನಪರ ರಾಜನಾಗಿ ಬದುಕುವ ಮೂಲಕ ಯುಗಯುಗಾಂತರಕ್ಕೂ ಮಾನವ ಕುಲಕ್ಕೆ ಪ್ರೇರಣೆಯಾಗಿದ್ದಾರೆ. ಧರ್ಮದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ರಾಮಾಯಣ ನಮಗೆ ಕಲಿಸುವ ಪಾಠವಾಗಿದೆ ಎಂದು ಶಾಂತರಾಜ್ ಮೇದಾರ್ ಅಭಿಪ್ರಾಯಪಟ್ಟಿದ್ದಾರೆ.

ಈ ದಿನ ಶ್ರೀರಾಮನ ಬಾಲರೂಪದ ಪೂಜೆ ಮಾಡುವುದು ಶ್ರೇಷ್ಠ. ಮನೆಯ ಮುಖ್ಯ ದ್ವಾರದ ಮೇಲೆ 'ಸನಾತನ ಧರ್ಮ ಧ್ವಜ'ವನ್ನು ಹಾರಿಸುವುದು ಅತ್ಯಂತ ಶುಭಕರ.

ತುಳಸಿದಾಸರ ರಾಮಚರಿತ ಮಾನಸದಲ್ಲಿ ಹೇಳಿರುವಂತೆ, ಶ್ರೀರಾಮನಿಗೆ ಕೇವಲ 'ಪ್ರೇಮ' ಮಾತ್ರ ಪ್ರಿಯ. ಭಕ್ತಿಯಿಂದ ಸ್ಮರಿಸುವವರ ಮನೋಕಾಮನೆಗಳನ್ನು ರಾಮನು ಪೂರೈಸುತ್ತಾನೆ.

## ದೂರವಾಣಿನಗರ ಮಾದರಿ ವಾರ್ಡ್ ಮಾಡುವುದೆ ನನ್ನ ಪ್ರತಿಜ್ಞೆ



ಕೆಆರ್ ಪುರ

ಶಾಸಕ ಬೈರತಿ ಬಸವರಾಜಣ್ಣ ನವರು ಕೆ ಆರ್ ಪುರ ಕ್ಷೇತ್ರವನ್ನು ಮಾದರಿ ಆದರೆ ಕ್ಷೇತ್ರ ಮಾಡಿದಂತೆ ಸೇವೆ ಮಾಡಲು ನನಗೂ ಒಂದು ಅವಕಾಶ ನೀಡಿ ಎಂದು ದೂರವಾಣಿ ನಗರ ವಾರ್ಡ್ ಜಿಬಿಎ ಬಿಜೆಪಿ ಪ್ರಬಲ ಆಕಾಂಕ್ಷಿ ಪ್ರದೀಪ್ ಗೌಡ ತಿಳಿಸಿದರು.

ದೂರವಾಣಿನಗರ ವಾರ್ಡ್ ವಾರ್ಡಿನ ತಮ್ಮ ಗೃಹ ಕಚೇರಿ ಬಳಿ ಹಮ್ಮಿಕೊಂಡಿದ್ದ ಸಭೆಯಲ್ಲಿ ಅವರು ಮಾತನಾಡಿದರು. ಸಮಾಜ ಸೇವೆಯನ್ನು ಜೀವನದಲ್ಲಿ ಅಳವಡಿಸಿಕೊಂಡಿರುವುದು ನನ್ನ ಜವಾಬ್ದಾರಿ ಹಾಗು ಕರ್ತವ್ಯ. ಇದನ್ನು ಶಾಸಕ ಬೈರತಿ ಬಸವರಾಜ ಅವರಿಂದಲೇ ನಾವು ಕಲಿತಿದ್ದು ಎಂದರು.

ಬೈರತಿ ಬಸವರಾಜಣ್ಣನವರು ಯಾವುದೇ ಪಕ್ಷದಲ್ಲಿದ್ದರೂ ಅವರ ಹಿಂದೆ ಸದಾ ಇರುತ್ತೇವೆ, ಅವರ ಶಿಷ್ಯನಂತೆ ವಾರ್ಡ್‌ನಲ್ಲಿ ಜಾತಿ, ಧರ್ಮಗಳ ಹಂಗು ತೊರೆದು ಸಮಾಜಮುಖಿ ಕೆಲಸಗಳನ್ನು ಮಾಡುತ್ತಿದ್ದೇನೆ ಎಂದರು.

ಕೊರೋನಾ ಸಂದರ್ಭದಲ್ಲಿ ಬಡವರಿಗೆ ಆಹಾರ, ರೇಷನ್ ಕಿಟ್, ಬ್ರೆಡ್, ಹಾಲು ಸೇರಿದಂತೆ ಹಲವು ಸಾಮಾಗ್ರಿಗಳನ್ನು ಪ್ರತಿನಿತ್ಯ ನೀಡಿದ್ದೇವೆ ಎಂದರು. ಸಾಕಷ್ಟು ದೇವಸ್ಥಾನಗಳಿಗೆ ಜೀರ್ಣೋದ್ಧಾರಕ್ಕೆ ಪ್ರೋತ್ಸಾಹ ನೀಡಿದ್ದೇನೆ, ವಾರ್ಡ್‌ನ ಜನರ ಸಮಸ್ಯೆಗಳಿಗೆ ಮನೆ ಮಂಗನಂತೆ ಸ್ಪಂದಿಸುತ್ತಿದ್ದೇನೆ, ಜನರ ಇಚ್ಛೆಯಂತೆ ಜಿಬಿಎ ಚುನಾವಣೆಯಲ್ಲಿ ದೂರವಾಣಿ ನಗರ ವಾರ್ಡ್ ಹದಿನೆಂಟರಿಂದ ಸ್ಪರ್ಧಿಸಲು ಟಿಕೆಟ್ ಆಕಾಂಕ್ಷಿಯಾಗಿದ್ದೇನೆ, ಒಂದು ಅವಕಾಶ ನೀಡಿದರೆ ದೂರವಾಣಿ ನಗರದಲ್ಲಿ ಗೆಲ್ಲುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ಹೇಳಿದರು. ಬೈರತಿ ಬಸವರಾಜಣ್ಣ ಅವರು ಯಾವುದೇ ತಪ್ಪು ಮಾಡಿಲ್ಲ,ಅವರೊಂದಿಗೆ ಇದ್ದಂತವರು ಷಡ್ಯಂತ್ರ ರೂಪಿಸಿ ರಾಜಕೀಯ ಪಿತೂರಿ ಮಾಡಿದ್ದಾರೆ. ಬಸವರಾಜಣ್ಣ ಅವರ ಬೆಂಬಲಕ್ಕೆ ಇಡೀ ಕೆ ಆರ್ ಪುರ ಕ್ಷೇತ್ರವೇ ನಿಂತಿದೆ ಎಂದು ಹೇಳಿದರು.

## ಒಳಮೀಸಲಾತಿ ಅನ್ಯಾಯ ಖಂಡಿಸಿ ಬೆಂಗಳೂರು ಚಲೋಗೆ ಸಜ್ಜು

ಆನೇಕಲ್

ಅಂಬೇಡ್ಕರ್ ಹೇಳಿದಂತೆ ಹಕ್ಕು ಮತ್ತು ಅಧಿಕಾರಗಳು ಯಾವತ್ತು ನಮ್ಮ ಮನೆ ಬಳಿ ಬರುವುದಿಲ್ಲಿ, ಅದು ಹೋರಾಟ ಮೂಲಕವೇ ಪಡೆಯಬೇಕು, ಈ ನಿಟ್ಟಿನಲ್ಲಿ ಬಲಗೈ ಸಮುದಾಯಗಳು ಒಗ್ಗಟಾಗಿ ಹೋರಾಟ ಮಾಡಿದರೆ ಮಾತ್ರ ಒಳ ಮೀಸಲಾತಿಯಲ್ಲಿ ನಮ್ಮ ಸಮಾಜಕ್ಕೆ ನ್ಯಾಯ ದೊರೆಯುತ್ತದೆ ಎಂದು ಬಲಗೈ ಸಮುದಾಯದ ಹಿರಿಯ ಮುಖಂಡರಾದ ಬಳ್ಳೂರು ಮುನಿವೀರಪ್ಪ ತಿಳಿಸಿದರು.

ಚಂದಾಪುರ ಖಾಸಗಿ ಹೋಟೆಲ್‌ನಲ್ಲಿ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವೈಜ್ಞಾನಿಕ ವರದಿಯನ್ನು ಸರಿಪಡಿಸುವಂತೆ ಒತ್ತಾಯಿಸಿ ಮಾ. 25 ಬುಧವಾರದಂದು ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಹಮ್ಮಿಕೊಂಡಿರುವ ಬೃಹತ್ ಸಮಾವೇಶದ ಅಂಗವಾಗಿ ತಾಲ್ಲೂಕಿನ ಬಲಗೈ ಸಮುದಾಯದ ಮುಖಂಡರಿಂದ ಆಯೋಜಿಸಿದ ಪೂರ್ವಭಾವಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು, ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗ ವರದಿ ಅವೈಜ್ಞಾನಿಕವಾಗಿರುವುದರಿಂದ ಬಲಗೈ ಸಮುದಾಯದವರಿಗೆ ಬಹಳ ಅನ್ಯಾಯವಾಗಿದೆ,



ನಮ್ಮ ಮುಂದಿನ ಭವಿಷ್ಯದ ಮಕ್ಕಳಿಗೆ ಶೈಕ್ಷಣಿಕ ಹಾಗೂ ಉದ್ಯೋಗ ಕ್ಷೇತ್ರದಲ್ಲಿ ನಷ್ಟವಾಗುತ್ತಿರುವುದನ್ನು ತಪ್ಪಿಸಲು ನಮ್ಮ ಹೋರಾಟ ಅನಿವಾರ್ಯವಾಗಿದೆ. ಹಾಗಾಗಿ ನಮ್ಮ ಬಲಗೈ ಸಮುದಾಯದವರು ಬೃಹತ್ ಹೋರಾಟದ ಸಮಾವೇಶದಲ್ಲಿ ಹೆಚ್ಚು ಜನರು ಭಾಗವಾಹಿಸಿ ನಮ್ಮ ಹಕ್ಕು ಒತ್ತಾಯ ಮಾಡಬೇಕಾಗಿದೆ ಎಂದರು,

ವಕೀಲರ ಸಂಘದ ಅಧ್ಯಕ್ಷ ಪಟಾಪಟ್ ಪ್ರಕಾಶ್ ಮಾತನಾಡಿ ಅಂಬೇಡ್ಕರ್ ಆಶಯದಂತೆ ಎಲ್ಲಾರು ಒಟ್ಟಾದರೆ ನಾವು ಏನನಾದರೂ ಪಡೆಯಬಹುದು, ಈ ನಿಟ್ಟಿನಲ್ಲಿ ನ್ಯಾ, ನಾಗಮೋಹನ್ ದಾಸ್ ವರದಿಯು ಬಲಗೈ ಸಮುದಾಯಗಳಿಗೆ ಸಂಕಷ್ಟವಾಗಿದೆ. ಒಳ ಮೀಸಲಾತಿಯಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸಲು ತಾಲ್ಲೂಕಿನ ಬಲಗೈ ಸಮುದಾಯದ ಬಂಧುಗಳು ಸ್ವಾಭಿಮಾನದಿಂದ ಬಂದು ಪ್ರತಿಭಟನೆಯನ್ನು ಯಶಸ್ವಿ ಮಾಡಬೇಕು ಎಂದು ಮನವಿ ಮಾಡಿದರು.

ಬಲಗೈ ಸಮುದಾಯದ ಮುಖಂಡ ಚಿಕ್ಕನಾಗಮಂಗಲ ವೆಂಕಟೇಶ್ ಮಾತನಾಡಿ ನಮ್ಮ ಆನೇಕಲ್ ಕ್ಷೇತ್ರದಲ್ಲಿ ಸುಮಾರು ಒಂದು ಲಕ್ಷ ಜನಸಂಖ್ಯೆ ಬಲಗೈ ಸಮಾಜದವರು ಇದ್ದಾರೆ, ಹಾಗಾಗಿ ನಮ್ಮ ಅಸ್ಥಿತ್ವವನ್ನು ಉಳಿಸಲು ಒಳ ಮೀಸಲಾತಿಯಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸಲು ನಮ್ಮ ಸಮುದಾಯದ ಜನರು ಹೆಚ್ಚಾಗಿ ಪಾಲ್ಗೊಂಡು ನಮ್ಮ ಹಕ್ಕನ್ನು ಪಡೆಯಬೇಕಾದರೆ ತಾಲ್ಲೂಕಿನ ಸಮುದಾಯದ ಬಂಧುಗಳು ಪಕ್ಷತೀತವಾಗಿ ಭಾಗವಾಹಿಸುವ ಮೂಲಕ ಬೃಹತ್ ಸಮಾವೇಶವನ್ನು ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು.

ಛಲವಾದಿ ಮಹಾಸಭಾ ರಾಜ್ಯ ಖಜಾಂಚಿ ಮೈಕೋ ನಾಗರಾಜು ಮಾತನಾಡಿ, ಒಳ ಮೀಸಲಾತಿಯಲ್ಲಿ ಬಲಗೈ ಸಮುದಾಯದವರಿಗೆ ತೊಂದರೆಯಾಗಿರುವುದನ್ನು ಖಂಡಿಸಿ ಬೃಹತ್ ಹೋರಾಟ ರೂಪಿಸಲಾಗಿದೆ, ಈ ನಿಟ್ಟಿನಲ್ಲಿ ನಮ್ಮ ಸಮುದಾಯದ ಮಕ್ಕಳ ಮುಂದಿನ ಭವಿಷ್ಯಕ್ಕೆ ನಾವು ಎಲ್ಲಾರು ಒಗ್ಗಟಾಗಿ ಪ್ರತಿಭಟನೆಯಲ್ಲಿ ಭಾಗವಾಹಿಸಬೇಕು ಎಂದರು.

ಬಲಗೈ ಸಮುದಾಯದ ಮುಖಂಡರಾದ ಗೌರೀಶ್ ಮಾತನಾಡಿ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ವರದಿ ನಮ್ಮ ಬಲಗೈ ಸಮುದಾಯಕ್ಕೆ ಮಾರಕವಾಗಿದೆ, ಅವೈಜ್ಞಾನಿಕ ವರದಿಯಿಂದ ನಮ್ಮ ಮಕ್ಕಳು ಉದ್ಯೋಗದಿಂದ ವಂಚಿತರಾಗುತ್ತಾರೆ ಹಾಗಾಗಿ ಅನ್ಯಾಯವನ್ನು ಸರಿಪಡಿಸುವಂತೆ ಬೃಹತ್ ಹೋರಾಟ ಮಾಡಲಾಗುತ್ತಿದೆ ಹಾಗಾಗಿ ಸಮುದಾಯದ ಬಂಧುಗಳು ಐದು ಸಾವಿರಕ್ಕೂ ಹೆಚ್ಚು ಜನರು ನಮ್ಮ ತಾಲ್ಲೂಕಿನಿಂದ ಪಾಲ್ಗೋಳುತ್ತೇವೆ ಎಂದರು.

ಬಲಗೈ ಸಮುದಾಯದ ಒಕ್ಕೂಟದ ಮುಖಂಡರಾದ ಜಯರಾಜು, ಬಿ.ಪಿ.ರಮೇಶ್, ಮೈಕೋ ನಾಗರಾಜು, ಬ್ಯಾಗಡದೇನಹಳ್ಳಿ ರಾಜಪ್ಪ, ಎಂ.ವೆಂಕಟೇಶ್, ರಾಮಸ್ವಾಮಿ, ಗಟ್ಟಿಹಳ್ಳಿ ಸೀನಪ್ಪ, ರಾಮಕೃಷ್ಣ, ಎಬಿಸಿ ಯಲ್ಲಪ್ಪ, ಸಿ.ಕೆ.ಚಿನ್ನಪ್ಪ, ಮುನಿಕೃಷ್ಣ, ನಾಗಾರಾಜು, ಹಾಗೂ ಆನಂದ್ ಚಕ್ರವರ್ತಿ, ವೆಂಕಟೇಶ್ ಮೂರ್ತಿ, ಶ್ರೀರಾಮ್, ಮೆಣಸಿಗಾನಹಳ್ಳಿ ಮುನಿರಾಜು, ಮಧು, ರಾಮಸಾಗರ ವೆಂಕಟಸ್ವಾಮಿ, ದಯಾನಂದ್, ತಿಮ್ಮಸಂದ್ರ ರಮೇಶ್, ಶ್ರೀನಿವಾಸ್, ವೇಣು, ಮುನಿರಾಜು, ಸಂಪಂಗಿ, ವಸಂತ್, ಬೆಟ್ಟದಾಸನಪುರ ನಾರಾಯಣಸ್ವಾಮಿ, ಬಳ್ಳೂರು ಮುನಿಯಪ್ಪ, ಗೋವಿಂದ್, ಸೋಮಶೇಖರ್, ಹರೀಶ್, ರಾಮಸಾಗರ ಸಂಪಂಗಿ, ಮುನಿರಾಜು, ಹಾಗೂ ಆನೇಕರು ಹಾಜರಿದ್ದರು.

# ಪಿಂಚಣಿ ಕಡಿತದ ವಿರುದ್ಧ ನಿವೃತ್ತ ನೌಕರರ ಆಕ್ರೋಶ; ಪ್ರಧಾನಿಗೆ ಮನವಿ ಸಲ್ಲಿಕೆ

ಬಂಗಾರಪೇಟೆ

"ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಪಿಂಚಣಿ ಸಂಬಂಧಿತ ಸೌಲಭ್ಯಗಳನ್ನು ಕಡಿತಗೊಳಿಸುವ ನಿರ್ಣಯ ಕೈಗೊಂಡಿರುವುದು ನಿವೃತ್ತ ನೌಕರರ ಬದುಕಿಗೆ ಮಾರಕವಾಗಿದೆ. ಈ ಕೂಡಲೇ ಈ ಬಿಲ್ಲನ್ನು ಹಿಂಪಡೆದು ಹಳೆಯ ಪಿಂಚಣಿ ಯೋಜನೆಯನ್ನೇ ಮುಂದುವರಿಸಬೇಕು," ಎಂದು ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಬಂಗಾರಪೇಟೆ ತಾಲೂಕು ಶಾಖೆಯ ಪದಾಧಿಕಾರಿಗಳು ಆಗ್ರಹಿಸಿದ್ದಾರೆ.

ಮಂಗಳವಾರ ತಾಲೂಕು ಆಡಳಿತ ಕಚೇರಿಗೆ ಭೇಟಿ ನೀಡಿದ ಸಂಘದ ನೂರಾರು ಸದಸ್ಯರು, ತಹಶೀಲ್ದಾರ್ ಸುಜಾತ ಅವರ ಮೂಲಕ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಹಕ್ಕೊತ್ತಾಯದ ಮನವಿ ಪತ್ರವನ್ನು



ರವಾನಿಸಿದರು.

**ಸೌಲಭ್ಯಗಳ ಕಡಿತಕ್ಕೆ ತೀವ್ರ ವಿರೋಧ:** ಲೋಕಸಭೆಯಲ್ಲಿ 2025ರ ಮಾರ್ಚ್ 25ರಂದು ಕೈಗೊಂಡಿರುವ ನಿರ್ಣಯದ ಬಗ್ಗೆ ಆತಂಕ ವ್ಯಕ್ತಪಡಿಸಿದ ಮುಖಂಡರು, "ಕುಟುಂಬ ಪಿಂಚಣಿ ರದ್ದುಪಡಿಸಿರುವುದು, ವರ್ಷಕ್ಕೆ ಎರಡು ಬಾರಿ ನೀಡಲಾಗುತ್ತಿದ್ದ ತುಟ್ಟಿಭತ್ಯೆ ಕಡಿತ ಹಾಗೂ ಪಿಂಚಣಿ ಏರಿಕೆಯ ಮೇಲೆ ನಿಯಂತ್ರಣ ಹೇರಿರುವುದು ಅನ್ಯಾಯದ ಪರಮಾವಧಿ. ಅಲ್ಲದೆ, 80 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ನೀಡಲಾಗುತ್ತಿದ್ದ ವಿಶೇಷ ಸೌಲಭ್ಯಗಳನ್ನು ರದ್ದುಗೊಳಿಸುವ ಚಿಂತನೆಯು ಹಿರಿಯ ಜೀವಗಳಿಗೆ ಮಾಡುವ ದ್ರೋಹವಾಗಿದೆ," ಎಂದು ಆಕ್ರೋಶ ವ್ಯಕ್ತಪಡಿಸಿದರು.

**ಬಿಲ್ಲನ್ನು ಹಿಂಪಡೆಯಲು ಆಗ್ರಹ:** ರಾಷ್ಟ್ರಪತಿಗಳ ಅಂಕಿತಕ್ಕೆ ಕಳುಹಿಸಿರುವ ಈ ವಿವಾದಿತ ಬಿಲ್ ಜಾರಿಯಾದಲ್ಲಿ ನಿವೃತ್ತ ನೌಕರರು ಆರ್ಥಿಕ ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಆದ್ದರಿಂದ ಕೇಂದ್ರ ಸರ್ಕಾರ ತಕ್ಷಣ ಮಧ್ಯಪ್ರವೇಶಿಸಿ ಈ ಕ್ರಮವನ್ನು ಕೈಬಿಡಬೇಕು ಎಂದು ಸಂಘದ ಪದಾಧಿಕಾರಿಗಳು ಒತ್ತಾಯಿಸಿದರು. ಮನವಿ ಸ್ವೀಕರಿಸಿದ ತಹಶೀಲ್ದಾರ್ ಸುಜಾತ ಅವರು, ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನ ಮಂತ್ರಿಗಳಿಗೆ ಈ ಪತ್ರವನ್ನು ರವಾನಿಸುವುದಾಗಿ ಭರವಸೆ ನೀಡಿದರು.

**ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಪ್ರಮುಖರು:** ಸಂಘದ ತಾಲೂಕು ಅಧ್ಯಕ್ಷ ಕೆ. ಪೆರುಮಾಳ್, ಉಪಾಧ್ಯಕ್ಷ ಎಸ್.ಆರ್. ಸಂಜೀವಪ್ಪ, ಕಾರ್ಯದರ್ಶಿ ಎಂ. ಎಳಿಯಪ್ಪ, ಸಹ ಕಾರ್ಯದರ್ಶಿ ಸಿ. ರುದ್ರಪ್ಪ, ಸಂಘಟನಾ ಕಾರ್ಯದರ್ಶಿ ಕೆ. ಶಿವಶಂಕರಯ್ಯ, ಕಾನೂನು ಸಲಹೆಗಾರ ಎಂ. ಎಳಿಯಪ್ಪ ಹಾಗೂ ಪದಾಧಿಕಾರಿಗಳಾದ ಕೆ.ಆರ್. ವಿಶ್ವನಾಥ, ಕೆ.ಎಂ. ವೆಂಕಟೇಶಪ್ಪ, ಲಕ್ಷ್ಮಪ್ಪ, ಎಂ. ಮುನಿ ವೆಂಕಟಪ್ಪ ಉಪಸ್ಥಿತರಿದ್ದರು.

# ಸಂವಿಧಾನದ ಆಶಯದಂತೆ ವೈಜ್ಞಾನಿಕ ಪ್ರಜ್ಞೆ ಬೆಳೆಸಿಕೊಳ್ಳಿ: ಗುರುರಾಜ್

ತುಮಕೂರು

"ಒಬ್ಬ ಉತ್ತಮ ವಿಜ್ಞಾನ ವಿದ್ಯಾರ್ಥಿಯಾಗಬೇಕಾದರೆ ಕೇವಲ ಪ್ರಯೋಗಾಲಯದ ಜ್ಞಾನವಷ್ಟೇ ಸಾಲದು, ಸಾಹಿತ್ಯಿಕ ಮನೋಭಾವನೆಯೂ ಇರುವುದು ಅತ್ಯಗತ್ಯ," ಎಂದು ನ್ಯಾಷನಲ್ ಅಕಾಡೆಮಿ ಫಾರ್ ಲರ್ನಿಂಗ್ ಆರ್‌ಆರ್ ಇನ್‌ಸ್ಟಿಟ್ಯೂಷನ್ ನಿರ್ದೇಶಕ ಪ್ರೊ. ಗುರುರಾಜ್ ಎಸ್. ತಿಳಿಸಿದರು.




ತುಮಕೂರು ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜಿನ ಐಕ್ಯೂಎಸ್‌ಸಿ ಮತ್ತು ಇಂಗ್ಲಿಷ್ ವಿಭಾಗದ ಸಹಯೋಗದಲ್ಲಿ ಮಂಗಳವಾರ ಹಮ್ಮಿಕೊಳ್ಳಲಾಗಿದ್ದ "ಸಾಹಿತ್ಯ ಮತ್ತು ವೈಜ್ಞಾನಿಕ ಪ್ರಜ್ಞೆ" ವಿಷಯದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

"ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕಾಗಿ ವಿಜ್ಞಾನ ವಿಷಯವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಭಾರತದ ಸಂವಿಧಾನದ ಎಂಟನೇ ಮೂಲಭೂತ ಕರ್ತವ್ಯದಂತೆ ಪ್ರತಿಯೊಬ್ಬರೂ ವೈಜ್ಞಾನಿಕ ಮನೋಭಾವನೆ ಮತ್ತು ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ. 1928ರಲ್ಲಿ ಸಿ.ವಿ. ರಾಮನ್ ಅವರು ನೊಬೆಲ್ ಪ್ರಶಸ್ತಿ ಪಡೆದ ನಂತರ, ಕಳೆದ ನೂರು ವರ್ಷಗಳಲ್ಲಿ ಮತ್ತೊಬ್ಬರು ಅಂತಹ ಸಾಧನೆ ಮಾಡಲು ಸಾಧ್ಯವಾಗದಿರಲು ನಮ್ಮಲ್ಲಿರುವ ವೈಜ್ಞಾನಿಕ ಜ್ಞಾನದ ಮೂಲ ಕೊರತೆಯೇ ಕಾರಣ," ಎಂದು ಅವರು ವಿಷಾದಿಸಿದರು. ವೈಜ್ಞಾನಿಕ ಪ್ರಜ್ಞೆಯ ಕೊರತೆಯಿಂದ ಜಗತ್ತಿನಲ್ಲಿ ಯುದ್ಧದ ಪರಿಸ್ಥಿತಿಗಳು ನಿರ್ಮಾಣವಾಗುತ್ತಿವೆ ಎಂದು ಎಚ್ಚರಿಸಿದ ಅವರು, "ಪರಿಸರ ದಿನದಂದು ಗಿಡ ನೆಡುವ ಸಂಭ್ರಮ ಮಾಡುವ ಸರ್ಕಾರಗಳೇ ಅರಣ್ಯ ನಾಶಕ್ಕೆ ಒಪ್ಪಿಗೆ ನೀಡುತ್ತಿರುವುದು ದುರಂತ. ಸಾಹಿತಿಗಳು ತಮ್ಮ ಕೃತಿಗಳ ಮೂಲಕ ಭೂಮಿಯ ಶೋಷಣೆಯ ಬಗ್ಗೆ ಎಚ್ಚರಿಸಿದ್ದಾರೆ. ಆದ್ದರಿಂದ ಸೃಷ್ಟಿಯ ರಕ್ಷಣೆಗಾಗಿ ಸಾಹಿತ್ಯದ ಓದು ಅಗತ್ಯವಾಗಿದೆ. ಅಟಲ್ ಬಿಹಾರಿ ವಾಜಪೇಯಿ ಅವರು 'ಜೈ ವಿಜ್ಞಾನ್' ಘೋಷಣೆಯ ಮೂಲಕ ವಿಜ್ಞಾನದ ಮಹತ್ವವನ್ನು ಎತ್ತಿಹಿಡಿದಿದ್ದಾರೆ," ಎಂದು ಸ್ಮರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಪ್ರೊ. ಎಸ್. ಶ್ರೀನಿವಾಸ್ ಮಾತನಾಡಿ, "ವಿಜ್ಞಾನದ ಅರಿವು ವಿನಾಶಕಾರಿ ಬಾಂಬ್‌ಗಳ ಸೃಷ್ಟಿಗೆ ಬಳಕೆಯಾಗುವ ಬದಲು, ಹಸಿವಿನಂತಹ ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸಲು ಬಳಕೆಯಾಗಬೇಕು," ಎಂದು ಆಶಿಸಿದರು. ಇಂಗ್ಲಿಷ್ ವಿಭಾಗದ ಡಾ. ಜ್ಯೋತಿ ಪ್ರಾಸ್ತವಿಕವಾಗಿ ಮಾತನಾಡಿ, ವಿಜ್ಞಾನವು ತಂತ್ರಜ್ಞಾನ ನೀಡಿದರೆ, ಸಾಹಿತ್ಯವು ಭಾವನಾತ್ಮಕ ಬೆಳವಣಿಗೆ ಮತ್ತು ವಿಮರ್ಶಾತ್ಮಕ ಚಿಂತನೆಯನ್ನು ಮೂಡಿಸುತ್ತದೆ ಎಂದರು. ಕಾರ್ಯಕ್ರಮದಲ್ಲಿ ಡಾ. ಸುಚೇತನ್ ಪಿ., ಡಾ. ಭರತ್ ಶಿಲ್ಪಿ ಸೇರಿದಂತೆ ಹಲವು ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಖಾಸಗೀಕರಣದ ಅಬ್ಬರದಲ್ಲಿ ಒಳಮೀಸಲಾತಿ ಎಷ್ಟು ಪರಿಣಾಮಕಾರಿ?

ಕೋಲಾರ



"ರಾಜ್ಯದಲ್ಲಿ ಎಸ್‌ಸಿ ಒಳಮೀಸಲಾತಿ ಕುರಿತ ಚರ್ಚೆ ಚುರುಕುಗೊಂಡಿರುವ ಈ ಸಂದರ್ಭದಲ್ಲಿ, ಜಸ್ಟೀಸ್ ಹೆಚ್.ಎನ್. ನಾಗಮೋಹನ್ ದಾಸ್ ವರದಿಯು ಆಶಾದಾಯಕವಾಗಿದ್ದರೂ, ಇಂದಿನ ಖಾಸಗೀಕರಣದ ಯುಗದಲ್ಲಿ ಈ ನೀತಿ ಎಷ್ಟು ವಾಸ್ತವಿಕ ಲಾಭ ತಂದುಕೊಡಬಲ್ಲದು ಎಂಬುದು ಗಂಭೀರ ಚಿಂತನೆಯ ವಿಷಯವಾಗಿದೆ," ಎಂದು ಕೋಲಾರ ವಕೀಲರ ಸಂಘದ ಉಪಾಧ್ಯಕ್ಷ ಹೆಚ್.ವಿ. ಸುಬ್ರಮಣಿ ಅಭಿಪ್ರಾಯಪಟ್ಟಿದ್ದಾರೆ.

ಈ ಕುರಿತು ಸುಬ್ರಮಣಿ ಅವರು ತಮ್ಮ ಆಳವಾದ ವಿಶ್ಲೇಷಣೆಯನ್ನು ಮಂಡಿಸಿದ್ದು, ಬದಲಾಗುತ್ತಿರುವ ಆರ್ಥಿಕ ವಾಸ್ತವದ ಬಗ್ಗೆ ಎಚ್ಚರಿಸಿದ್ದಾರೆ. "ದೂರಸಂಪರ್ಕ, ವಿಮಾನಯಾನ, ಬ್ಯಾಂಕಿಂಗ್ ಮತ್ತು ರೈಲ್ವೆಯಂತಹ ಪ್ರಮುಖ ಕ್ಷೇತ್ರಗಳು ವೇಗವಾಗಿ ಖಾಸಗೀಕರಣಗೊಳ್ಳುತ್ತಿವೆ. ಮೀಸಲಾತಿ ಎನ್ನುವುದು ಕೇವಲ ಸರ್ಕಾರಿ ಉದ್ಯೋಗ ಮತ್ತು ಶಿಕ್ಷಣಕ್ಕೆ ಸೀಮಿತವಾಗಿದೆ. ಅತ್ತ ಸರ್ಕಾರದ ವಲಯ ಕುಗ್ಗುತ್ತಿದ್ದರೆ, ಇತ್ತ ಮೀಸಲಾತಿಯ ಹಂಚಿಕೆಯ ಬಗ್ಗೆ ಮಾತ್ರ ನಾವು ಹೆಚ್ಚು ಚರ್ಚಿಸುತ್ತಿರುವುದು ಒಂದು ವಿರೋಧಾಭಾಸ," ಎಂದು ಅವರು ಹೇಳಿದ್ದಾರೆ.

ಎಸ್‌ಸಿ ಉಪವರ್ಗಗಳ ನಡುವೆ ಸಮರ್ಪಕ ಹಂಚಿಕೆಯಾಗಬೇಕು ಎಂಬುದು ನೈತಿಕವಾಗಿ ಸರಿ. ಆದರೆ, ಒಟ್ಟು ಅವಕಾಶಗಳೇ ಕಡಿಮೆಯಾಗುತ್ತಿರುವಾಗ, ಒಳಮೀಸಲಾತಿಯು ಅತ್ಯಂತ ಹಿಂದುಳಿದ ಉಪವರ್ಗಗಳಿಗೆ ಕೇವಲ ಸಂಕೇತಾತ್ಮಕ ನ್ಯಾಯವನ್ನು ನೀಡಬಹುದೇ ಹೊರತು ಬದುಕಿನಲ್ಲಿ ಕ್ರಾಂತಿಕಾರಿ ಬದಲಾವಣೆ ತರಲು ಸಾಧ್ಯವೇ ಎಂಬ ಪ್ರಶ್ನೆಯನ್ನು ಅವರು ಎತ್ತಿದ್ದಾರೆ.

ವರದಿಯ ವೈಜ್ಞಾನಿಕತೆಯ ಬಗ್ಗೆಯೂ ಸುಬ್ರಮಣಿ ಅವರು ಹಲವು ಅಂಶಗಳನ್ನು ಪ್ರಸ್ತಾಪಿಸಿದ್ದಾರೆ.

**ದತ್ತಾಂಶದ ಕೊರತೆ:** ಸಮಗ್ರ ಮತ್ತು ನವೀನ ದತ್ತಾಂಶಗಳ ಅಭಾವವು ನೀತಿಯ ನಿಖರತೆಯನ್ನು ಕುಂದಿಸಬಹುದು.

ಕಾನೂನು ಸಂಕೀರ್ಣತೆ: ಎಸ್‌ಸಿ ವರ್ಗವನ್ನು 'ಏಕಸಮಾನ ವರ್ಗ' ಎಂದು ಪರಿಗಣಿಸುವ ಕಾನೂನು ಪರೀಕ್ಷೆಯನ್ನು ಈ ನೀತಿ ಎದುರಿಸಬೇಕಿದೆ.

ಸಾಮಾಜಿಕ ಭಿನ್ನತೆ: ಸರಿಯಾದ ಜಾರಿಯಾಗದಿದ್ದರೆ ದಲಿತ ಸಮುದಾಯದ ಒಳಗೆ ವಿಭಜನೆ ಉಂಟಾಗಿ, ಸಮೂಹ ಏಕತೆ ದುರ್ಬಲಗೊಳ್ಳುವ ಅಪಾಯವಿದೆ.

ಖಾಸಗೀಕರಣದ ಈ ಕಾಲಘಟ್ಟದಲ್ಲಿ ಸಾಮಾಜಿಕ ನ್ಯಾಯ ಸಾಧಿಸಲು ಸುಬ್ರಮಣಿ ಅವರು ಕೆಲವು ಪ್ರಮುಖ ಕ್ರಮಗಳನ್ನು ಸೂಚಿಸಿದ್ದಾರೆ.

ಖಾಸಗಿ ವಲಯದಲ್ಲಿಯೂ 'ಅನುಕೂಲಾತ್ಮಕ ಕ್ರಮಗಳ' ವಿಸ್ತರಣೆ.

ಗುಣಮಟ್ಟದ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿಗೆ ಹೆಚ್ಚಿನ ಒತ್ತು.

ಸ್ವಯಂ ಉದ್ಯೋಗ, ಭೂಸ್ವಾಮ್ಯ ಮತ್ತು ಆರ್ಥಿಕ ಸಂಪನ್ಮೂಲಗಳ ಹಂಚಿಕೆ.

ಖಾಸಗಿ ಉದ್ಯೋಗಗಳಲ್ಲಿ ಭೇದಭಾವ ತಡೆಗಟ್ಟುವ ಕಾನೂನುಗಳ ಬಲಪಡಿಸುವಿಕೆ.

"ಕೇವಲ ಹಂಚಿಕೆಯ ಬಗ್ಗೆ ಚರ್ಚಿಸುವುದು ಸಾಕಾಗುವುದಿಲ್ಲ; ಹೊಸ ಅವಕಾಶಗಳ ಸೃಷ್ಟಿಯಲ್ಲಿ ಸಾಮಾಜಿಕ ನ್ಯಾಯವನ್ನು ಖಚಿತಪಡಿಸಿಕೊಳ್ಳುವುದು ಇಂದಿನ ತುರ್ತು ಅಗತ್ಯ. ಇಲ್ಲದಿದ್ದರೆ ಒಳಮೀಸಲಾತಿಯು ಸೀಮಿತ ಪರಿಣಾಮದ ನೀತಿಯಾಗಿ ಉಳಿಯುವ ಸಾಧ್ಯತೆಯಿದೆ," ಎಂದು ಅವರು ಎಚ್ಚರಿಸಿದ್ದಾರೆ.

# ಸರಕುಗಳನ್ನು ಗ್ರಾಹಕರು ಎಚ್ಚರಿಕೆಯಿಂದ ಖರೀದಿಸಬೇಕು: ನ್ಯಾ. ಅಣ್ಣಯ್ಯನವರ್

ರಾಮನಗರ

ರೈತರು, ಗ್ರಾಹಕರು, ಸಾರ್ವಜನಿಕರು ಸರಕುಗಳನ್ನು ಖರೀದಿಸುವಾಗ ಅದರ ಸಂಪೂರ್ಣ ಮಾಹಿತಿ ತಿಳಿದು, ಎಚ್ಚರಿಕೆಯಿಂದ ಖರೀದಿಸುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ನ್ಯಾ. ಎಂ.ಎಚ್. ಅಣ್ಣಯ್ಯನವರ್ ಅವರು ಕರೆ ನೀಡಿದರು.



ಬುಧವಾರ ನಗರದ ಎಂ.ಎಚ್. ಕಾಲೇಜು ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರ, ಎಂ.ಎಚ್. ಕಾಲೇಜು ಹಾಗೂ ಜಿಲ್ಲಾ ವಕೀಲರ ಸಂಘದ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ವಿಶ್ವ ಗ್ರಾಹಕ ದಿನಾಚರಣೆ–2026ಅನ್ನು ಉದ್ಘಾಟಿಸಿ ಮಾತನಾಡಿದರು.

ರೈತರು, ಗ್ರಾಹಕರು ಅಂಗಡಿಗಳಲ್ಲಿ ಕಲಬೆರಕೆ ಹಾಗೂ ಕಳಪೆ ಗುಣಮಟ್ಟದ ಸರಕುಗಳನ್ನು ಖರೀದಿಸಿ ಮೋಸಗಳಾದ ಸಂದರ್ಭದಲ್ಲಿ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ಪ್ರಕರಣ ದಾಖಲಿಸಿದರೆ, ಸಂಬಂಧಿಸಿದವರಿಂದ ಪರಿಹಾರ ಕೊಡಿಸಿಕೊಡಲು ಅನುಕೂಲವಾಗುತ್ತದೆ, ಆದ್ದರಿಂದ ಸರಕುಗಳನ್ನು ಖರೀದಿಸುವಾಗ ತಪ್ಪದೇ ರಶೀದಿಗಳನ್ನು ಪಡೆಯಬೇಕು, ಆನ್‌ಲೈನ್‌ಗಳಲ್ಲಿ ವಸ್ತುಗಳನ್ನು ಖರೀದಿಸುವ ಮುನ್ನ ಸರಿಯಾದ ಮಾಹಿತಿಗಳನ್ನು ತಿಳಿದುಕೊಳ್ಳಬೇಕು. ಆಕರ್ಷಣೀಯ ಜಾಹೀರಾತುಗಳಿಗೆ ಬೆರಗಾಗಿ ಸರಕುಗಳನ್ನು ಖರೀದಿಸಿ, ಮೋಸ ಅಥವಾ ವಂಚನೆಗೊಳಗಾಗದಂತೆ ಎಚ್ಚರವಾಗಿರಬೇಕೆಂದರು.

ಸರಕುಗಳಲ್ಲಿ ದೋಷಗಳು, ನ್ಯೂನ್ಯತೆಗಳು ಕಂಡುಬಂದು ತೊಂದರೆಗಳಾದಲ್ಲಿ ಅಂತಹ ಸಂದರ್ಭದಲ್ಲಿ ಗ್ರಾಹಕ ವೇದಿಕೆಯಲ್ಲಿ ಪ್ರಕರಣ ದಾಖಲಿಸಬಹುದು. ಗ್ರಾಹಕರಿಲ್ಲದೇ ಮಾರುಕಟ್ಟೆ ನಡೆಯುವುದಿಲ್ಲ. ಆದ್ದರಿಂದ ಮಹಾತ್ಮ ಗಾಂಧೀಜಿ ಅವರು ಗ್ರಾಹಕರನ್ನು ಮಾರುಕಟ್ಟೆಯ ರಾಜರು ಎಂದಿದ್ದಾರೆ, ಗ್ರಾಹಕರು ಯಾವುದೇ ವಸ್ತುಗಳನ್ನು ಖರೀದಿಸುವ ಮುನ್ನ ಅದರ ಸಂಪೂರ್ಣ ಮಾಹಿತಿ ತಿಳಿದು ಖರೀದಿಸಬೇಕು ಹಾಗೂ ಆ ವಸ್ತುವಿನ ಕುರಿತು ಮತ್ತೊಬ್ಬ ಗ್ರಾಹಕರಿಗೆ ತಿಳಿಸಬೇಕು. ಒಂದು ವೇಳೆ ಮಾಹಿತಿ ತಿಳಿದುಕೊಳ್ಳದೇ ವಸ್ತುಗಳನ್ನು ಖರೀದಿಸಿದ್ದಲ್ಲಿ ಸಮಸ್ಯೆಗಳಿಗೆ ಒಳಗಾಗುವ ಸಂದರ್ಭಗಳು ಎದುರಾಗುತ್ತವೆ ಎಂದರು.

ಮಾರುಕಟ್ಟೆಗಳಲ್ಲಿ ನಡೆಯುವಂತಹ ಮೋಸ ಮತ್ತು ವಂಚನೆಗಳಿಗೆ ಪರಿಹಾರ ಪಡೆಯುವುದು ಹೇಗೆ ಎಂಬ ಬಗ್ಗೆ ಹೆಚ್ಚಿನ ಗ್ರಾಹಕರಿಗೆ ತಿಳಿದಿರುವುದಿಲ್ಲ. ಈ ನಿಟ್ಟಿನಲ್ಲಿ ಗ್ರಾಹಕರಿಗೆ ಇರುವಂತಹ ಹಕ್ಕುಗಳ ಮುಖಾಂತರ ಯಾವ ರೀತಿ ಸಮಸ್ಯೆಗಳಿಗೆ ಪರಿಹಾರ ಪಡೆದುಕೊಳ್ಳಬೇಕು ಎಂಬುದರ ಬಗ್ಗೆ ಜನರಿಗೆ ಮಾಹಿತಿ ನೀಡಲು, ಗ್ರಾಹಕರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಲು ಪ್ರತಿವರ್ಷ ಮಾರ್ಚ್ 15 ರಂದು ವಿಶ್ವ ಗ್ರಾಹಕರ ಹಕ್ಕುಗಳ ದಿನವನ್ನು ಆಚರಿಸಲಾಗುತ್ತದೆ ಎಂದು ಹೇಳಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಸವಿತ ಪಿ.ಆರ್ ಅವರು ಮಾತನಾಡಿ, ಗ್ರಾಹಕರ ಕಾಯ್ದೆಯು ಮಗುವಿನಿಂದ ಹಿಡಿದು ವಯಸ್ಸಾಗುವವರೆಗೂ ಅನ್ವಯಿಸುತ್ತದೆ. ಯಾವುದೇ ವಸ್ತುಗಳನ್ನು ಖರೀದಿಸಿದಾಗ ಲೋಪದೋಷಗಳು ಕಂಡು ಬಂದಲ್ಲಿ ನೇರವಾಗಿ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ದೂರು ದಾಖಲಿಸಬಹುದು. ಅಮೆಜಾನ್, ಫ್ಲಿಪ್‌ಕಾರ್ಟ್ ನಂತಹ ಆನ್‌ಲೈನ್ ಆ್ಯಪ್‌ಗಳ ಮೂಲಕ ಖರೀದಿ ಮಾಡಿ ಆ ವಸ್ತು ಸಮಯಕ್ಕೆ ಸರಿಯಾಗಿ ಬರದಿದ್ದರೆ ಹಾಗೂ ಬದಲಾದ ವಸ್ತುಗಳು ಬಂದರೆ ಪ್ರಕರಣ ದಾಖಲಿಸಬಹುದು ಎಂದರು.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ರೇಣುಕಾದೇವಿ ದೇಶಪಾಂಡೆ ಅವರು ಮಾತನಾಡಿ, ಯಾವುದೇ ವಸ್ತುವನ್ನು ಗ್ರಾಹಕ ಹಣ ಕೊಟ್ಟು ಕೊಂಡುಕೊಂಡಾಗ ಅದಕ್ಕೆ ಮುಖ್ಯವಾಗಿ ರಶೀದಿಯನ್ನು ಕಡ್ಡಾಯವಾಗಿ ಪಡೆದುಕೊಳ್ಳಬೇಕು. ಒಂದು ವೇಳೆ ಮಾಲೀಕರು ಗ್ರಾಹಕನಿಗೆ ಕಳಪೆ ಪ್ರಮಾಣದ ವಸ್ತುಗಳನ್ನು ಕೊಟ್ಟಿದ್ದರೆ ಅವರ ಮೇಲೆ ಜಿಲ್ಲಾ ಗ್ರಾಹಕರ ಆಯೋಗದಲ್ಲಿ ಪ್ರಕರಣ ದಾಖಲು ಮಾಡಬಹುದು ಎಂದರು.

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರಾದ ಶಿಲ್ಪ ಅವರು ಮಾತನಾಡಿ, ಜಿಲ್ಲೆಯಲ್ಲಿ ಎಲ್.ಪಿ.ಜಿ. ಸಿಲಿಂಡರ್‌ಗಳ ಕೊರತೆಯಿಲ್ಲ ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುಳ್ಳು ವದಂತಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದು. ಜಿಲ್ಲೆಯ ಎಲ್ಲಾ ಗ್ರಾಹಕರು ಎಲ್‌ಪಿಜಿ ಸರಬರಾಜಿನ ಬಗ್ಗೆ ಯಾವುದೇ ರೀತಿಯ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ, ಗ್ರಾಹಕರು ಆತಂಕದಲ್ಲಿ ತುರ್ತು ಅನಗತ್ಯ ಬುಕ್ಕಿಂಗ್ ಮಾಡದೇ ಕೃತಕ ಬೇಡಿಕೆ ಸೃಷ್ಟಿಯಾಗದಂತೆ, ಸಮತೋಲನ ಕಾಪಾಡಿಕೊಂಡು ಸಮರ್ಪಕವಾಗಿ ಬಳಕೆ ಮಾಡುವಂತೆ ತಿಳಿಸಿದರು.

ಗ್ರಾಹಕರಿಗೆ ಏಜೆನ್ಸಿಯಲ್ಲಿ ನೇರವಾಗಿ ಬುಕಿಂಗ್ ಮಾಡಲು ಅವಕಾಶವಿರುವುದಿಲ್ಲ. ಪರ್ಯಾಯವಾಗಿ ಐಒಸಿ, ಬಿಪಿಸಿ ಮತ್ತು ಎಚ್‌ಪಿಸಿ ಎಲ್‌ಪಿಜಿ ಕಂಪನಿಗಳಲ್ಲಿ ಗ್ರಾಹಕರು ಸಾಮಾನ್ಯವಾಗಿ ಮಿಸ್ ಕಾಲ್ (ರಿಜಿಸ್ಟರ್ ಮೊಬೈಲ್ ನಂಬರ್) ಮೂಲಕ ಬುಕಿಂಗ್ ಮಾಡುತ್ತಿದ್ದು ಪರ್ಯಾಯವಾಗಿ ಕಂಪನಿ ಆ್ಯಪ್ (ಎಚ್‌ಪಿ ಪೇ, ಇಂಡಿಯನ್ ಆಯಿಲ್ ಒನ್ ಆಪ್, ಹೆಲೋ ಬಿಪಿಸಿ), ಕಂಪನಿ ಪೋರ್ಟಲ್, ವಾಟ್ಸ್‌ಆ್ಯಪ್, ಐವಿಆರ್‌ಎಸ್, ಬಿಬಿಪಿಎಸ್ ಎಸ್‌ಎಂಎಸ್ ಪ್ಲಾಟ್ ಫಾರಂಗಳನ್ನು ಬಳಸಬಹುದಾಗಿದೆ ಎಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಕೆ.ಪಿ. ಕೆಂಪಯ್ಯ, ವಕೀಲರು ಹಾಗೂ ಗ್ರಾಹಕ ಸಂಪನ್ಮೂಲ ವ್ಯಕ್ತಿ ಗೋಪಾಲಗೌಡ, ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರ ಅಧ್ಯಕ್ಷರಾದ ಡಾ. ಕೆ.ಎಂ. ಸೌಗಂದ್ ಗಣೇಶ್ ಅವರು ಮಾತನಾಡಿದರು.

ಜಿಲ್ಲಾ ಕಾನೂನು ಮಾಪನಾ ಇಲಾಖೆಯ ಸಹಾಯಕ ನಿಯಂತ್ರಕರಾದ ಸುಜಾತ, ಜಿಲ್ಲಾ ಗ್ರಾಹಕರ ರಕ್ಷಣಾ ಪರಿಷತ್ತಿನ ಸದಸ್ಯರಾದ ಕಲಾವತಿಬಾಯಿ ಎಚ್.ಎ., ಚಂದ್ರಯ್ಯ ಕೆ., ಎಚ್. ಗೋವಿಂದಯ್ಯ ಉಪಸ್ಥಿತರಿದ್ದರು.

# ಹಳೇ ಮೀಸಲಾತಿ ಜಾರಿಗೆ ಒತ್ತಾಯ



ಬೇತಮಂಗಲ

"ಒಳಮೀಸಲಾತಿ ರಹಿತ ಹಳೇ ಮೀಸಲಾತಿಯನ್ನು ಯಥಾವತ್ತಾಗಿ ಜಾರಿಗೊಳಿಸಬೇಕು ಮತ್ತು ಬಲಗೈ ಸಮುದಾಯದ ಹಿತರಕ್ಷಣೆ ಮಾಡಬೇಕು," ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟ ಬೆಂಗಳೂರಿನಲ್ಲಿ ಹಮ್ಮಿಕೊಂಡಿರುವ ಬೃಹತ್ ಪ್ರತಿಭಟನಾ ಸಮಾವೇಶಕ್ಕೆ ಕೆಜಿಎಫ್ ಗ್ರಾಮಾಂತರ ಭಾಗದ ನೂರಾರು ಮುಖಂಡರು ಹಾಗೂ ಕಾರ್ಯಕರ್ತರು ಬುಧವಾರದಂದು ಪ್ರಯಾಣ ಬೆಳೆಸಿದರು.

ರಾಜಧಾನಿಯ ಫ್ರೀಡಂ ಪಾರ್ಕ್‌ನಲ್ಲಿ ನಡೆಯಲಿರುವ ಈ ನಿರ್ಣಾಯಕ ಸಮಾವೇಶದಲ್ಲಿ ಪಾಲ್ಗೊಳ್ಳಲು ಬೆಳಿಗ್ಗೆಯೇ ಕೆಜಿಎಫ್ ಗ್ರಾಮಾಂತರ ಪ್ರದೇಶದ ವಿವಿಧ ಗ್ರಾಮಗಳಿಂದ ಕಾರ್ಯಕರ್ತರು ಒಂದೆಡೆ ಸೇರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಸಮುದಾಯದ ಮುಖಂಡ ಸಾಮ್ರಾಟ್ ಕೃಷ್ಣಮೂರ್ತಿ, "ಪ್ರಸ್ತುತ ಪ್ರಸ್ತಾಪಿಸಲಾಗಿರುವ ಒಳಮೀಸಲಾತಿಯಿಂದ ಬಲಗೈ ಸಮುದಾಯಕ್ಕೆ ದೊಡ್ಡ ಮಟ್ಟದ ಅನ್ಯಾಯವಾಗುತ್ತಿದೆ. ಯಾವುದೇ ಬದಲಾವಣೆ ಇಲ್ಲದ ಹಳೇ ಮೀಸಲಾತಿ ಪದ್ಧತಿಯನ್ನೇ ಸರ್ಕಾರ ಮುಂದುವರಿಸಬೇಕು. ನಮ್ಮ ಹಕ್ಕುಗಳಿಗಾಗಿ ಹಮ್ಮಿಕೊಂಡಿರುವ ಈ ಸಮಾವೇಶಕ್ಕೆ ಕೆಜಿಎಫ್ ಭಾಗದಿಂದ ನೂರಾರು ಸಂಖ್ಯೆಯಲ್ಲಿ ಕಾರ್ಯಕರ್ತರು ಉತ್ಸಾಹದಿಂದ ಭಾಗವಹಿಸುತ್ತಿದ್ದೇವೆ," ಎಂದು ತಿಳಿಸಿದರು.

ಸಮುದಾಯದ ಹಕ್ಕುಗಳ ರಕ್ಷಣೆಗಾಗಿ ಘೋಷಣೆಗಳನ್ನು ಕೂಗುತ್ತಾ, ಬಸ್ ಹಾಗೂ ಖಾಸಗಿ ವಾಹನಗಳ ಮೂಲಕ ಕಾರ್ಯಕರ್ತರು ಬೆಂಗಳೂರಿನತ್ತ ತೆರಳಿದರು. ಈ ಪ್ರತಿಭಟನೆಯು ಸರ್ಕಾರದ ಮೇಲೆ ಒತ್ತಡ ಹೇರುವ ಉದ್ದೇಶ ಹೊಂದಿದ್ದು, ಹಳೇ ಮೀಸಲಾತಿಯ ಅಸ್ತಿತ್ವಕ್ಕಾಗಿ ಸಮುದಾಯ ಒಗ್ಗೂಡಿದೆ.

ಈ ಸಂದರ್ಭದಲ್ಲಿ ಆರ್. ಕೆಂಚಪ್ಪ, ರಾಧಾಕೃಷ್ಣ, ಕೆ.ವಿ. ಸುಬ್ರಮಣಿ, ಶ್ರೀನಾಥ್ ನಾಸ್ತಿಕ್, ಚಂದ್ರಪ್ಪ, ಕೆ.ವಿ. ಆನಂದ್, ಈಶ್ವರಪ್ಪ, ಶಿವಮಣಿ, ಸಂಜೀವಪ್ಪ, ಶ್ರೀನಿವಾಸ್, ಚಲಪತಿ ಸೇರಿದಂತೆ ಬಲಗೈ ಸಮುದಾಯದ ನೂರಾರು ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಪರೀಕ್ಷಾ ನಿಯಮ ಗಾಳಿಗೆ!



ವಿಜಯಪುರ

ಪಟ್ಟಣದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಆರಂಭವಾಗಿದ್ದು, ಪರೀಕ್ಷಾ ಕೇಂದ್ರಗಳ ಸುತ್ತ 144ನೇ ಸೆಕ್ಷನ್ ಜಾರಿಯಲ್ಲಿದ್ದರೂ ಸರ್ಕಾರಿ ನಿಯಮಗಳನ್ನು ಬಹಿರಂಗವಾಗಿ ಉಲ್ಲಂಘಿಸುತ್ತಿರುವುದು ಕಂಡುಬಂದಿದೆ. ಪರೀಕ್ಷಾ ಕೇಂದ್ರದ 200 ಮೀಟರ್ ವ್ಯಾಪ್ತಿಯಲ್ಲಿ ಜೆರಾಕ್ಸ್ ಅಂಗಡಿಗಳನ್ನು ಮುಚ್ಚುವಂತೆ ಕಟ್ಟುನಿಟ್ಟಿನ ಆದೇಶವಿದ್ದರೂ, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮುಂಭಾಗದ ಜೆರಾಕ್ಸ್ ಅಂಗಡಿಯೊಂದು ರಾಜಾರೋಷವಾಗಿ ವಹಿವಾಟು ನಡೆಸುತ್ತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ಅಕ್ರಮ ಅಥವಾ ಅವ್ಯವಹಾರ ನಡೆಯದಂತೆ ತಡೆಯಲು ಸೈಬರ್ ಸೆಂಟರ್ ಹಾಗೂ ಜೆರಾಕ್ಸ್ ಅಂಗಡಿಗಳನ್ನು ಕಡ್ಡಾಯವಾಗಿ ಮುಚ್ಚಲು ಸೂಚಿಸಲಾಗಿತ್ತು. ಆದರೆ, ಪರೀಕ್ಷಾ ಕೇಂದ್ರದ ತೀರ ಸಮೀಪದಲ್ಲೇ ವ್ಯಾಪಾರ ನಡೆಯುತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಕಣ್ಣಿದ್ದೂ ಕುರುಡರಂತೆ ವರ್ತಿಸುತ್ತಿರುವುದು ಅಧಿಕಾರಿಗಳ ಕರ್ತವ್ಯ ಲೋಪವನ್ನು ಎತ್ತಿ ತೋರಿಸುತ್ತಿದೆ.

ಪರೀಕ್ಷೆ ನಡೆಯುವ ಸಮಯದಲ್ಲಿ ಜೆರಾಕ್ಸ್ ಅಂಗಡಿಗಳ ಬಳಿ ಶಾಲೆಯ ಶಿಕ್ಷಕರು ಓಡಾಡುತ್ತಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಇದಲ್ಲದೆ, ಪರೀಕ್ಷಾ ಕೊಠಡಿಗಳ ಪಕ್ಕದಲ್ಲಿರುವ ಆಟದ ಮೈದಾನದಲ್ಲಿ ಸಾರ್ವಜನಿಕರು ಮುಕ್ತವಾಗಿ ಓಡಾಡುತ್ತಿರುವುದು ಪರೀಕ್ಷಾ ಭದ್ರತೆಯ ಬಗ್ಗೆ ಪ್ರಶ್ನೆಗಳನ್ನು ಮೂಡಿಸಿದೆ. 144ನೇ ಸೆಕ್ಷನ್ ಜಾರಿಯಲ್ಲಿದ್ದರೂ ಸಾರ್ವಜನಿಕರ ಪ್ರವೇಶಕ್ಕೆ ಕಡಿವಾಣ ಹಾಕುವಲ್ಲಿ ಇಲಾಖೆ ವಿಫಲವಾಗಿದೆ ಎಂಬ ಮಾತುಗಳು ಕೇಳಿಬರುತ್ತಿವೆ.

ಸರ್ಕಾರದ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕಾದ ಅಧಿಕಾರಿಗಳೇ ಮೌನಕ್ಕೆ ಶರಣಾಗಿರುವುದು ಪರೀಕ್ಷೆಯ ಪಾರದರ್ಶಕತೆಗೆ ಧಕ್ಕೆ ತರುವ ಸಾಧ್ಯತೆಯಿದೆ. ಸಂಬಂಧಪಟ್ಟ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳು ಈ ಕೂಡಲೇ ಗಮನಹರಿಸಿ, ನಿಯಮ ಉಲ್ಲಂಘಿಸುವ ಜೆರಾಕ್ಸ್ ಅಂಗಡಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಮತ್ತು ಪರೀಕ್ಷಾ ಕೇಂದ್ರಗಳ ಸುತ್ತ ಬಿಗಿ ಭದ್ರತೆ ಕಲ್ಪಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

# ವಾರದಲ್ಲಿ 2 ಬಾರಿ ನೀರು ಪೂರೈಕೆಗೆ ಮನವಿ



ಬಳ್ಳಾರಿ


ನಗರದಲ್ಲಿ 15 ದಿನಕ್ಕೊಮ್ಮೆ ನೀರು ಪೂರೈಕೆ ಆಗುತ್ತಿದ್ದು, ವಾರದಲ್ಲಿ ಎರಡು ಬಾರಿ ನೀರು ಪೂರೈಸುವಂತೆ ಕರ್ನಾಟಕ ಮಾನವ ಹಕ್ಕುಗಳ ಕಾವಲು ಸಮಿತಿ (ರಿ) ರಾಜ್ಯಾಧ್ಯಕ್ಷ ಡಾ. ಯು. ಉರುಕುಂದ ರೆಡ್ಡಿ ಮನವಿ ಮಾಡಿದ್ದಾರೆ.

ನಗರದ ಜನರ ಪರವಾಗಿ ಮಾತನಾಡಿದ ಅವರು, ನೀರಿನ ಅಭಾವದಿಂದ ದಿನನಿತ್ಯ ಜೀವನ ಅಸ್ತವ್ಯಸ್ತವಾಗಿದ್ದು, ಮಹಿಳೆಯರು ಹಾಗೂ ಮಕ್ಕಳಿಗೆ ಹೆಚ್ಚಿನ ತೊಂದರೆ ಉಂಟಾಗಿದೆ. ಈ ಸಮಸ್ಯೆಯನ್ನು ತಕ್ಷಣ ಪರಿಹರಿಸಲು ವಾರ್ಡಿನ ಪ್ರತಿಯೊಬ್ಬ ಸದಸ್ಯರೂ ಜವಾಬ್ದಾರಿಯಾಗಿ ಗಮನ ಹರಿಸಬೇಕು ಎಂದು ಒತ್ತಾಯಿಸಿದರು.

ವಾರಕ್ಕೆ ಕನಿಷ್ಠ ಎರಡು ಬಾರಿ, ಒಂದರಿಂದ ಎರಡು ಗಂಟೆಗಳಾದರೂ ನೀರು ಪೂರೈಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು. ನಗರ ಮೇಯರ್‌ರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಬಳ್ಳಾರಿಯಲ್ಲಿ ಮುಂದಿನ ದಿನಗಳಲ್ಲಿ ನೀರಿನ ಅಭಾವ ಉಂಟಾಗದಂತೆ ಶಾಶ್ವತ ಪರಿಹಾರ ಒದಗಿಸಬೇಕು ಎಂದು ಹೇಳಿದರು.

ಜನರ ಮೂಲಭೂತ ಅಗತ್ಯವಾದ ಕುಡಿಯುವ ನೀರಿನ ಸಮಸ್ಯೆಯನ್ನು ತ್ವರಿತವಾಗಿ ಬಗೆಹರಿಸದಿದ್ದರೆ ಹೋರಾಟವನ್ನು ತೀವ್ರಗೊಳಿಸುವ ಎಚ್ಚರಿಕೆಯನ್ನು ರೆಡ್ಡಿ ನೀಡಿದರು.

# ಶಿಕ್ಷಣಕ್ಕೆ ಒತ್ತು ನೀಡುವಂತೆ ಶ್ರೀಗಳ ಬೋಧನೆ



ಮುಳಬಾಗಿಲು

"ಪೋಷಕರು ತಮ್ಮ ಮಕ್ಕಳಿಗೆ ಕೇವಲ ಆಸ್ತಿ ಮಾಡುವುದಕ್ಕಿಂತ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಅವರ ವ್ಯಕ್ತಿತ್ವ ರೂಪಿಸಬೇಕು. ಸಮಾಜದಲ್ಲಿ ಕೇವಲ ಸುಂದರ ದೇವಾಲಯಗಳನ್ನು ಕಟ್ಟಿದರೆ ಸಾಲದು, ಅದರ ಜೊತೆಗೆ ಶಾಲೆಯೂ ನಿರ್ಮಾಣವಾಗಬೇಕು," ಎಂದು ಹೊಸದುರ್ಗದ ಕನಕ ಗುರುಪೀಠದ ಶ್ರೀ ಈಶ್ವರಾನಂದ ಪುರಿ ಸ್ವಾಮೀಜಿ ತಿಳಿಸಿದರು.

ತಾಲ್ಲೂಕಿನ ತಾಯಲೂರು ಗ್ರಾಮದ ಪ್ರಸಿದ್ಧ ಶ್ರೀ ಭತ್ತೇಶ್ವರ ಸ್ವಾಮಿ ದೇವಾಲಯದ ಜೀರ್ಣೋದ್ಧಾರ ಮತ್ತು ಮಹಾ ಕುಂಭಾಭಿಷೇಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಆಶೀರ್ವಚನ ನೀಡಿದರು.

ಇತ್ತೀಚಿನ ದಿನಗಳಲ್ಲಿ ಜನರು ಹಬ್ಬ ಹರಿದಿನಗಳಿಗೆ ನೀಡುವ ಪ್ರಾಮುಖ್ಯತೆಯನ್ನು ಮಕ್ಕಳ ಶಿಕ್ಷಣಕ್ಕೆ ನೀಡುತ್ತಿಲ್ಲ ಎಂದು ವಿಷಾದಿಸಿದ ಶ್ರೀಗಳು, "ಎಸ್.ಎಸ್.ಎಲ್.ಸಿ ಪರೀಕ್ಷೆ ಹತ್ತಿರ ಬಂದಾಗ ಪ್ರವೇಶ ಪತ್ರ ಹಿಡಿದು ಶಾಸ್ತ್ರ ಕೇಳಲು ಹೋಗುವ ಬದಲು, ಮಕ್ಕಳಿಗೆ ಸರಿಯಾದ ಓದಿನ ವ್ಯವಸ್ಥೆ ಮಾಡಿ. ಅಂಬೇಡ್ಕರ್ ಮತ್ತು ಕನಕದಾಸರು ಜ್ಞಾನ ಹಾಗೂ ಭಕ್ತಿಯಿಂದಲೇ ಜಗತ್ತನ್ನು ತಿದ್ದಿದ್ದಾರೆ. ಜಾತಿಯಿಂದ ಯಾರೂ ದೊಡ್ಡವರಾಗುವುದಿಲ್ಲ, ವ್ಯಕ್ತಿತ್ವದಿಂದ ಮಾತ್ರ ಉನ್ನತ ಸ್ಥಾನ ಪಡೆಯಲು ಸಾಧ್ಯ," ಎಂದು ಕಿವಿಮಾತು ಹೇಳಿದರು. ಅಲ್ಲದೆ, ಕಂದಾಚಾರ ಮತ್ತು ಮೌಢ್ಯಗಳಿಂದ ಹೊರಬಂದು ಮಾನವ ಧರ್ಮವನ್ನು ಪಾಲಿಸುವಂತೆ ಭಕ್ತರಿಗೆ ತಿಳಿಹೇಳಿದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಮಾಜಿ ಸಚಿವ ಹೆಚ್. ನಾಗೇಶ್, "ಚುನಾವಣಾ ಸಮಯದಲ್ಲಿ ನನ್ನನ್ನು ಕೈಹಿಡಿದ ತಾಯಲೂರು ಕ್ಷೇತ್ರವನ್ನು ನಾನು ಎಂದಿಗೂ ಮರೆಯುವುದಿಲ್ಲ. ಸದ್ಯ ನನಗೆ ಅಧಿಕಾರವಿಲ್ಲದಿದ್ದರೂ, ತಾಲ್ಲೂಕಿನ ಜನರ ಅಭಿವೃದ್ಧಿ ಕೆಲಸಗಳಿಗಾಗಿ ನನ್ನ ಪತ್ರದ ಮೂಲಕ ಸರ್ಕಾರದ ಸೌಲಭ್ಯಗಳನ್ನು ಕೊಡಿಸಲು ಶ್ರಮಿಸುತ್ತೇನೆ. ಈ ಭಾಗದ ಜನರೊಂದಿಗೆ ನಿರಂತರ ಸಂಪರ್ಕದಲ್ಲಿರಲು ಕೂತಾಂಡ್ಲಹಳ್ಳಿ ಬಳಿ ಜಮೀನು ಖರೀದಿಸಿದ್ದೇನೆ," ಎಂದರು.

ದೇವಾಲಯದ ಕುಂಭಾಭಿಷೇಕದ ಅಂಗವಾಗಿ ಮೂಲ ವಿಗ್ರಹಗಳಿಗೆ ವಿವಿಧ ಬಗೆಯ ಪೂಜೆಗಳನ್ನು ನೆರವೇರಿಸಲಾಯಿತು. ದೇವಾಲಯದ ಒಳಭಾಗವನ್ನು ಹಣ್ಣು ಮತ್ತು ಹೂವುಗಳಿಂದ ಸುಂದರವಾಗಿ ಅಲಂಕರಿಸಲಾಗಿತ್ತು. ಇದೇ ವೇಳೆ ಭಕ್ತರ ತಲೆಯ ಮೇಲೆ ತೆಂಗಿನಕಾಯಿ ಒಡೆಯುವ ಪವಾಡ ಕಾರ್ಯಕ್ರಮವು ನೆರೆದಿದ್ದವರ ಗಮನ ಸೆಳೆಯಿತು.

ದೇವಾಲಯದ ಮುಖ್ಯಸ್ಥ ಶ್ರೀನಿವಾಸ್, ಯುವ ಮುಖಂಡ ಕಲ್ಲುಪಲ್ಲಿ ಪ್ರಕಾಶ್, ಮುಖಂಡರಾದ ಸಂಗೊಳ್ಳಿ ವೆಂಕಟೇಶ್, ಚೆನ್ನಾಪುರ ವೆಂಕಟೇಶ್ ಗೌಡ, ರಾಮಲಿಂಗರೆಡ್ಡಿ, ಟಿ.ಎಸ್. ರಮೇಶ್, ವಕೀಲ ಸಿ.ವಿ. ಶ್ರೀನಿವಾಸ್, ಬೆಳಪನಹಳ್ಳಿ ರಾಮರೆಡ್ಡಿ, ಎಂ.ಸಿ. ಫಾಲ್ಗುಣ, ಗ್ರಾ.ಪಂ. ಅಧ್ಯಕ್ಷೆ ಪದ್ಮಮ್ಮ ಸೇರಿದಂತೆ ಸಾವಿರಾರು ಭಕ್ತಾದಿಗಳು ಭಾಗವಹಿಸಿದ್ದರು.

# ನಿವೃತ್ತಿ ವೇತನ ಹಾಗೂ ಪಿಂಚಣಿ ಪರಿಷ್ಕರಣೆಗೆ ಆಗ್ರಹ

ತುಮಕೂರು

ಕಳೆದ ವರ್ಷದ ಕೇಂದ್ರ ಬಜೆಟ್ ಮೂಲಕ ಜಾರಿಗೆ ತರುತ್ತಿರುವ ಕಾಯ್ದೆಯ ಪ್ರಕಾರ ನಿವೃತ್ತ ನೌಕರರಿಗೆ ಕರಾಳ ಶಾಸನವಾಗಿದ್ದು, ಇದರ ವಿರುದ್ಧ ತುಮಕೂರು ಜಿಲ್ಲಾ ನಿವೃತ್ತ ಸರ್ಕಾರಿ ನೌಕರರು ಪ್ರತಿಭಟಿಸಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಬುಧವಾರ ಬೆಳಗ್ಗೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಿದ ನಿವೃತ್ತ ನೌಕರರು ಕೇಂದ್ರ ಸರ್ಕಾರ ಜಾರಿಗೆ ತರಲು ಹೊರಟಿರುವ ಊರ್ಜಿತ ಕಾಯ್ದೆಯನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಸಂಘದ ಅಧ್ಯಕ್ಷೆ ಬಾ.ಹ. ರಮಾಕುಮಾರಿ ಅವರು ನಿರ್ಮಲ ಸೀತಾರಾಮನ್ ಅವರು ಕಳೆದ ಬಜೆಟ್‌ನಲ್ಲಿ ಊರ್ಜಿತ ಕಾಯ್ದೆಯನ್ನು ಮಂಡಿಸಿದ್ದರು. ಇದರ ಪ್ರಕಾರ ನಿವೃತ್ತರಿಗೆ ಡಿ.ಎ. ಮತ್ತು ಪಿಂಚಣಿ ಪರಿಷ್ಕರಣೆ ಇಲ್ಲವಾಗುತ್ತದೆ. ಇದನ್ನೇ ನಂಬಿ ಬದುಕುವ ನಿವೃತ್ತರು ಸಂಕಷ್ಟಕ್ಕೆ ಈಡಾಗುತ್ತಾರೆ. ಆದಕಾರಣ ಕೇಂದ್ರ ಸರ್ಕಾರದ ಈ ನಿರ್ಧಾರದ ವಿರುದ್ಧ ರಾಷ್ಟ್ರಾದ್ಯಂತ ಕರಾಳ ದಿನವಾಗಿ ಆಚರಿಸಲಾಗುತ್ತಿದ್ದು, ಇದರನ್ವಯ ತುಮಕೂರಿನಲ್ಲಿ ಇಂದು ಪ್ರತಿಭಟನೆ ನಡೆಸಲಾಗುತ್ತಿದೆ ಎಂದರು.

ಜೀವನದ ಕೊನೆಯ ಘಟ್ಟದಲ್ಲಿ ಬದುಕುವ ನಿವೃತ್ತ ನೌಕರರು ಹೆಚ್ಚು ಅನಾರೋಗ್ಯಕ್ಕೆ ಒಳಗಾಗುತ್ತಾರೆ. ಇದರಿಂದಾಗಿ ಹೆಚ್ಚು ಖರ್ಚುಗಳು ಬರುತ್ತವೆ. ಕಾಲ ಕಾಲಕ್ಕೆ ಡಿ.ಎ., ಸಿಗಬೇಕು. ಇದರಿಂದ ಕನಿಷ್ಠ ಮಟ್ಟದ ಜೀವನ ನಿರ್ವಹಣೆಗೆ ಅವಕಾಶವಾಗುತ್ತದೆ. ನಿವೃತ್ತಿ ವೇತನ ಹಾಗೂ ಪಿಂಚಣಿ ಪರಿಷ್ಕರಣೆ ಮಾಡುವುದಿಲ್ಲ ಎಂದು ಹೇಳಿರುವುದು ನಿವೃತ್ತ ನೌಕರರ ಬದುಕಿನ ಮೇಲೆ ಗಾಢ ಪರಿಣಾಮ ಉಂಟು ಮಾಡುತ್ತದೆ. ಆದಕಾರಣ ಕೇಂದ್ರ ಸರ್ಕಾರ ಇದರ ಪರಿಶೀಲನೆ ನಡೆಸಬೇಕು ಎಂದು ಅವರು ಒತ್ತಾಯಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಗೆ ಮನವಿ ಸಲ್ಲಿಸಿ ಕೇಂದ್ರ ಸರ್ಕಾರಕ್ಕೆ, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಪತ್ರ ಕಳುಹಿಸಿಕೊಡುವಂತೆ ನಿವೃತ್ತ ನೌಕರರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸಂಘದ ಪ್ರಧಾನ ಕಾರ್ಯದರ್ಶಿ ಪುಟ್ಟನರಸಯ್ಯ, ಉಪಾಧ್ಯಕ್ಷ ಅನಂತರಾಮಯ್ಯ, ಖಜಾಂಚಿ ನರಸಿಂಹರೆಡ್ಡಿ, ಮಂಜುಳ ದೇವಿ, ಭವಾನಮ್ಮ, ಅಕ್ಕಮ್ಮ ಮುಂತಾದವರು ಮಾತನಾಡಿದರು.

ಭಾರತ ಸಾರಥಿ
27/03/2026
ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

# ಬಸವಣ್ಣನಿಗಿಂತ ಮೊದಲೇ ವಚನ ಕ್ರಾಂತಿ ಮಾಡಿದವರು ದಾಸಿಮಯ್ಯ: ಡಾ. ರವಿ

ರಾಮನಗರ

"ಮಹಾನ್ ಮಾನವತಾವಾದಿ ಬಸವಣ್ಣನಿಗಿಂತಲೂ ಮೊದಲು ವಚನಗಳನ್ನು ರಚಿಸಿದ ಆದ್ಯ ವಚನಕಾರ ದೇವರ ದಾಸಿಮಯ್ಯ ಅವರು ತಮ್ಮ ವಚನಗಳಲ್ಲಿ ಮಹಿಳಾ ಸಮಾನತೆಯನ್ನು ಅತ್ಯಂತ ಪ್ರಖರವಾಗಿ ಬಿಂಬಿಸಿದ್ದಾರೆ," ಎಂದು ಜನಪದ ಲೋಕದ ಕ್ಯೂರೇಟರ್ ಡಾ. ರವಿ ಯು.ಎಂ. ಹೇಳಿದರು.

ನಗರದ ಕಂದಾಯ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಶ್ರೀ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.

12ನೇ ಶತಮಾನದ ಸಾಂಸ್ಕೃತಿಕ ಕ್ರಾಂತಿಯ ಬಗ್ಗೆ ಮಾತನಾಡಿದ ಡಾ. ರವಿ, "ದಾಸಿಮಯ್ಯನವರ ವಚನಗಳಲ್ಲಿ ಸಂಕ್ಷಿಪ್ತತೆ, ಸರಳತೆ ಮತ್ತು ಅರ್ಥದ ಪ್ರಖರತೆ ಇದೆ. ಸಮಾಜದಲ್ಲಿ ಸಮಾನತೆ ಬರಬೇಕಾದರೆ ಅದು ಮನೆಯಿಂದಲೇ ಆರಂಭವಾಗಬೇಕು ಎಂದು ಅವರು ಬಯಸಿದ್ದರು. ತಮ್ಮ ಮಡದಿ ದುಗ್ಗಳೆಯ ಬಗ್ಗೆ ಅಪಾರ ಗೌರವ ಹೊಂದಿದ್ದ ಅವರು, 'ಸತಿ ಇದ್ದರೆ ಸಂಸಾರ ಲೇಸು, ಇಲ್ಲದಿದ್ದರೆ ಸನ್ಯಾಸ ಲೇಸು' ಎನ್ನುವ ಮೂಲಕ ದಾಂಪತ್ಯದ ಮಹತ್ವ ಸಾರಿದ್ದಾರೆ," ಎಂದರು. ದಾಸಿಮಯ್ಯನವರ 176 ವಚನಗಳು ಮಾನವ ಕುಲಕ್ಕೆ ಸತ್ಯದ ಹಾದಿ ತೋರಿಸುತ್ತವೆ ಎಂದು ಅವರು ವಿವರಿಸಿದರು.

ಕೈಮಗ್ಗ ಮತ್ತು ಜವಳಿ ಇಲಾಖೆಯ ಸಹಾಯಕ ನಿರ್ದೇಶಕಿ ಆಶಾ ಮಾತನಾಡಿ, "ದೇವರ ದಾಸಿಮಯ್ಯ ಅವರು ಕಾಯಕ ನಿಷ್ಠೆಯ ನೇಕಾರರಾಗಿದ್ದರು. ಅವರ ಸಮುದಾಯದ ಏಳಿಗೆಗಾಗಿ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ನೇಕಾರರು ಈ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಆರ್ಥಿಕವಾಗಿ ಸಬಲರಾಗಬೇಕು," ಎಂದು ಕರೆ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕೆ. ಸತೀಶ್ ಮಾತನಾಡಿ, ಸಮುದಾಯದವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ತಿಳಿಸಿದರು. ಈ ಸಮಾರಂಭದಲ್ಲಿ ನೇಕಾರರ ಸಂಘದ ಅಧ್ಯಕ್ಷ ವರದರಾಜು, ಕಾರ್ಯದರ್ಶಿ ಪವನ್ ಕುಮಾರ್, ಖಜಾಂಚಿ ಗಿರೀಶ್ ಕುಮಾರ್, ಗೌರವಾಧ್ಯಕ್ಷ ಅಣ್ಣಯ್ಯಪ್ಪ, ದೇವರಾಜ ಅರಸು ನಿಗಮದ ಜಿಲ್ಲಾ ವ್ಯವಸ್ಥಾಪಕ ನಾಗೇಂದ್ರ ಹಾಗೂ ವಿವಿಧ ಸಮುದಾಯದ ಮುಖಂಡರು ಭಾಗವಹಿಸಿದ್ದರು.



# ರೈಲ್ವೆ ಯೋಜನೆಗೆ ಭೂಮಿ ನೀಡುವ ರೈತರಿಗೆ ಮಾರುಕಟ್ಟೆ ದರದಲ್ಲೇ ಪರಿಹಾರ



ಚಿತ್ರದುರ್ಗ

ರೈಲ್ವೆ ಯೋಜನೆಗಾಗಿ ಭೂಮಿ ಬಿಟ್ಟುಕೊಡುವ ರೈತರಿಗೆ ಯಾವುದೇ ಅನ್ಯಾಯವಾಗದಂತೆ, ಪ್ರಸ್ತುತ ಮಾರುಕಟ್ಟೆ ದರದಲ್ಲೇ ಪರಿಹಾರ ಒದಗಿಸಲು ಜಿಲ್ಲಾಡಳಿತ ಬದ್ಧವಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ರೈತರಿಗೆ ಭರವಸೆ ನೀಡಿದರು.

ಇದರೊಂದಿಗೆ ಜಮೀನಿನಲ್ಲಿ ಇರುವ ಬೆಳೆ, ತೋಟಗಾರಿಕೆ ಬೆಳೆಗಳು, ಪಶು ಸಂಗೋಪನೆಗಾಗಿ ನಿರ್ಮಿಸಿರುವ ಕಟ್ಟಡ ಸೇರಿದಂತೆ ಕೃಷಿ ಚಟುವಟಿಕೆಗಳಿಗೆ ನಿರ್ಮಿಸಿದ ಇತರೆ ನಿರ್ಮಾಣಗಳಿಗೂ ಪರಿಹಾರ ದೊರಕಲಿದೆ. ಕೇವಲ ಹಣಕಾಸಿನ ಪರಿಹಾರವಲ್ಲದೆ, ಭೂಮಿ ನೀಡುವ ರೈತರಿಗೆ ಸರ್ಕಾರದಿಂದ ಹಲವು ವಿಶೇಷ ಸೌಲಭ್ಯ ನೀಡಲಾಗುತದೆ. ಕಾಲು ಭಾಗಕ್ಕಿಂತ ಹೆಚ್ಚು ಜಮೀನು ಕಳೆದುಕೊಳ್ಳುವ ರೈತರಿಗೆ 'ಯೋಜನಾ ನಿರಾಶ್ರಿತ ಪ್ರಮಾಣಪತ್ರ' ನೀಡಲಾಗುವುದು.

ಈ ಮೂಲಕ ಅವರ ಮಕ್ಕಳಿಗೆ ಇಂಜಿನಿಯರಿಂಗ್, ವೈದ್ಯಕೀಯ ಶಿಕ್ಷಣ ಹಾಗೂ ಸರ್ಕಾರಿ ಉದ್ಯೋಗಗಳಲ್ಲಿ ವಿಶೇಷ ಮೀಸಲಾತಿ ದೊರೆಯಲಿದೆ. ಪರಿಹಾರದ ಹಣದಿಂದ ರೈತರು ಬೇರೆಡೆ ಭೂಮಿ ಖರೀದಿಸುವಾಗ ನೋಂದಣಿ ಶುಲ್ಕದಲ್ಲಿ ವಿನಾಯಿತಿ ನೀಡಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಹೇಳಿದರು.

ನೇರ ಖರೀದಿ ಪ್ರಕ್ರಿಯೆ: ವಿಳಂಬಕ್ಕೆ ಆಸ್ಪದವಿಲ್ಲ ಸಾಮಾನ್ಯ ಭೂಸ್ವಾಧೀನ ಪ್ರಕ್ರಿಯೆಯು ಎರಡರಿಂದ ಮೂರು ವರ್ಷಗಳ ದೀರ್ಘಾವಧಿಯನ್ನು ತೆಗೆದುಕೊಳ್ಳುತ್ತದೆ. ಆದರೆ, ರೈಲ್ವೆ ಯೋಜನೆಗೆ ಸಂಬಂಧಿಸಿದಂತೆ 'ನೇರ ಖರೀದಿ' ಪದ್ಧತಿಯನ್ನು ಅನುಸರಿಸಲಾಗುತ್ತಿದೆ.

ಇದರಿಂದಾಗಿ ರೈತರು ವರ್ಷಗಟ್ಟಲೆ ಕಾಯುವ ಅಗತ್ಯವಿಲ್ಲ.

ಮೂರು ತಿಂಗಳ ಅವಧಿಯಲ್ಲೇ ಪ್ರಕ್ರಿಯೆ ಪೂರ್ಣಗೊಳಿಸಿ ಪರಿಹಾರದ ಹಣ ನೀಡಲು ಹಣ ಬಿಡುಗಡೆಯಾಗಿ ಸಿದ್ಧವಿದೆ ಎಂದು ಅವರು ಮಾಹಿತಿ ನೀಡಿದರು. ಜಿಲ್ಲೆಯ ಅಭಿವೃದ್ಧಿ ಹಾಗೂ ರೈಲ್ವೆ ಯೋಜನೆಯ ಶೀಘ್ರ ಅನುಷ್ಠಾನಕ್ಕೆ ರೈತರು ಜಿಲ್ಲಾಡಳಿತದೊಂದಿಗೆ ಕೈಜೋಡಿಸಬೇಕು ಎಂದು ಈಈಗಾಗಲೇ ಜಮೀನುಗಳ ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿದೆ. ಯಾವ ಸರ್ವೆ ನಂಬರ್‌ನಲ್ಲಿ ಎಷ್ಟು ಭೂಮಿ ಸ್ವಾಧೀನವಾಗುತ್ತದೆ ಎಂಬ ನಿಖರ ಮಾಹಿತಿ ಲಭ್ಯವಾದ ತಕ್ಷಣ ರೈತರಿಗೆ ಅಧಿಕೃತ ನೋಟಿಸ್ ನೀಡಲಾಗುವುದು. ದಾವಣಗೆರೆ–ಚಿತ್ರದುರ್ಗ–ತುಮಕೂರು ನೇರ ರೈಲ್ವೆ ಮಾರ್ಗದ ಯೋಜನೆಯ ಭೂಸ್ವಾಧೀನ ಹಾಗೂ ಪ್ರಗತಿ ಕುರಿತಂತೆ ಶೀಘ್ರವೇ ಪ್ರತ್ಯೇಕ ಸಭೆ ನಡೆಸಲಾಗುವುದು ಎಂದು ಇದೇ ಸಂದರ್ಭದಲ್ಲಿ ಅವರು ತಿಳಿಸಿದರು.

ಸಭೆಯಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿ ವೆಂಕಟೇಶ್ ನಾಯಕ್, ಲೋಕೋಪಯೋಗಿ ಕಾರ್ಯಪಾಲಕ ಇಂಜಿನಿಯರ್ ನಾಗರಾಜ್, ತೋಟಗಾರಿಕೆ ಜಂಟಿ ನಿರ್ದೇಶಕಿ ಸವಿತಾ, ಉಪ ಅರಣ್ಯ ಸಂರಕ್ಷಣಾಧಿಕಾರಿ ಗೋಪ್ಯಾನಾಯ್ಕ್, ತಹಶೀಲ್ದಾರ್ ಗೋವಿಂದರಾಜು, ವಿವಿಧ ರೈತ ಮುಖಂಡರು ಸಭೆಯಲ್ಲಿ ಉಪಸ್ಥಿತರಿದ್ದರು. ಸಂದರ್ಭದಲ್ಲಿ ಬಿ.ಟಿ. ಕುಮಾರಸ್ವಾಮಿ ಮನವಿ ಮಾಡಿದರು.

# ನಿವೇಶನ ಹಂಚಿಕೆ ಪಟ್ಟಿ ಪ್ರಕಟ : ಆಕ್ಷೇಪಣೆಗೆ ಅವಕಾಶ

ತುಮಕೂರು:ಶಿರಾ ನಗರಸಭಾ ವ್ಯಾಪ್ತಿಯ ನಿವೇಶನ ರಹಿತರಿಂದ ನಿವೇಶನ ಹಂಚಿಕೆಗಾಗಿ ಅರ್ಜಿಯನ್ನು ಸ್ವೀಕರಿಸಿದ್ದು, ಈ ಪೈಕಿ ಅರ್ಹ ಮತ್ತು ಅನರ್ಹ ಫಲಾನುಭವಿಗಳ ವಿವರವನ್ನು ನಗರ ಆಶ್ರಯ ಸಮಿತಿ ತೀರ್ಮಾನದಂತೆ ಶಿರಾ ನಗರಸಭಾ ಕಚೇರಿಯ ಸೂಚನಾ ಫಲಕ ಹಾಗೂ ವೆಬ್‌ಸೈಟ್ ತಿತಿತಿ. ,ಡಿಚಿಭಿಣಥಿ.ಟಡಿಭಿ.ಠಿಡಿತ.ಏಟ ನಲ್ಲಿ ಪ್ರಚುರಪಡಿಸಲಾಗಿದೆ.

ಸದರಿ ಪಟ್ಟಿಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಏಪ್ರಿಲ್ 13ರ ಸಂಜೆ 5 ಗಂಟೆಯೊಳಗಾಗಿ ಪೌರಾಯುಕ್ತರು, ನಗರಸಭೆ, ಶಿರಾ ಇವರಿಗೆ ಅಗತ್ಯ ದಾಖಲೆಗಳೊಂದಿಗೆ ಲಿಖಿತ ರೂಪದಲ್ಲಿ ಸಲ್ಲಿಸಬಹುದು. ಅವಧಿ ಮೀರಿ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಪೌರಾಯುಕ್ತರು ತಿಳಿಸಿದ್ದಾರೆ.

# ಚುನಾವಣೆ ದೃಷ್ಟಿಯಿಂದ ಪಕ್ಷದ ಅಭಿವೃದ್ಧಿಗೆ ಒತ್ತು



ಬಂಗಾರಪೇಟೆ

ತಾಲೂಕಿನಲ್ಲಿ ಸುಹೆಲ್ದೇವ್ ಭಾರತೀಯ ಸಮಾಜ ಪಕ್ಷವನ್ನು ತಳಮಟ್ಟದಿಂದ ಬಲಪಡಿಸಲು ಮತ್ತು ಮುಂಬರುವ ಚುನಾವಣೆಗಳಿಗೆ ಸಜ್ಜುಗೊಳಿಸಲು ಪಕ್ಷದ ವತಿಯಿಂದ ವಿಶೇಷ ಸಭೆ ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ರಾಜ್ಯ ಉಸ್ತುವಾರಿ ಹಾಗೂ ಐಟಿ ಸೆಲ್ ಮುಖ್ಯಸ್ಥರಾದ ಧರ್ಮ ಪ್ರಕಾಶ್ ಚೌದರಿ ಅವರು ಕ್ಷೇತ್ರಕ್ಕೆ ಭೇಟಿ ನೀಡಿ ಸಂಘಟನಾ ಚಟುವಟಿಕೆಗಳ ಪರಿಶೀಲನೆ ನಡೆಸಿದರು.

ನಗರದ ಗಂಗಮ್ಮನ ಪಾಳ್ಯದ ಸಮೀಪವಿರುವ ಪಕ್ಷದ ಕಚೇರಿಯಲ್ಲಿ ನಡೆದ ಕಾರ್ಯಕರ್ತರ ಸಭೆಯನ್ನುದ್ದೇಶಿಸಿ ಮಾತನಾಡಿದ ಧರ್ಮ ಪ್ರಕಾಶ್ ಚೌದರಿ, "ಪಕ್ಷದ ಒಳಾಂಗಣ ವ್ಯವಸ್ಥೆ ಬಲಗೊಳ್ಳಬೇಕು ಹಾಗೂ ಪಾರದರ್ಶಕತೆ ಕಾಪಾಡುವುದು ಅತಿ ಮುಖ್ಯ. ಕ್ಷೇತ್ರದಲ್ಲಿ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಐಟಿ (ಆದಾಯ ತೆರಿಗೆ) ಅಥವಾ ಇಡಿ (ಜಾರಿ ನಿರ್ದೇಶನಾಲಯ) ವ್ಯಾಪ್ತಿಗೆ ಬರುವಂತಹ ಯಾವುದೇ ಅಕ್ರಮಗಳ ಮಾಹಿತಿ ಅಥವಾ ದೂರುಗಳಿದ್ದಲ್ಲಿ ತಕ್ಷಣವೇ ನನ್ನ ಗಮನಕ್ಕೆ ತರಬೇಕು," ಎಂದು ಕಾರ್ಯಕರ್ತರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಬಂಗಾರಪೇಟೆ ಕ್ಷೇತ್ರದಲ್ಲಿ ನಡೆಯುತ್ತಿರುವ ಸದಸ್ಯತ್ವ ಅಭಿಯಾನ ಹಾಗೂ ಜನಸಂಪರ್ಕ ಕಾರ್ಯಗಳನ್ನು ವೀಕ್ಷಿಸಿದ ಅವರು, ಸ್ಥಳೀಯ ನಾಯಕರ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. "ಮುಂಬರುವ ಚುನಾವಣೆಗಳ ದೃಷ್ಟಿಯಿಂದ ಪಕ್ಷದ ಅಭಿವೃದ್ಧಿಯತ್ತ ಹೆಚ್ಚಿನ ಗಮನ ಹರಿಸಬೇಕು. ಈ ನಿಟ್ಟಿನಲ್ಲಿ ರಾಜ್ಯಾಧ್ಯಕ್ಷರ ಮಾರ್ಗದರ್ಶನದಲ್ಲಿ ಕಾರ್ಯಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಬೇಕು," ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಸ್ಥಳೀಯ ಘಟಕದ ವತಿಯಿಂದ ಧರ್ಮ ಪ್ರಕಾಶ್ ಚೌದರಿ ಅವರಿಗೆ ಗೌತಮ ಬುದ್ಧನ ವಿಗ್ರಹ ನೀಡಿ ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಪಕ್ಷದ ರಾಜ್ಯಾಧ್ಯಕ್ಷರಾದ ಪಿ. ಅಭಿಮನ್ಯು ಮಣಿ, ಸ್ಥಳೀಯ ಪ್ರಮುಖ ಮುಖಂಡರಾದ ಪಿವಿಸಿ ಮಣಿ, ಮುನಿವೆಂಕಟಪ್ಪ, ನವೀನ್, ಕುಮಾರ್ ಸೇರಿದಂತೆ ಅನೇಕ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

# ಸಿಲಿಂಡರ್ ಸಿಗದೆ ಗ್ಯಾಸ್ ಏಜೆನ್ಸಿಗಳ ಮುಂದೆ ಜನರ ಕ್ಯೂ; ಕಂಗೆಟ್ಟ ಕಾರ್ಮಿಕರು

ಬಂಗಾರಪೇಟೆ

ನಗರದಲ್ಲಿ ವಾಣಿಜ್ಯ ಹಾಗೂ ಗೃಹ ಬಳಕೆಯ ಗ್ಯಾಸ್ ಸಿಲಿಂಡರ್‌ಗಳ ತೀವ್ರ ಅಭಾವ ಸೃಷ್ಟಿಯಾಗಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ವಿಶೇಷವಾಗಿ ವಾಣಿಜ್ಯ ಸಿಲಿಂಡರ್‌ಗಳ ಕೊರತೆಯಿಂದಾಗಿ ಹೋಟೆಲ್ ಉದ್ಯಮ ಕುಸಿತದ ಅಂಚಿನಲ್ಲಿದ್ದು, ಕಾರ್ಮಿಕರು ಕೆಲಸ ಕಳೆದುಕೊಳ್ಳುವ ಭೀತಿಯಲ್ಲಿ ಊರು ತೊರೆಯುವಂತಾಗಿದೆ.



**ಹೋಟೆಲ್ ಉದ್ಯಮಕ್ಕೆ ಹೊಡೆತ; ಕಾಫಿ–ಟೀಗೂ ತತ್ವಾರ!**

ವಾಣಿಜ್ಯ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿರುವುದರಿಂದ ಹೋಟೆಲ್‌ಗಳಲ್ಲಿ ಅಡುಗೆ ಕಾರ್ಯ ಬಹುತೇಕ ಕುಂಠಿತಗೊಂಡಿದೆ. ನಿತ್ಯವೂ ಸುಲಭವಾಗಿ ಸಿಗುತ್ತಿದ್ದ ಕಾಫಿ, ಟೀ ಕೂಡ ಈಗ ಸವಾಲಾಗಿ ಪರಿಣಮಿಸಿದೆ. ರುಚಿಕರ ತಿಂಡಿಗಳ ತಯಾರಿಕೆಗೆ ತಾತ್ಕಾಲಿಕವಾಗಿ ಬ್ರೇಕ್ ಬಿದ್ದಿದ್ದು, ಗ್ರಾಹಕರು ಹೋಟೆಲ್‌ಗಳಿಂದ ನಿರಾಶೆಯಿಂದ ಮರಳುತ್ತಿದ್ದಾರೆ. "ಸಿಲಿಂಡರ್ ಸಿಗದಿದ್ದರೆ ವ್ಯಾಪಾರ ನಡೆಸುವುದು ಹೇಗೆ?" ಎಂಬ ಆತಂಕ ಹೋಟೆಲ್ ಮಾಲೀಕರನ್ನು ಕಾಡುತ್ತಿದೆ.

**ಗೃಹ ಬಳಕೆ ಸಿಲಿಂಡರ್ ಕೊರತೆ; ಸಚಿವರ ಹೇಳಿಕೆಗೂ ವಾಸ್ತವಕ್ಕೂ ವ್ಯತ್ಯಾಸ:**

ಇನ್ನೊಂದೆಡೆ, ಗೃಹ ಬಳಕೆಯ ಸಿಲಿಂಡರ್‌ಗಳಿಗೂ ತತ್ವಾರ ಶುರುವಾಗಿದ್ದು, ನಾಗರಿಕರು ಗ್ಯಾಸ್ ಏಜೆನ್ಸಿಗಳ ಮುಂದೆ ಸಾಲುಗಟ್ಟಿ ನಿಲ್ಲುವಂತಾಗಿದೆ. "ಗೃಹ ಬಳಕೆಯ ಸಿಲಿಂಡರ್ ಕೊರತೆಯಿಲ್ಲ" ಎಂಬ ಆಹಾರ ಸಚಿವರ ಹೇಳಿಕೆ ನೆಲದ ವಾಸ್ತವಕ್ಕೆ ವಿರುದ್ಧವಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೆಲವು ಏಜೆನ್ಸಿಗಳು ಕೃತಕ ಅಭಾವ ಸೃಷ್ಟಿಸುತ್ತಿರುವ ಬಗ್ಗೆಯೂ ದೂರುಗಳು ಕೇಳಿಬರುತ್ತಿವೆ.

**ಗ್ಯಾಸ್ ಏಜೆನ್ಸಿಗೆ ತಹಸೀಲ್ದಾರ್ ಭೇಟಿ; ಕಠಿಣ ಕ್ರಮದ ಎಚ್ಚರಿಕೆ:**



ಸಮಸ್ಯೆ ಗಂಭೀರ ಸ್ವರೂಪ ತಾಳುತ್ತಿದ್ದಂತೆ, ತಹಸೀಲ್ದಾರ್ ಸುಜಾತಮ್ಮ ಅವರು ನಗರದ ರಘುಮಕ್ಷಿ ಹೆಚ್.ಪಿ. ಗ್ಯಾಸ್ ಏಜೆನ್ಸಿಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಗ್ರಾಹಕರಿಂದ ದೂರುಗಳನ್ನು ಸ್ವೀಕರಿಸಿದ ಅವರು, "ಬುಕ್ ಮಾಡಿದ ದಿನದಿಂದ ನಿಗದಿತ ಅವಧಿಯೊಳಗೆ ಸಿಲಿಂಡರ್ ಪೂರೈಕೆ ಮಾಡದ ಏಜೆನ್ಸಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು," ಎಂದು ಎಚ್ಚರಿಕೆ ನೀಡಿದರು.

# ತೊರಲಕ್ಕಿಯಲ್ಲಿ ವಾತ್ಸಲ್ಯ ಮನೆ ಲೋಕಾರ್ಪಣೆ

ಬಂಗಾರಪೇಟೆ

"ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಇದುವರೆಗೆ ರಾಜ್ಯಾದ್ಯಂತ ಸುಮಾರು ಎರಡು ಸಾವಿರ ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ಹಸ್ತಾಂತರಿಸಿದೆ. ಅದರಂತೆ ಕೋಲಾರ ಜಿಲ್ಲೆಯಲ್ಲೇ 40 ಮನೆಗಳನ್ನು ನಿರ್ಮಿಸಿ ಬಡ ಕುಟುಂಬಗಳಿಗೆ ಆಸರೆಯಾಗಿದ್ದೇವೆ," ಎಂದು ಸಂಸ್ಥೆಯ ಜಿಲ್ಲಾ ನಿರ್ದೇಶಕ ಶಿವಾನಂದ್ ಆಚಾರ್ಯ ತಿಳಿಸಿದರು.

ತಾಲೂಕಿನ ಬೂದಿಕೋಟೆ ವಲಯದ ತೊರಲಕ್ಕಿ ಗ್ರಾಮದಲ್ಲಿ ಸಂಸ್ಥೆಯ ವತಿಯಿಂದ ನಿರ್ಮಿಸಲಾದ 'ವಾತ್ಸಲ್ಯ ಮನೆ'ಯನ್ನು ಫಲಾನುಭವಿ ಗಂಗಮ್ಮ ಅವರಿಗೆ ಹಸ್ತಾಂತರಿಸಿ ಅವರು ಮಾತನಾಡಿದರು. "ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಎನ್ನುವ ಗಾದೆಯಂತೆ, ಸಂಘಗಳ ಮೂಲಕ ಬರುವ ಆದಾಯವನ್ನು ಮರಳಿ ಬಡವರ ಏಳಿಗೆಗಾಗಿಯೇ ಬಳಸಲಾಗುತ್ತಿದೆ. ಧರ್ಮಸ್ಥಳ ಸಂಘವು ಕಷ್ಟದಲ್ಲಿರುವ ಕುಟುಂಬಗಳ ಬೆನ್ನೆಲುಬಾಗಿ ನಿಂತಿದೆ," ಎಂದು ಅವರು ಅಭಿಪ್ರಾಯಪಟ್ಟರು.

ಬಡವರು ಸ್ವಾವಲಂಬಿ ಜೀವನ ನಡೆಸಲು ಸಂಸ್ಥೆಯು ಅನೇಕ ಜನಪರ ಯೋಜನೆಗಳನ್ನು ಹಮ್ಮಿಕೊಂಡಿದೆ. ಪ್ರತಿ ತಿಂಗಳು ಮಾಸಾಸನ ಹಾಗೂ 'ವಾತ್ಸಲ್ಯ ಕಿಟ್' ಮೂಲಕ ಆಹಾರ ಧಾನ್ಯಗಳನ್ನು ವಿತರಿಸಲಾಗುತ್ತಿದೆ. ಮೂಲಭೂತ ಸೌಲಭ್ಯಗಳಿಂದ ವಂಚಿತರಾದ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಹಾಗೂ ಸಂಸ್ಥೆಯ ಸೌಲಭ್ಯಗಳು ತಲುಪಬೇಕು ಎಂಬುದು ಪೂಜ್ಯ ಹೆಗ್ಗಡೆಯವರ ಆಶಯವಾಗಿದೆ ಎಂದು ಅವರು ವಿವರಿಸಿದರು.

ಸಂಘದ ಮೂಲಕ ಕೇವಲ ಸಾಲ ವಿತರಣೆ ಮಾತ್ರವಲ್ಲದೆ, ಅಂಗವಿಕಲರಿಗೆ ಮಾಸಾಸನ, ವೀಲ್ ಚೇರ್ ವಿತರಣೆ ಸೇರಿದಂತೆ ಹತ್ತಾರು ಯೋಜನೆಗಳನ್ನು ಜಾರಿಗೆ ತರಲಾಗಿದೆ. ಬಡ ಕುಟುಂಬಗಳು ಆರ್ಥಿಕವಾಗಿ ಸದೃಢವಾಗಲು ಈ ಎಲ್ಲ ಸೌಲಭ್ಯಗಳು ಸಹಕಾರಿಯಾಗಿವೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಬಂಗಾರಪೇಟೆ ವಲಯದ ಯೋಜನಾಧಿಕಾರಿ ಚೇತನ್, ಒಕ್ಕೂಟದ ಅಧ್ಯಕ್ಷೆ ಉಷಾ ಅಶೋಕ್, ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ಮಂಜುನಾಥ್, ಕದರಪ್ಪ, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಸುನಂದ, ಮೇಲ್ವಿಚಾರಕರಾದ ಭವ್ಯ, ರಾಣಿ, ಮಮತಾ ಹಾಗೂ ಸೇವಾ ಪ್ರತಿನಿಧಿಗಳು ಉಪಸ್ಥಿತರಿದ್ದರು.



# ದಾಸ ಸಾಹಿತ್ಯ, ಯೋಗ ಕ್ಷೇತ್ರದ ಗಣ್ಯರಿಗೆ 'ಪ್ರಣವಶ್ರೀ' ಪುರಸ್ಕಾರ

ಬೆಂಗಳೂರು

ನಗರದ ಸಾಂಸ್ಕೃತಿಕ ಕೇಂದ್ರಬಿಂದು ಮಲ್ಲೇಶ್ವರದ ಶ್ರೀ ಆಂಜನೇಯ ಹಾಗೂ ಶ್ರೀ ರಾಘವೇಂದ್ರ ಸ್ವಾಮಿಗಳ ದೇವಸ್ಥಾನದಲ್ಲಿ ನಡೆಯುತ್ತಿರುವ 26ನೇ ವರ್ಷದ ಶ್ರೀರಾಮನವಮಿ ಸಂಗೀತೋತ್ಸವದ ಅಂಗವಾಗಿ, ವಿವಿಧ ಕ್ಷೇತ್ರಗಳ ಸಾಧಕರಿಗೆ ಪ್ರತಿಷ್ಠಿತ 'ಪ್ರಣವಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ದಾಸ ಸಾಹಿತ್ಯ, ಸಂಗೀತ, ಯೋಗ ಹಾಗೂ ನೃತ್ಯ ಕ್ಷೇತ್ರಗಳಲ್ಲಿ ಅನುಪಮ ಸೇವೆ ಸಲ್ಲಿಸಿರುವ ಡಾ. ಗುರುರಾಜ ಪೋಶೆಟ್ಟಿಹಳ್ಳಿ, ವಿ. ಮಾಲತಿ ಶಿಂಗ್ಲಾಚಾರ್ ಮತ್ತು ವಿ. ರಾಮಲಿಂಗಂ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಲಾಯಿತು. ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ ಫೌಂಡೇಶನ್, ಶಿವ–ಶ್ರೀಕಾಂತ ಸಂಗೀತ ಪ್ರತಿಷ್ಠಾನ ಸೇರಿದಂತೆ ವಿವಿಧ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.



ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಡಾ. ಗುರುರಾಜ ಪೋಶೆಟ್ಟಿಹಳ್ಳಿ, "ದಾಸ ಸಾಹಿತ್ಯ ಮತ್ತು ಭಜನಾ ಪರಂಪರೆ ನಮ್ಮ ಸಂಸ್ಕೃತಿಯ ಆತ್ಮವಿದ್ದಂತೆ. ಇವುಗಳನ್ನು ಮುಂದಿನ ಪೀಳಿಗೆಗೆ ದಾಟಿಸುವುದು ನಮ್ಮೆಲ್ಲರ ಜವಾಬ್ದಾರಿ. ಯುವ ಪೀಳಿಗೆ ಆಧುನಿಕತೆಯ ನಡುವೆಯೂ ಸಂಗೀತ ಮತ್ತು ಸಂಸ್ಕೃತಿಯತ್ತ ಹೆಚ್ಚಿನ ಆಸಕ್ತಿ ತೋರಬೇಕು," ಎಂದು ಕರೆ ನೀಡಿದರು. ಶ್ರೀರಾಮನವಮಿ ಉತ್ಸವಗಳು ಸಾಂಸ್ಕೃತಿಕ ಏಕತೆಯನ್ನು ಬೆಳೆಸುವ ವೇದಿಕೆಗಳಾಗಿವೆ ಎಂದು ಅವರು ಅಭಿಪ್ರಾಯಪಟ್ಟರು.

ಪ್ರಶಸ್ತಿ ಪ್ರದಾನ ಸಮಾರಂಭದ ನಂತರ ರವೀಂದ್ರ ನರಹರಿ ಮತ್ತು ತಂಡದವರಿಂದ ನಡೆದ 'ಸೂತ್ರದ ಬೊಂಬೆ ಆಟ' ವಿಶೇಷ ಮೆರುಗು ನೀಡಿತು. ಮಕ್ಕಳಿಂದ ಹಿರಿಯರವರೆಗೆ ಎಲ್ಲರನ್ನೂ ರಂಜಿಸಿದ ಈ ಪ್ರದರ್ಶನ ಸಾಂಪ್ರದಾಯಿಕ ಕಲೆಯ ಸೊಗಡನ್ನು ಅನಾವರಣಗೊಳಿಸಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ದೇವಸ್ಥಾನದ ಪ್ರಧಾನ ಅರ್ಚಕ ಕಡ್ಡಿ ಎಸ್. ಜಯತೀರ್ಥಾಚಾರ್ಯರು, ಮಹಾರಾಣಿ ಕ್ಲಸ್ಟರ್ ಯೂನಿವರ್ಸಿಟಿ ಡೆಪ್ಯುಟಿ ರಿಜಿಸ್ಟ್ರಾರ್ ಪ್ರೊ. ಡಾ. ಶ್ರೀಕಾಂತಂ ನಾಗೇಂದ್ರ ಶಾಸ್ತ್ರೀ, ಆಯ್ಕೆ ಸಮಿತಿ ಅಧ್ಯಕ್ಷೆ ಜಯಂತಿ ಚಂದ್ರಮೌಳಿ, ಆಯೋಜಕಿ ಡಾ. ವಾರುಣಿ ಜಯತೀರ್ಥಾಚಾರ್ಯ ಕಡ್ಡಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

# ಒಂಟಿ ಆನೆ ಅಟ್ಟಹಾಸ; ಕೈಗೆ ಬಂದ ತುತ್ತು ಆನೆ ಪಾಲು, ರೈತ ಕಂಗಾಲು!

ಬಂಗಾರಪೇಟೆ

ತಾಲೂಕಿನ ಗಡಿ ಗ್ರಾಮಗಳಲ್ಲಿ ಒಂಟಿ ಆನೆಯ ಉಪಟಳ ಮುಂದುವರಿದಿದ್ದು, ಭಾನುವಾರ ರಾತ್ರಿ ಗುಲ್ಲಹಳ್ಳಿ ಗ್ರಾಮದ ರೈತರ ತೋಟಗಳಿಗೆ ಲಗ್ಗೆ ಇಟ್ಟ ಆನೆಯು ಅಪಾರ ಪ್ರಮಾಣದ ಬೆಳೆ ನಾಶಪಡಿಸಿದೆ. ಇದರಿಂದಾಗಿ ಸಾಲ ಸೋಲ ಮಾಡಿ ಬೆಳೆ ಬೆಳೆದಿದ್ದ ರೈತರು ಈಗ ಬೀದಿಗೆ ಬೀಳುವಂತಾಗಿದೆ.

ಗುಲ್ಲಹಳ್ಳಿ ಗ್ರಾಮದ ಪ್ರಗತಿಪರ ರೈತ ವೆಂಕಟೇಶಪ್ಪ ಅವರ ಹಾಗಲಕಾಯಿ ತೋಟಕ್ಕೆ ನುಗ್ಗಿದ ಆನೆಯು ಬೆಳೆಯನ್ನು ತುಳಿದು ಹಾಳು ಮಾಡಿದ್ದಲ್ಲದೆ, ಬೋರ್‌ವೆಲ್ ಪೈಪ್ ಹಾಗೂ ದುಬಾರಿ ಬೆಲೆಯ ಡ್ರಿಪ್ ಪೈಪ್‌ಗಳನ್ನು ಸಂಪೂರ್ಣವಾಗಿ ಜಜ್ಜಿ ಹಾಕಿವೆ. ಅದೇ ರೀತಿ ರೈತ ವೆಂಕಟರಾಮ್ ಅವರ ರಾಗಿ ಬೆಳೆಯೂ ಆನೆಯ ಪಾಲಾಗಿದೆ.



"ಪರಿಕರಗಳ ಬೆಲೆ ಗಗನಕ್ಕೇರಿದ್ದರೂ ಕಷ್ಟಪಟ್ಟು ಬೆಳೆ ಬೆಳೆದಿದ್ದೆವು, ಆದರೆ ಆನೆ ದಾಳಿಯಿಂದಾಗಿ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ" ಎಂದು ರೈತರು ಅಳಲು ತೋಡಿಕೊಂಡಿದ್ದಾರೆ.

ಕೆಲವು ವರ್ಷಗಳ ಹಿಂದೆ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಅಳವಡಿಸಲಾಗಿದ್ದ ಸೋಲಾರ್ ಫೆನ್ಸಿಂಗ್ (ಸೌರ ಬೇಲಿ) ಸರಿಯಾದ ನಿರ್ವಹಣೆ ಇಲ್ಲದೆ ಹಾಳಾಗಿದೆ. ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಆನೆಗಳು ಸುಲಭವಾಗಿ ಕಾಡು ದಾಟಿ ತೋಟಗಳಿಗೆ ನುಗ್ಗುತ್ತಿವೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಈ ಹಿಂದೆ ಇದೇ ಒಂಟಿ ಆನೆ ದಾಳಿಗೆ ಸಿಲುಕಿ ತಾಲೂಕಿನಲ್ಲಿ ಹಲವರು ಮೃತಪಟ್ಟಿದ್ದು, ಈಗ ಮತ್ತೆ ಆನೆ ಪ್ರತ್ಯಕ್ಷವಾಗಿರುವುದು ಜನರಲ್ಲಿ ಜೀವಭಯ ಹುಟ್ಟಿಸಿದೆ. ಭಾನುವಾರ ಇಡೀ ರಾತ್ರಿ ಕಾರ್ಯಾಚರಣೆ ನಡೆಸಿದ ಅರಣ್ಯ ಇಲಾಖೆ ಸಿಬ್ಬಂದಿ, ಆನೆಯನ್ನು ಸದ್ಯಕ್ಕೆ ಯರಗೋಳ ಅರಣ್ಯ ಪ್ರದೇಶಕ್ಕೆ ಓಡಿಸಿದ್ದಾರೆ. ಆನೆಯನ್ನು ಶೀಘ್ರದಲ್ಲೇ ತಮಿಳುನಾಡು ಗಡಿಯತ್ತ ಓಡಿಸಲಾಗುವುದು ಎಂದು ಇಲಾಖೆಯ ಮೂಲಗಳು ತಿಳಿಸಿವೆ.

> "ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಹಾಗಲಕಾಯಿ ಬೆಳೆದಿದ್ದೆ. ಆನೆ ಬಂದು ಬೆಳೆ ಮಾತ್ರವಲ್ಲದೆ, ಬೋರ್‌ವೆಲ್ ಮತ್ತು ಡ್ರಿಪ್ ಪೈಪ್‌ಗಳನ್ನು ಹಾಳು ಮಾಡಿದೆ. ಅರಣ್ಯ ಇಲಾಖೆಯವರು ತಕ್ಷಣವೇ ಸ್ಥಳ ಪರಿಶೀಲನೆ ನಡೆಸಿ ನಮಗೆ ಸೂಕ್ತ ಪರಿಹಾರ ನೀಡಬೇಕು."
> - ವೆಂಕಟೇಶ್, ಪ್ರಗತಿಪರ ರೈತ, ಗುಲ್ಲಹಳ್ಳಿ.



ತೆಲಂಗಾಣ ರಾಜ್ಯದ ಹೈದರಾಬಾದಿನಲ್ಲಿರುವ ಶ್ರೀ ತ್ಯಾಗರಾಯ ಗಾನ ಸಭಾದಲ್ಲಿ ನಡೆದ ಹಾಡುಗಾರ, ಗಾಯಕ ರಸಮಯಿ ಕವಿ ಎಂದೇ ಹೆಸರು ಪಡೆದಿರುವ ಎಂ.ಕೆ. ರಾಮು ಅವರ ಜನ್ಮದಿನೋತ್ಸವ ಅಂಗವಾಗಿ ಗಮಕ ಕಲಾವಿದ ಕೂಟೇರಿ ಕೆ.ವಿ. ನಂಜಾಮರಿ ಅವರನ್ನು ಗೌರವಿಸಲಾಯಿತು.

# ದೇವಿಯರ ಜಾತ್ರೆಗೆ ಕ್ಷಣಗಣನೆ

ತಿಪಟೂರು

ತಾಲೂಕಿನ ಪ್ರಸಿದ್ಧ ಗ್ರಾಮಗಳಾದ ಆದಿನಾಯಕನಹಳ್ಳಿ, ಕಲ್ಕೆರೆ ಮತ್ತು ಈರಲಗೆರೆ ಗ್ರಾಮಗಳ ಗ್ರಾಮದೇವತೆಗಳಾದ ಶ್ರೀ ಕೆಂಪಮ್ಮ ದೇವಿ ಹಾಗೂ ಶ್ರೀ ಚಿಕ್ಕಮ್ಮ ದೇವಿಯರ ಐದು ದಿನಗಳ ವೈಭವದ ಜಾತ್ರಾ ಮಹೋತ್ಸವವು ಇದೇ 26ರಿಂದ ಆರಂಭವಾಗಲಿದೆ. 30ರವರೆಗೆ ನಡೆಯಲಿರುವ ಈ ಉತ್ಸವಕ್ಕೆ ಭರ್ಜರಿ ಸಿದ್ಧತೆಗಳು ನಡೆದಿವೆ.

**ಇದೇ 30:** ಜಾತ್ರೆಯ ಕೊನೆಯ ದಿನದಂದು ಶ್ರೀ ಅಮ್ಮನವರ ಸಿಡಿ ಮತ್ತು ಪಲ್ಲಕ್ಕಿ ಉತ್ಸವ ಜರುಗಲಿದ್ದು, ರಾತ್ರಿ ರಸಮಂಜರಿ ಕಾರ್ಯಕ್ರಮದೊಂದಿಗೆ ಮಹೋತ್ಸವ ಮುಕ್ತಾಯಗೊಳ್ಳಲಿದೆ. ಗ್ರಾಮದೇವತೆಗಳ ಈ ಪವಿತ್ರ ಜಾತ್ರಾ ಮಹೋತ್ಸವಕ್ಕೆ ಸುತ್ತಮುತ್ತಲ ಗ್ರಾಮಸ್ಥರು ಹಾಗೂ ಸಹಸ್ರಾರು ಸಂಖ್ಯೆಯ ಭಕ್ತಾದಿಗಳು ಆಗಮಿಸಿ ದೇವಿಯರ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನದ ಧರ್ಮದರ್ಶಿಗಳು ವಿನಂತಿಸಿದ್ದಾರೆ.

# ಭಕ್ತ ಸಿರಿಯಾಳ ಜಯಂತಿ ಆಚರಣೆ



ವಿಜಯಪುರ

ಪಟ್ಟಣದ ಗಾಂಧಿಚೌಕದಲ್ಲಿ ಅಯೋಧ್ಯಾನಗರ ಶಿವಾಚಾರ್ಯ ವೈಶ್ಯ ನಗರ್ತ ಮಂಡಳಿಯ ವತಿಯಿಂದ 'ಭಕ್ತ ಸಿರಿಯಾಳ ಜಯಂತಿ'ಯನ್ನು ಅಪಾರ ಭಕ್ತಿ, ಸಂಭ್ರಮ ಮತ್ತು ಸಾಂಪ್ರದಾಯಿಕ ಆಚರಣೆಗಳೊಂದಿಗೆ ವಿಜೃಂಭಣೆಯಿಂದ ಆಚರಿಸಲಾಯಿತು. ಕಾರ್ಯಕ್ರಮವು ಸ್ಥಳೀಯ ಭಕ್ತರು ಮತ್ತು ನಾಗರಿಕರ ಹೆಚ್ಚಿನ ಭಾಗವಹಿಸುವಿಕೆಯಿಂದ ವಿಶೇಷ ಕಳೆ ಪಡೆದಿತ್ತು.

ಪುರಸಭೆ ಸದಸ್ಯ ಎಂ. ಸತೀಶ್ ಕುಮಾರ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಜಯಂತಿಯನ್ನು ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, "ಭಕ್ತ ಸಿರಿಯಾಳರು ಶಿವನ ಪರಮ ಭಕ್ತರಾಗಿದ್ದು, ಭಗವಂತ ಒಡ್ಡಿದ ಕಠಿಣ ಪರೀಕ್ಷೆಗಳನ್ನೂ ಅಚಲ ಮನೋಭಾವದಿಂದ ಎದುರಿಸಿ ತಮ್ಮ ಭಕ್ತಿಯ ಶಕ್ತಿಯಿಂದಲೇ ದೇವರನ್ನು ಒಲಿಸಿಕೊಂಡ ಮಹನೀಯರು. ಅವರ ಜೀವನಚರಿತ್ರೆ ನಮ್ಮೆಲ್ಲರಿಗೂ ಸ್ಫೂರ್ತಿದಾಯಕವಾಗಿದೆ. ಇಂದಿನ ವೇಗದ ಜೀವನದಲ್ಲಿ ನಾವು ಎದುರಿಸುವ ಸಂಕಷ್ಟಗಳನ್ನು ಧೈರ್ಯದಿಂದ ಎದುರಿಸುತ್ತಾ, ಭಗವಂತನಲ್ಲಿ ನಂಬಿಕೆ ಇಟ್ಟು ಬದುಕುವುದು ಅತ್ಯಗತ್ಯ," ಎಂದು ಹೇಳಿದರು. ಜಯಂತಿಯ ಅಂಗವಾಗಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಶ್ರೀ ಭದ್ರಕಾಳಿ ಸಮೇತ ವೀರಭದ್ರಸ್ವಾಮಿ, ಭಕ್ತ ಸಿರಿಯಾಳ ಹಾಗೂ ಶಿವಕುಮಾರ ಸ್ವಾಮಿಗಳ ಉತ್ಸವ ಮೂರ್ತಿಗಳ ಭವ್ಯ ಮೆರವಣಿಗೆ ನಡೆಯಿತು. ಮೆರವಣಿಗೆಯಲ್ಲಿ ಭಕ್ತರು ಭಜನೆ, ನಾಮಸಂಕೀರ್ತನೆಗಳ ಮೂಲಕ ಭಕ್ತಿಭಾವವನ್ನು ವ್ಯಕ್ತಪಡಿಸಿದರು. ವಿವಿಧ ವಾದ್ಯಗೋಷ್ಠಿಗಳ ನಾದ ಹಾಗೂ ಹೂವಿನ ಅಲಂಕಾರದಿಂದ ಮೆರವಣಿಗೆ ಇನ್ನಷ್ಟು ಆಕರ್ಷಕವಾಗಿ ಮೂಡಿಬಂದಿತು. ಬೇಸಿಗೆಯ ತಾಪಮಾನವನ್ನು ಗಮನದಲ್ಲಿಟ್ಟುಕೊಂಡು, ಮೆರವಣಿಗೆಯಲ್ಲಿ ಭಾಗವಹಿಸಿದ ಭಕ್ತರಿಗೆ ತಂಪು ಪಾನಕ ಮತ್ತು ಮಜ್ಜಿಗೆ ವಿತರಣೆ ಮಾಡಲಾಯಿತು. ಈ ಸೇವಾ ಕಾರ್ಯವು ಭಕ್ತರಲ್ಲಿ ಮೆಚ್ಚುಗೆಗೆ ಪಾತ್ರವಾಯಿತು. ಈ ವೇಳೆ ಮಾತನಾಡಿದ ಪುರಸಭೆ ಮಾಜಿ ಸದಸ್ಯ ಎಸ್. ಭಾಸ್ಕರ್, "ಭಕ್ತಿ ಮಾರ್ಗವು ಮಾನವನನ್ನು ಸತ್ಮಾರ್ಗದತ್ತ ಕೊಂಡೊಯ್ಯುತ್ತದೆ. ಭಕ್ತ ಸಿರಿಯಾಳರಂತಹ ಮಹನೀಯರ ಜೀವನ ನಮಗೆ ಧರ್ಮ ಮತ್ತು ನಿಷ್ಠೆಯ ಮಹತ್ವವನ್ನು ಸಾರುತ್ತದೆ," ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಪುರಸಭೆ ಸದಸ್ಯೆ ರಾಜೇಶ್ವರಿ ಭಾಸ್ಕರ್, ಮಹಂತಿನ ಮಠ ಧರ್ಮ ಸಂಸ್ಥೆಯ ಅಧ್ಯಕ್ಷ ಪುನೀತ್ ಶಿವಕುಮಾರ್, ಕಾರ್ಯದರ್ಶಿ ವಿ. ವಿಶ್ವನಾಥ್, ಖಜಾಂಚಿ ಎ. ಮಧು, ಟ್ರಸ್ಟಿಗಳಾದ ನಂದನ್, ವಿನಯ್ ಕುಮಾರ್, ಪ್ರವೀಣ್ ಉಪಸ್ಥಿತರಿದ್ದರು. ನಗರ್ತ ಯುವಕ ಸಂಘದ ಅಧ್ಯಕ್ಷ ವಿ. ಬಸವರಾಜು, ಜಿಲ್ಲಾ ಶರವೇ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಚಂದ್ರಶೇಖರ್ ಹಡಪದ್, ಕಾರ್ಯದರ್ಶಿ ಆರ್. ಮುನಿರಾಜು, ಕೆ. ಎಚ್. ಚಂದ್ರಶೇಖರ್ ಸೇರಿದಂತೆ ಅನೇಕ ಗಣ್ಯರು, ಮುಖಂಡರು ಸೇರಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.

# ಮಹಿಳೆಯರು ಆರೋಗ್ಯದ ಕುರಿತು ಜಾಗೃತರಾಗಿರಿ: ಕಾವೇರಿ



ಕುಣಿಗಲ್

"ಮಹಿಳೆಯರು ದೈನಂದಿನ ಕೆಲಸ ಕಾರ್ಯಗಳ ನಡುವೆ ತಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಹರಿಸಬೇಕು. ಎಂತಹ ಕಷ್ಟದ ಸಂದರ್ಭದಲ್ಲೂ ತಾಳ್ಮೆ ಮತ್ತು ದಿಟ್ಟತನದಿಂದ ಎದುರಿಸುವ ಶಕ್ತಿ ಮಹಿಳೆಯರಿಗಿದೆ," ಎಂದು ವೈದ್ಯಾಧಿಕಾರಿ ಡಾ. ಕಾವೇರಿ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಐ.ಕ್ಯೂ.ಎ.ಸಿ, ಮಹಿಳಾ ಕೋಶ, ಸಬಲೀಕರಣ ಕೋಶ ಹಾಗೂ ಯುವ ರೆಡ್ ಕ್ರಾಸ್ ವತಿಯಿಂದ ಆಯೋಜಿಸಲಾಗಿದ್ದ ವಿಶ್ವ ಮಹಿಳಾ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಯುವಜನತೆ ಮೊಬೈಲ್ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಅತಿಯಾಗಿ ಮುಳುಗಿ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದ ಡಾ. ಕಾವೇರಿ, "ಹೆಣ್ಣುಮಕ್ಕಳಿಗೆ ಲೈಂಗಿಕ ಶಿಕ್ಷಣದ ಅರಿವು ಅತ್ಯಗತ್ಯ. ಋತುಸ್ರಾವ ಮತ್ತು ವೈಯಕ್ತಿಕ ಶುಚಿತ್ವದ ಬಗ್ಗೆ ನಿರ್ಲಕ್ಷ್ಯ ವಹಿಸಬಾರದು. ಹದಿಹರೆಯದ ಸಮಸ್ಯೆಗಳಿದ್ದಲ್ಲಿ ತಕ್ಷಣವೇ ವೈದ್ಯರ ಸಲಹೆ ಪಡೆಯಬೇಕು," ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ರಾಮಾಂಜನಪ್ಪ ಮಾತನಾಡಿ, "ವೈಜ್ಞಾನಿಕ ಯುಗದಲ್ಲೂ ಮುಟ್ಟು ಮತ್ತು ಬಾಣಂತನದ ಸಮಯದಲ್ಲಿ ಮಹಿಳೆಯರನ್ನು ಸೂತಕದ ಹೆಸರಿನಲ್ಲಿ ಮನೆಯಿಂದ ಹೊರಗಿಡುವುದು ವಿಷಾದನೀಯ. ಇಂತಹ ಮೌಢ್ಯಗಳನ್ನು ತೊರೆದು ಮಹಿಳೆಯರು ಶಿಕ್ಷಣದ ಮೂಲಕ ಮುಖ್ಯವಾಹಿನಿಗೆ ಬರಬೇಕು," ಎಂದು ಆಶಿಸಿದರು.

ಮಹಿಳಾ ಸಬಲೀಕರಣ ಕೋಶದ ಸಂಚಾಲಕಿ ಡಾ. ಎನ್. ಮಮತಾ ಮಾತನಾಡಿ, ಮಹಿಳೆಯರಿಗೆ ಸಮಾನ ಅವಕಾಶ ಮತ್ತು ಸಂಪನ್ಮೂಲ ನೀಡಿದಾಗ ಮಾತ್ರ ದೇಶದ ಸಾಮೂಹಿಕ ಪ್ರಗತಿ ಸಾಧ್ಯ ಎಂದರು. ಸ್ನೇಹ ಮಾನಸಿಕ ಸ್ವಾಸ್ಥ್ಯ ಕೌನ್ಸಿಲರ್ ಮಂಜುಳಾ ಅವರು ಕ್ಯಾನ್ಸರ್ ತಡೆಗಟ್ಟಲು ಸರ್ಕಾರ ನೀಡುತ್ತಿರುವ ಉಚಿತ ಲಸಿಕೆಯನ್ನು ಪಡೆದುಕೊಳ್ಳುವಂತೆ ವಿದ್ಯಾರ್ಥಿನಿಯರಿಗೆ ತಿಳಿಸಿದರು.

ಇದೇ ಸಂದರ್ಭದಲ್ಲಿ ವೈದ್ಯಾಧಿಕಾರಿ ಡಾ. ಕಾವೇರಿ ಹಾಗೂ ಕೌನ್ಸಿಲರ್ ಮಂಜುಳಾ ಅವರನ್ನು ಕಾಲೇಜಿನ ವತಿಯಿಂದ ಸನ್ಮಾನಿಸಲಾಯಿತು. ಅಧ್ಯಾಪಕರಾದ ಡಾ. ಎಂ.ಕೆ. ಮಂಜುಳಾ, ಅನಿತಲಕ್ಷ್ಮಿ, ಸಿ.ಆರ್. ಮನೋಜ್ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಈಶ್ವರಪ್ಪ, ಡಾ. ನಿರ್ಮಲಾ, ಡಾ. ರಾಧಾ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

# ಗೋ ರಕ್ಷಕರ ಮೇಲಿನ ಹಲ್ಲೆ ಖಂಡಿಸಿ ತಿಪಟೂರು ಬಂದ್ ಯಶಸ್ವಿ

ತಿಪಟೂರು

ನಗರದಲ್ಲಿ ಗೋ ರಕ್ಷಕರ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿ ಹಮ್ಮಿಕೊಳ್ಳಲಾಗಿದ್ದ 'ತಿಪಟೂರು ಬಂದ್' ಯಶಸ್ವಿಯಾಗಿದ್ದು, ಸಾವಿರಾರು ಹಿಂದೂ ಕಾರ್ಯಕರ್ತರು ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಸಿದರು. ನಗರದ ಪ್ರಮುಖ ಬೀದಿಗಳಲ್ಲಿ ಬೈಕ್ ರ್‍ಯಾಲಿ ನಡೆಸುವ ಮೂಲಕ ಆಕ್ರೋಶ ವ್ಯಕ್ತಪಡಿಸಲಾಯಿತು.



ನಗರದ ಶ್ರೀ ಕೆಂಪಮ್ಮ ದೇವಸ್ಥಾನದಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆಯು ದೊಡ್ಡಪೇಟೆ, ಬಿ.ಹೆಚ್. ರಸ್ತೆ ಹಾಗೂ ಅಂಬೇಡ್ಕರ್ ವೃತ್ತದ ಮಾರ್ಗವಾಗಿ ನಗರಸಭೆಯ ಮುಂಭಾಗಕ್ಕೆ ತಲುಪಿತು. ನೂರಾರು ಬೈಕ್‌ಗಳಲ್ಲಿ ಆಗಮಿಸಿದ ಕಾರ್ಯಕರ್ತರು ಹಲ್ಲೆಕೋರರ ವಿರುದ್ಧ ಘೋಷಣೆಗಳನ್ನು ಕೂಗಿದರು. ಸಾರ್ವಜನಿಕರು ಮತ್ತು ವರ್ತಕರು ಸ್ವಯಂಪ್ರೇರಿತವಾಗಿ ವ್ಯಾಪಾರ ವಹಿವಾಟು ಸ್ಥಗಿತಗೊಳಿಸುವ ಮೂಲಕ ಬಂದ್‌ಗೆ ಬೆಂಬಲ ಸೂಚಿಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಭಜರಂಗದಳದ ಪ್ರಮುಖರಾದ ರಘು ಸಕಲೇಶಪುರ, "ಐವರು ಹಿಂದೂ ಗೋ ರಕ್ಷಕರ ಮೇಲೆ ನಡೆದಿರುವ ಹಲ್ಲೆ ಖಂಡನೀಯ. ತಿಪಟೂರಿನಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಕಾರ್ಯಕರ್ತರು ಒಗ್ಗೂಡಿರುವುದು ಸಂತಸ ತಂದಿದೆ. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸಿದರೆ ತಕ್ಕ ಪಾಠ ಕಲಿಸಲಾಗುವುದು," ಎಂದು ಎಚ್ಚರಿಕೆ ನೀಡಿದರು.

ಮುಖಂಡರಾದ ಲೋಕೇಶ್ವರ್ ಮತ್ತು ಶಾಂತಕುಮಾರ್ ಅವರು ಹಲ್ಲೆಯಿಂದ ಗಾಯಗೊಂಡಿರುವ ಕಾರ್ಯಕರ್ತರಿಗೆ ತಲಾ 10,000 ರೂ.ಗಳ ಆರ್ಥಿಕ ನೆರವು ಘೋಷಿಸಿದರು. ಮುಖಂಡ ತರಕಾರಿ ಗಂಗಾಧರ್ ಮಾತನಾಡಿ, ಸಾರ್ವಜನಿಕರು ಸ್ವಯಂಪ್ರೇರಿತವಾಗಿ ಬಂದ್‌ನಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದ್ದಾರೆ ಎಂದು ತಿಳಿಸಿದರು.

ಈ ಸಮಾರಂಭದಲ್ಲಿ ಬಾಳೆಕಾಯಿ ನಟರಾಜು, ವಿಶ್ವದೀಪ್, ಮಾಡಿನೂರು ವಿನಯ್, ಕೃಷ್ಣ, ರಾಮಮೋಹನ್, ಮಹಾಲಕ್ಷ್ಮಮ್ಮ, ಗೋಪಿ, ಶ್ರೀಕಂಠ, ಜಯಲಕ್ಷ್ಮಿ ಸೇರಿದಂತೆ ಭಜರಂಗದಳ ಹಾಗೂ ವಿವಿಧ ಹಿಂದೂ ಪರ ಸಂಘಟನೆಗಳ ಸಾವಿರಾರು ಕಾರ್ಯಕರ್ತರು ಭಾಗವಹಿಸಿದ್ದರು.

# ಒಳಮೀಸಲಾತಿ ಜಾರಿಗೆ ತುಮಕೂರಿನಲ್ಲಿ ಮೊಳಗಿದ ರಣಕಹಳೆ

ತುಮಕೂರು

"ಒಳಮೀಸಲಾತಿ ಅಳವಡಿಸದೆ ರಾಜ್ಯ ಸರ್ಕಾರ ಹೊರಡಿಸಿರುವ 56,432 ಹುದ್ದೆಗಳ ನೇಮಕಾತಿ ಅಧಿಸೂಚನೆಯನ್ನು ಕೂಡಲೇ ಹಿಂಪಡೆಯಬೇಕು," ಎಂದು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಡಾ. ಎನ್. ಮೂರ್ತಿ ಬಣ) ಹಾಗೂ ಆರ್.ಪಿ.ಐ ಕರ್ನಾಟಕ ಘಟಕದ ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.



ಡಿ.ಎಸ್.ಎಸ್ ಜಿಲ್ಲಾಧ್ಯಕ್ಷ ಪಿ.ಎನ್. ರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, "ಸರ್ಕಾರವು ಒಳಮೀಸಲಾತಿಯನ್ನು ಕಡೆಗಣಿಸಿ ಕೇವಲ ಶೇ. 15ರ ಮೀಸಲಾತಿ ಅಡಿಯಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದ ಹುದ್ದೆಗಳನ್ನು ತುಂಬಲು ಮುಂದಾಗಿರುವುದು ಮಾದಿಗ ಮತ್ತು ಸಂಬಂಧಿತ ಉಪಜಾತಿಗಳಿಗೆ ಎಸಗುತ್ತಿರುವ ದ್ರೋಹ. ಸುಪ್ರೀಂ ಕೋರ್ಟ್ ತೀರ್ಪಿನ ಅನ್ವಯ ನಾಗಮೋಹನ್ ದಾಸ್ ಆಯೋಗದ ವರದಿಯನ್ನು ಅಂಗೀಕರಿಸಿ, 2026ರ ಮಸೂದೆಯನ್ನೂ ಪಾಸು ಮಾಡಿದ್ದರೂ, ಸರ್ಕಾರ ಸುತ್ತೋಲೆ ಹೊರಡಿಸುವಾಗ ಅದನ್ನು ಕೈಬಿಟ್ಟಿರುವುದು ರಾಜಕೀಯ ಹುನ್ನಾರ," ಎಂದು ದೂರಿದರು.

ಸಹಸ್ರಾರು ವರ್ಷಗಳಿಂದ ಕೀಳು ವೃತ್ತಿಗಳಲ್ಲಿ ತೊಡಗಿಸಿಕೊಂಡು ದಯನೀಯ ಸ್ಥಿತಿಯಲ್ಲಿರುವ ಮಾದಿಗ ಸಮುದಾಯಕ್ಕೆ ಜನಸಂಖ್ಯೆಗನುಗುಣವಾಗಿ ಉದ್ಯೋಗ ದೊರೆಯದಿದ್ದರೆ ಬದುಕು ಕಟ್ಟಿಕೊಳ್ಳುವುದು ಅಸಾಧ್ಯ. ಸರ್ಕಾರವು ತಾಂತ್ರಿಕ ಅಡಚಣೆಯ ನೆಪ ಹೇಳುತ್ತಾ ಸಮುದಾಯವನ್ನು ವಂಚಿಸುತ್ತಿದೆ. ಚುನಾವಣೆ ಪೂರ್ವದಲ್ಲಿ ಭರವಸೆ ನೀಡಿದ್ದ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಈಗ ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

"ಪ್ರಸ್ತುತ ಘೋಷಿಸಿರುವ 56,432 ಹುದ್ದೆಗಳು ಸೇರಿದಂತೆ ಮುಂದಿನ ಎಲ್ಲಾ ನೇಮಕಾತಿಗಳಲ್ಲಿ ಒಳಮೀಸಲಾತಿ ಅಳವಡಿಸಬೇಕು. ಒಂದು ವೇಳೆ ಮಾದಿಗ ಸಮುದಾಯದ ಬೇಡಿಕೆಯನ್ನು ನಿರ್ಲಕ್ಷಿಸಿದರೆ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ಮಟ್ಟದ ರಾಜಕೀಯ ಹೊಡೆತ ನೀಡಲಾಗುವುದು," ಎಂದು ಸಮಿತಿಯ ಮುಖಂಡರು ಎಚ್ಚರಿಕೆ ನೀಡಿದರು.

ಸಮಿತಿಯ ಪದಾಧಿಕಾರಿಗಳಾದ ಗೂಳೂರು ರಾಜಣ್ಣ, ನಾಗರಾಜ ಗೂಳರಿವೆ, ಸುನಿಲ್, ಹರಿನಾಥ್, ಶಾಂತಕುಮಾರ್, ರಂಗನಾಥ್, ಟಿ.ಕೆ. ನರಸೀಯಪ್ಪ, ಎ. ನಾಗೇಶ್, ಲಕ್ಷ್ಮಮ್ಮ, ಬೆಣ್ಣೇನಹಳ್ಳಿ ರಾಜು ಹಾಗೂ ಸಾಕ್ಷರತಾ ಪ್ರೇರಕರ ಸಂಘದ ರಾಜಣ್ಣ. ಜಿ, ಸತೀಶ್ ಕಂಟಲಗೆರೆ ಸೇರಿದಂತೆ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

## ಬಸ್ ನಿಲ್ದಾಣವೇ ಪಾರ್ಕಿಂಗ್ ಲಾಟ್; ಅಧಿಕಾರಿಯ ಉಡಾಫೆ ವರ್ತನೆ



ಶ್ರೀನಿವಾಸಪುರ

ಪಟ್ಟಣದ ಸಾರಿಗೆ ಬಸ್ ನಿಲ್ದಾಣವು ಬುಧವಾರ ರಾಜಕೀಯ ಪ್ರಚಾರದ ತಾಣವಾಗಿ ಮಾರ್ಪಟ್ಟಿದ್ದು, ಸಾರ್ವಜನಿಕರು ಮತ್ತು ಪ್ರಯಾಣಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೆ.ಸಿ. ವ್ಯಾಲಿ ಯೋಜನೆಗೆ ಸಂಬಂಧಿಸಿದಂತೆ ಆಯೋಜಿಸಿದ್ದ ರಾಜಕೀಯ ರ್‍ಯಾಲಿಯಿಂದಾಗಿ ಬಸ್‌ಗಳ ಸಂಚಾರಕ್ಕೆ ವ್ಯತ್ಯಯ ಉಂಟಾಗಿ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

'ಚಲೋ ಲಕ್ಷ್ಮಿ ಸಾಗರ' ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಸುಮಾರು 200ಕ್ಕೂ ಹೆಚ್ಚು ಕಾರುಗಳ ರ್‍ಯಾಲಿಗೆ ಬಸ್ ನಿಲ್ದಾಣವನ್ನೇ ಪಾರ್ಕಿಂಗ್ ತಾಣವಾಗಿ ಬಳಸಿಕೊಳ್ಳಲಾಯಿತು. ಬಸ್ ನಿಲ್ದಾಣದ ಆವರಣದಲ್ಲೇ ರಾಜಕೀಯ ಮುಖಂಡರಿಗೆ ಬೆಳಗಿನ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು. ತಿಂದು ಎಸೆದ ಎಲೆಗಳು, ಪ್ಲಾಸ್ಟಿಕ್ ಲೋಟ ಹಾಗೂ ನೀರಿನ ಬಾಟಲಿಗಳು ಎಲ್ಲೆಂದರಲ್ಲಿ ಬಿದ್ದಿದ್ದು, ಇಡೀ ನಿಲ್ದಾಣವು ಅಶುಚಿತ್ವದಿಂದ ಕೂಡಿತ್ತು. ಇದರಿಂದಾಗಿ ಬಸ್ ಹತ್ತಲು ಬಂದ ಪ್ರಯಾಣಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಎದುರಾಯಿತು.

ಸಾರ್ವಜನಿಕರ ಈ ಕಷ್ಟಕ್ಕೆ ಸ್ಪಂದಿಸಬೇಕಿದ್ದ ಡಿಪೋ ಅಧಿಕಾರಿ ಮಾದೇಶ ಅವರು ಮೂಕಪ್ರೇಕ್ಷಕರಾಗಿ ಮೆರವಣಿಗೆಯನ್ನು ವೀಕ್ಷಿಸುತ್ತಾ ಕಾಲ ಕಳೆದರು ಎಂಬ ಆರೋಪ ಕೇಳಿಬಂದಿದೆ. ಈ ಬಗ್ಗೆ ಪತ್ರಕರ್ತರು ಪ್ರಶ್ನಿಸಿದಾಗ, "ಅಲ್ಲಿ ಇರುವುದೆಲ್ಲಾ ದೊಡ್ಡವರೇ, ಬೇಕಿದ್ದರೆ ಸಚಿವರಿಂದ ಕರೆ ಮಾಡಿಸುತ್ತೇವೆ" ಎಂದು ಉಡಾಫೆಯಾಗಿ ಉತ್ತರಿಸಿ ಬೆದರಿಕೆ ಹಾಕಿದ್ದಾರೆನ್ನಲಾಗಿದೆ. ಅಧಿಕಾರಿಯ ಈ ನಡೆಯು ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದ್ದು, ಅಧಿಕಾರಿ ಸ್ಥಾನದ ಘನತೆಗೆ ಧಕ್ಕೆ ತಂದಿದ್ದಾರೆ ಎಂದು ಜನರು ಆಕ್ರೋಶ ಹೊರಹಾಕಿದ್ದಾರೆ.

ರಾಜಕೀಯ ಪ್ರಭಾವಕ್ಕೆ ಮಣಿದು ಸಾರ್ವಜನಿಕ ಆಸ್ತಿಯನ್ನು ದುರ್ಬಳಕೆ ಮಾಡಿಕೊಳ್ಳಲು ಬಿಟ್ಟಿರುವ ಅಧಿಕಾರಿಗಳ ವಿರುದ್ಧ ಮೇಲಾಧಿಕಾರಿಗಳು ಯಾವ ಕ್ರಮ ಕೈಗೊಳ್ಳುತ್ತಾರೆ ಎಂಬುದು ಈಗ ಕುತೂಹಲ ಮೂಡಿಸಿದೆ.

# ಕ್ಷಯರೋಗದ ವಿರುದ್ಧ ಆರೋಗ್ಯ ಇಲಾಖೆ ಸಮರ; ಬೃಹತ್ ಜಾಗೃತಿ ಜಾಥಾ

ಶ್ರೀನಿವಾಸಪುರ

"ಕ್ಷಯರೋಗವನ್ನು (ಟಿಬಿ) ಬೇರುಸಹಿತ ಕಿತ್ತೆಸೆಯುವ ಗುರಿಯೊಂದಿಗೆ ಆರೋಗ್ಯ ಇಲಾಖೆ ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕರು ಮುನ್ನೆಚ್ಚರಿಕೆ ಮತ್ತು ಜಾಗೃತಿ ವಹಿಸುವ ಮೂಲಕ ಸಹಕರಿಸಬೇಕು," ಎಂದು ಡಾ. ವೈ.ವಿ. ವೆಂಕಟಾಚಲ ಕರೆ ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕ್ಷಯರೋಗ ನಿವಾರಣಾಧಿಕಾರಿಗಳ ಕಚೇರಿ ಹಾಗೂ ಎಸ್‌ವಿ ಪ್ಯಾರಾ ಮೆಡಿಕಲ್ ಸೈನ್ಸ್ ಕಾಲೇಜಿನ ಸಹಯೋಗದಲ್ಲಿ ಮಂಗಳವಾರ ಹಮ್ಮಿಕೊಳ್ಳಲಾಗಿದ್ದ 'ವಿಶ್ವ ಕ್ಷಯರೋಗ ದಿನಾಚರಣೆ' ಅಂಗವಾಗಿ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.




ಕ್ಷಯರೋಗವು ಒಬ್ಬರಿಂದ ಒಬ್ಬರಿಗೆ ಹರಡುವ ಸಾಂಕ್ರಾಮಿಕ ರೋಗವಾಗಿದ್ದು, ಇದರ ನಿರ್ಮೂಲನೆಗೆ ಸರ್ಕಾರ ಉಚಿತ ಚಿಕಿತ್ಸೆ ಮತ್ತು ಪೌಷ್ಟಿಕಾಂಶದ ನೆರವು ನೀಡುತ್ತಿದೆ. "ರೋಗಿಗಳು ವೈದ್ಯರ ಸಲಹೆಯಂತೆ ನಿಗದಿತ ಅವಧಿಯವರೆಗೆ ಔಷಧ ಸೇವಿಸಬೇಕು. ಯಾವುದೇ ಕಾರಣಕ್ಕೂ ಚಿಕಿತ್ಸೆಯನ್ನು ಮಧ್ಯದಲ್ಲಿ ನಿಲ್ಲಿಸಬಾರದು. ಚಿಕಿತ್ಸೆ ಪೂರ್ಣಗೊಳಿಸಿದರೆ ರೋಗದಿಂದ ಸಂಪೂರ್ಣ ಗುಣಮುಖರಾಗಲು ಸಾಧ್ಯ," ಎಂದು ಅವರು ತಿಳಿಸಿದರು.

ದೇಶದಲ್ಲಿ ಈಗಾಗಲೇ ಶೇ. 90ರಷ್ಟು ಕ್ಷಯರೋಗ ನಿವಾರಣೆಯಾಗಿದೆ. ಬಾಕಿ ಇರುವ ಶೇ. 10ರಷ್ಟು ರೋಗವನ್ನು ತೊಡೆದುಹಾಕಲು ಪ್ರತಿಯೊಬ್ಬರೂ ಭಾಗಿಯಾಗಬೇಕು. ರಾಜ್ಯಪಾಲರು ಸೇರಿದಂತೆ ಸಮಾಜದ ಗಣ್ಯರು ಕ್ಷಯರೋಗಿಗಳನ್ನು ದತ್ತು ಪಡೆದು ಪೋಷಿಸುತ್ತಿದ್ದಾರೆ. ಸಾರ್ವಜನಿಕರು ರೋಗದ ಲಕ್ಷಣಗಳ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದು ಡಾ. ವೆಂಕಟಾಚಲ ಆಶಯ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಎಸ್‌ವಿ ಕಾಲೇಜಿನ ಪ್ರಾಂಶುಪಾಲ ಸೀನಪ್ಪ, ಆಶಾ ಕಾರ್ಯಕರ್ತೆಯರ ಮೇಲ್ವಿಚಾರಕಿ ಕೃಪಾ, ಆರೋಗ್ಯ ಶಿಕ್ಷಣಾಧಿಕಾರಿ ಆಂಜಿಲಮ್ಮ, ನಿರೀಕ್ಷಕರಾದ ನಾಗಮಣಿ, ಧರ್ಮರಾಜು ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಆರೋಗ್ಯ ಇಲಾಖೆಯ ಸಿಬ್ಬಂದಿ ಪಾಲ್ಗೊಂಡು ಕ್ಷಯರೋಗ ಮುಕ್ತ ಸಮಾಜದ ಘೋಷಣೆಗಳನ್ನು ಕೂಗಿದರು.



ಕನಕಪುರ ತಾಲ್ಲೂಕಿನ ಪ್ರಸಿದ್ಧ ಪುಣ್ಯಕ್ಷೇತ್ರವಾದ ಶಿವನಹಳ್ಳಿಯ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದ ನೂತನ ಕಟ್ಟಡ ಕಾಮಗಾರಿಗಾಗಿ ಬೆಂಗಳೂರಿನ ಭಕ್ತರಾದ ಭಾರತಿ ಹಾಗೂ ಪ್ರಸಾದ್ ದಂಪತಿಗಳು ಒಂದು ಲಕ್ಷ ರೂಪಾಯಿಗಳನ್ನು ಸೇವಾ ದೇಣಿಗೆಯಾಗಿ ಸಮರ್ಪಿಸಿದ್ದಾರೆ. ಈ ಸಂದರ್ಭದಲ್ಲಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಪದಾಧಿಕಾರಿಗಳು ಹಾಗೂ ಸ್ಥಳೀಯ ಭಕ್ತಾಧಿಗಳು ಉಪಸ್ಥಿತರಿದ್ದು, ದಾನಿಗಳ ಈ ಸಮಾಜಮುಖಿ ಕಾರ್ಯವನ್ನು ಶ್ಲಾಘಿಸಿದರು.

# ಕೆಪಿಟಿಸಿಎಲ್ ಏಕಪಕ್ಷೀಯ ನಿರ್ಧಾರಕ್ಕೆ ರೈತರ ಆಕ್ರೋಶ; 30ಕ್ಕೆ ಡಿಸಿ ಕಚೇರಿ ಮುಂದೆ ಪ್ರತಿಭಟನೆ

ದೊಡ್ಡಬಳ್ಳಾಪುರ

ತಾಲೂಕಿನ ರೈತರ ಜಮೀನುಗಳ ಮೇಲೆ ಹಾದು ಹೋಗಿರುವ 220 ಕೆವಿ ವಿದ್ಯುತ್ ಲೈನ್ ಅನ್ನು ಏಕ ಮಾರ್ಗದಿಂದ ದ್ವಿಮಾರ್ಗಕ್ಕೆ ಬದಲಾಯಿಸುತ್ತಿರುವ ಕೆಪಿಟಿಸಿಎಲ್ ಕ್ರಮವನ್ನು ಖಂಡಿಸಿ ಹಾಗೂ ಭೂಮಿಗೆ ವೈಜ್ಞಾನಿಕ ದರ ನಿಗದಿಗೆ ಒತ್ತಾಯಿಸಿ ಮಾರ್ಚ್ 30ರಂದು ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಪ್ರಸನ್ನ ತಿಳಿಸಿದರು.

ನಗರದ ಎಪಿಎಂಸಿ ಮಾರುಕಟ್ಟೆ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಳ್ಳಲಾಗಿದ್ದ ರೈತ ಸಂಘದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

"ದೊಡ್ಡಬಳ್ಳಾಪುರ ತಾಲೂಕಿನಿಂದ ಗೌರಿಬಿದನೂರು ಕೇಂದ್ರದವರೆಗೆ ಹಾದುಹೋಗುವ ಈ ವಿದ್ಯುತ್ ಲೈನ್ 20ಕ್ಕೂ ಹೆಚ್ಚು ಗ್ರಾಮಗಳ ರೈತರ ಜಮೀನಿನ ಮೇಲೆ ಹಾದುಹೋಗಲಿದೆ. ಈ ಹಿಂದೆ ಏಕಮಾರ್ಗದ ಕಾರಿಡಾರ್ ನಿರ್ಮಿಸುವಾಗ 60 ವರ್ಷಗಳವರೆಗೆ ಯಾವುದೇ ಬದಲಾವಣೆ ಮಾಡುವುದಿಲ್ಲ ಎಂದು ಭರವಸೆ ನೀಡಲಾಗಿತ್ತು. ಆದರೆ ಈಗ ಏಕಾಏಕಿ ದ್ವಿಮಾರ್ಗ ಮಾಡಲು ಹೊರಟಿರುವುದು ರೈತರಿಗೆ ಮಾರಕವಾಗಿದೆ. ಇದಕ್ಕೆ ನೀಡುತ್ತಿರುವ ಪರಿಹಾರ ಧನವು ತೀರಾ ಅವೈಜ್ಞಾನಿಕವಾಗಿದೆ," ಎಂದು ಪ್ರಸನ್ನ ಆಕ್ರೋಶ ವ್ಯಕ್ತಪಡಿಸಿದರು. ಸಭೆಯಲ್ಲಿ ಭಾಗವಹಿಸಿದ್ದ ಬಮುಲ್ ನಿರ್ದೇಶಕ ಸತೀಶ್ ಮಾತನಾಡಿ, "ಸರ್ಕಾರವು ಯಲಹಂಕದಲ್ಲಿ ಭೂಗತ ಕೇಬಲ್ ಅಳವಡಿಸಿದೆ ಮತ್ತು ಫಾಕ್ಸ್‌ಕಾನ್‌ನಂತಹ ಬೃಹತ್ ಖಾಸಗಿ ಕಂಪನಿಗಳಿಗೆ ಭೂಗತ ವಿದ್ಯುತ್ ಸಂಪರ್ಕ ನೀಡುತ್ತಿದೆ. ಆದರೆ ರೈತರ ವಿಷಯಕ್ಕೆ ಬಂದಾಗ ಮಾತ್ರ ಹೊಲಗಳ ಮೇಲೆ ಲೈನ್ ಎಳೆದು ಬೇಲಿ ಹಾಕುತ್ತಿದೆ. ರೈತರಿಗೆ ಬಿಡಿಗಾಸು ನೀಡುವ ಬದಲು ಮಾರುಕಟ್ಟೆ ಬೆಲೆಯಂತೆ ಪರಿಹಾರ ನೀಡಬೇಕು. ಇಲ್ಲವಾದಲ್ಲಿ ಮಾ. 30ರಂದು ಪ್ರತಿಭಟನೆ ಮಾಡುವುದು ಖಚಿತ," ಎಂದು ಎಚ್ಚರಿಸಿದರು. ಕಾರ್ಯಕ್ರಮದಲ್ಲಿ ರೈತ ಸಂಘದ ಮುಖಂಡರಾದ ಮುತ್ತೇಗೌಡ, ಹನುಮೇಗೌಡ, ತಿ. ರಂಗರಾಜು ಸೇರಿದಂತೆ ಹತ್ತಾರು ಹಳ್ಳಿಗಳ ರೈತ ಮುಖಂಡರು ಭಾಗವಹಿಸಿ ಹೋರಾಟಕ್ಕೆ ಬೆಂಬಲ ಸೂಚಿಸಿದರು.

# ಉಚಿತ ಆರೋಗ್ಯ ಕಿಟ್ ವಿತರಣೆ



ಕನಕಪುರ

"ಸರ್ಕಾರಿ ಶಾಲೆಗಳ ಹಾಗೂ ಬಡ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಪೂರಕವಾಗಿ ಸರ್ಕಾರ ಸೌಲಭ್ಯಗಳನ್ನು ನೀಡುತ್ತಿದೆ. ಇದರ ಜೊತೆಗೆ ಸೇವಾ ಸಂಸ್ಥೆಗಳು ಕೈಜೋಡಿಸಿದರೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಮತ್ತಷ್ಟು ಎತ್ತರಕ್ಕೆ ಬೆಳೆಯಲು ಸಾಧ್ಯ," ಎಂದು ಬೆಂಗಳೂರು ವಿಲ್ಸನ್ ಗಾರ್ಡನ್ ಲಯನ್ಸ್ ಸೇವಾ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ವಿ. ರವೀಂದ್ರ ತಿಳಿಸಿದರು.

ತಾಲೂಕಿನ ಬಾದಗೆರೆ ಮುರಾರ್ಜಿ ದೇಸಾಯಿ ವಸತಿ ಶಾಲಾ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ನೂರಾರು ವಿದ್ಯಾರ್ಥಿಗಳಿಗೆ ಉಚಿತ ಆರೋಗ್ಯ ಕಿಟ್ ಹಾಗೂ ಬಟ್ಟೆಗಳನ್ನು ವಿತರಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪರಿಕರಗಳನ್ನು ನೀಡಿದ ರವೀಂದ್ರ ಅವರು, "ವಿದ್ಯಾರ್ಥಿಗಳು ಏಕಾಗ್ರತೆ ಮತ್ತು ಸತತ ಪರಿಶ್ರಮದ ಮೂಲಕ ಸಮಯವನ್ನು ಸದುಪಯೋಗಪಡಿಸಿಕೊಳ್ಳಬೇಕು. ಸರ್ಕಾರ ಹಾಗೂ ಸೇವಾ ಸಂಸ್ಥೆಗಳು ನೀಡುವ ಸವಲತ್ತುಗಳನ್ನು ಬಳಸಿಕೊಂಡು ಉತ್ತಮ ಅಂಕ ಗಳಿಸಿ ತಮ್ಮ ಗುರಿ ಸಾಧಿಸಬೇಕು," ಎಂದು ಕರೆ ನೀಡಿದರು. ಶಾಲೆಯ ವಿದ್ಯಾರ್ಥಿನಿಯರಿಗೆ ನೈರ್ಮಲ್ಯ ಕಾಪಾಡಲು ಪ್ಯಾಡ್‌ಗಳನ್ನು ಹಾಗೂ ಎಲ್ಲಾ ವಿದ್ಯಾರ್ಥಿಗಳಿಗೆ ಬಟ್ಟೆಗಳನ್ನು ವಿತರಿಸಲಾಯಿತು. ಕನಕಪುರ ಲಯನ್ಸ್ ಸಂಸ್ಥೆಯ ಮಾಜಿ ಅಧ್ಯಕ್ಷ ವೆಂಕಟೇಶ್ ಮಾತನಾಡಿ, "ಲಯನ್ಸ್ ಕ್ಲಬ್ ವಿಶ್ವದಾದ್ಯಂತ ಆರೋಗ್ಯ, ಶಿಕ್ಷಣ ಹಾಗೂ ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುತ್ತಿದೆ. ಗ್ರಾಮೀಣ ಭಾಗದ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ವಿಲ್ಸನ್ ಗಾರ್ಡನ್ ಸೇವಾ ಫೌಂಡೇಶನ್ ನಡೆಸುತ್ತಿರುವ ಈ ಕಾರ್ಯ ಶ್ಲಾಘನೀಯ," ಎಂದರು. ಸಮಾರಂಭದಲ್ಲಿ ಪ್ರಾಂಶುಪಾಲ ಶಾಂತರಾಮ್ ಶೆಟ್ಟಿ, ಲಯನ್ಸ್ ಟ್ರಸ್ಟ್ ಅಧ್ಯಕ್ಷ ಕಾರ್ತಿಕೇಯನ್, ಕಾರ್ಯದರ್ಶಿ ಟಿ.ಪಿ. ಲೀಲಾವತಿ, ಲಯನ್ಸ್ ಪರಿಸರ ಅಧ್ಯಕ್ಷ ಮರಸಪ್ಪರವಿ, ಕಾಂಗ್ರೆಸ್ ಮುಖಂಡ ಈಶ್ವರ್, ಲೋಕೇಶ್ ಪಾಟೀಲ್ ಹಾಗೂ ಶಿಕ್ಷಕ ಶಿವಕುಮಾರ್ ಸೇರಿದಂತೆ ಸಹಶಿಕ್ಷಕರು ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಶಾಸಕ ರಂಗನಾಥ್ ಜನಪ್ರಿಯತೆ ಸಹಿಸದೆ ವಿಪಕ್ಷಗಳಿಂದ ಅಪಪ್ರಚಾರ



ಕುಣಿಗಲ್

"ಕ್ಷೇತ್ರದ ಶಾಸಕ ಡಾ. ಎಚ್.ಡಿ. ರಂಗನಾಥ್ ಅವರ ಅಭಿವೃದ್ಧಿ ಕೆಲಸಗಳು ಹಾಗೂ ಜನಪ್ರಿಯತೆಯನ್ನು ಸಹಿಸದ ವಿರೋಧ ಪಕ್ಷದ ಮುಖಂಡರು, ಹತಾಶೆಯಿಂದ ಶಾಸಕರ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ," ಎಂದು ಕಾಂಗ್ರೆಸ್ ಯುವ ಮುಖಂಡ ಪ್ರವೀಣ್ ಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಶಾಸಕರ ವಿರುದ್ಧ ವಿಪಕ್ಷಗಳು ಮಾಡುತ್ತಿರುವ ಟೀಕೆಗಳನ್ನು ಖಂಡಿಸಿ ಪತ್ರಿಕಾ ಹೇಳಿಕೆ ನೀಡಿರುವ ಅವರು, ವಿರೋಧ ಪಕ್ಷಗಳ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

"ಡಾ. ರಂಗನಾಥ್ ಅವರು ಕೇವಲ ರಾಜಕಾರಣಿಯಲ್ಲ, ಸೇವಾ ಮನೋಭಾವದ ಶಾಸಕರು. ಕ್ಷೇತ್ರದಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಅನುದಾನ ತಂದು ನೀರಾವರಿ ಯೋಜನೆಗಳು, ರಸ್ತೆ ಅಭಿವೃದ್ಧಿ ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಮೂಲಕ ಜನರ ಮನ ಗೆದ್ದಿದ್ದಾರೆ. ಇದನ್ನು ಸಹಿಸಲಾಗದ ಕೆಲವು ಸಂಘ–ಸಂಸ್ಥೆಗಳು ಹಾಗೂ ವಿಪಕ್ಷಗಳು ಚುನಾವಣಾ ಅಕ್ರಮದಂತಹ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿರುವುದು ಖಂಡನೀಯ," ಎಂದು ಪ್ರವೀಣ್ ಕುಮಾರ್ ಹೇಳಿದರು.

ವಿರೋಧ ಪಕ್ಷದ ಈ ಹಿಂದಿನ ಆಡಳಿತ ವೈಖರಿಯನ್ನು ನೆನಪಿಸಿದ ಅವರು, "ತಾಲ್ಲೂಕಿನಲ್ಲಿ ಹಿಂದೆ ಆಡಳಿತ ನಡೆಸಿದವರು ರಾಜಕೀಯ ದಬ್ಬಾಳಿಕೆ, ಗೂಂಡಾಗಿರಿ ಮತ್ತು ದೌರ್ಜನ್ಯಗಳ ಮೂಲಕ ಜನರನ್ನು ಬೆದರಿಸುತ್ತಿದ್ದರು. ಮತಗಟ್ಟೆಗಳಿಗೆ ನುಗ್ಗಿ ಮತ ಕಸಿದುಕೊಂಡ ಇತಿಹಾಸ ಅವರದ್ದಾಗಿದೆ. ಅಕ್ರಮವನ್ನು ತಡೆಯಲು ಹೋದ ಕಾಂಗ್ರೆಸ್ ಮುಖಂಡರು ಹಾಗೂ ರೈತ ಮುಖಂಡರ ಮೇಲೆ ಹಲ್ಲೆ ನಡೆಸಿದವರು ಯಾರು ಎಂಬುದು ಜನತೆಗೆ ತಿಳಿದಿದೆ," ಎಂದು ತಿರುಗೇಟು ನೀಡಿದರು.

ಮುಂಬರುವ ಚುನಾವಣೆಯಲ್ಲಿಯೂ ಡಾ. ರಂಗನಾಥ್ ಅವರೇ ಗೆಲ್ಲುತ್ತಾರೆಂಬ ಭೀತಿ ವಿರೋಧ ಪಕ್ಷದವರನ್ನು ಕಾಡುತ್ತಿದೆ. ಆ ಹತಾಶೆಯಿಂದಲೇ ಶಾಸಕರಿಗೆ ಕೆಟ್ಟ ಹೆಸರು ತರುವ ದುರುದ್ದೇಶದಿಂದ ಅಪಪ್ರಚಾರದಲ್ಲಿ ತೊಡಗಿದ್ದಾರೆ. ಆದರೆ, ಕ್ಷೇತ್ರದ ಜನತೆ ಇಂತಹ ಸುಳ್ಳು ಹೇಳಿಕೆಗಳಿಗೆ ಕಿವಿಗೊಡುವುದಿಲ್ಲ ಮತ್ತು ಮುಂದಿನ ದಿನಗಳಲ್ಲಿ ತಕ್ಕ ಉತ್ತರ ನೀಡಲಿದ್ದಾರೆ ಎಂದು ಪ್ರವೀಣ್ ಕುಮಾರ್ ಎಚ್ಚರಿಸಿದ್ದಾರೆ.

# ಸರ್ಕಾರಿ ಜಮೀನು ಉಳಿಸಲು ಗ್ರಾಮಸ್ಥರ ಪಣ: 31ರೊಳಗೆ ತನಿಖೆಯಾಗದಿದ್ದರೆ ಡಿಸಿ ಕಚೇರಿಗೆ ಮುತ್ತಿಗೆ

ದೇವನಹಳ್ಳಿ

"ತಾಲೂಕಿನ ಅಣ್ಣೇಶ್ವರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಕ್ಲೇನಹಳ್ಳಿ–ಮಲ್ಲೇನಹಳ್ಳಿ ಜೋಡಿ ಗ್ರಾಮದ ಸರ್ವೆ ನಂ. 37ರಲ್ಲಿನ 6 ಎಕರೆ 18 ಗುಂಟೆ ಸರ್ಕಾರಿ ಜಮೀನನ್ನು ವಿಧಾನ ಪರಿಷತ್ ಸದಸ್ಯ ಎಂ.ಆರ್. ಸೀತಾರಾಮ್ ಕುಟುಂಬದವರು ಕಬಳಿಕೆ ಮಾಡಿದ್ದಾರೆ," ಎಂದು ಕೆಆರ್‌ಎಸ್ ಪಕ್ಷದ ಯುವ ಘಟಕದ ರಾಜ್ಯ ಅಧ್ಯಕ್ಷ ನಿಖಿಲ್ ಎಂ. ಗಂಭೀರ ಆರೋಪ ಮಾಡಿದ್ದಾರೆ.

ದೇವನಹಳ್ಳಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಭೂಮಿಯನ್ನು ಕೂಡಲೇ ಸರ್ಕಾರದ ವಶಕ್ಕೆ ಪಡೆಯಬೇಕು ಎಂದು ಒತ್ತಾಯಿಸಿದರು.

**ಭೂ ಮಾಫಿಯಾಗೆ ಸರ್ಕಾರದ ಕುಮ್ಮಕ್ಕು?**

"ಸಾವಿರಾರು ಎಕರೆ ಸರ್ಕಾರಿ ಭೂಮಿಯನ್ನು ಈಗಾಗಲೇ ಕಬಳಿಸಿರುವ ಒಂದೇ ಕುಟುಂಬಕ್ಕೆ ಪುನಃ 6 ಎಕರೆ 18 ಗುಂಟೆ ಜಮೀನು ಮಂಜೂರು ಮಾಡಲು ಸರ್ಕಾರ ಮುಂದಾಗಿರುವುದು ಭೂ ಮಾಫಿಯಾಗೆ ಕುಮ್ಮಕ್ಕು ನೀಡಿದಂತಿದೆ. ಜಿಲ್ಲಾಧಿಕಾರಿಗಳ ಭವನದ ಮುಂದೆ ಗ್ರಾಮಸ್ಥರು ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಇದೇ ಮಾರ್ಚ್ 31ರ ಒಳಗಾಗಿ ಒತ್ತುವರಿ ತೆರವುಗೊಳಿಸದಿದ್ದರೆ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲಾಗುವುದು," ಎಂದು ನಿಖಿಲ್ ಎಚ್ಚರಿಸಿದರು.

ಹಿರಿಯ ವಕೀಲ ಸಿದ್ಧಾರ್ಥ್ ಮಾತನಾಡಿ, "ಇಂದಿನ ಶಾಸಕಾಂಗ ಮತ್ತು ಕಾರ್ಯಾಂಗ ಕೇವಲ ಬಲಾಢ್ಯರ ಪರವಾಗಿ ಕೆಲಸ ಮಾಡುತ್ತಿವೆ. ನೂರಾರು ವರ್ಷಗಳಿಂದ ವಾಸವಿದ್ದ ಬಡ ನಿವಾಸಿಗಳನ್ನು ಒಕ್ಕಲೆಬ್ಬಿಸಿ, ಸಾವಿರಾರು ಕೋಟಿ ರೂ. ಆಸ್ತಿ ಹೊಂದಿರುವವರಿಗೆ ಮತ್ತೆ ಭೂಮಿ ಮಂಜೂರು ಮಾಡುವುದು ಅಧಿಕಾರ ದುರುಪಯೋಗಕ್ಕೆ ಸಾಕ್ಷಿ. ಹೈಕೋರ್ಟ್ ನಿರ್ದೇಶನವಿದ್ದರೂ ಅಧಿಕಾರಿಗಳು ಒತ್ತುವರಿ ತೆರವುಗೊಳಿಸಲು ಧೈರ್ಯ ತೋರುತ್ತಿಲ್ಲ," ಎಂದು ಆಕ್ರೋಶ ವ್ಯಕ್ತಪಡಿಸಿದರು. ಭೂಮಿ ಕಬಳಿಕೆ ಮಾತ್ರವಲ್ಲದೆ, ಸ್ಥಳೀಯ ಗ್ರಾಮಸ್ಥರಿಗೆ ಕಿರುಕುಳ ಮತ್ತು ದೌರ್ಜನ್ಯ ಎಸಗಲಾಗುತ್ತಿದೆ ಎಂದು ಪ್ರತಿಭಟನಾಕಾರರು ದೂರಿದ್ದಾರೆ. ಈ 6 ಎಕರೆ 18 ಗುಂಟೆ ಜಮೀನು ಸಂಪೂರ್ಣವಾಗಿ ಗ್ರಾಮಸ್ಥರ ಬಳಕೆಗೆ ಮೀಸಲಿಡಬೇಕು ಮತ್ತು ಅಧಿಕಾರಿಗಳು ತಕ್ಷಣ ಸ್ಥಳ ಪರಿಶೀಲನೆ ನಡೆಸಬೇಕು ಎಂದು ಅವರು ಆಗ್ರಹಿಸಿದರು. ಗೋಷ್ಠಿಯಲ್ಲಿ ಕೆಆರ್‌ಎಸ್ ಪಕ್ಷದ ಅಧ್ಯಕ್ಷ ವೆಂಕಟೇಶ್ ಮೂರ್ತಿ, ಜಿಲ್ಲಾ ಕಾರ್ಯದರ್ಶಿ ಸುಬ್ರಮಣಿ, ಅಂಬೇಡ್ಕರ್ ಸೇನೆಯ ತಾಲೂಕು ಅಧ್ಯಕ್ಷ ರಾಯಸಂದ್ರ ಸೋಮಶೇಖರ್, ಹಿರಿಯ ಹೋರಾಟಗಾರರಾದ ನಾಗರಾಜ್, ಕೃಷ್ಣಪ್ಪ, ಗ್ರಾಮಸ್ಥರು ಉಪಸ್ಥಿತರಿದ್ದರು.



27/03/2026
ಭಾರತ ಸಾರಥಿ
BHARATHA SARATHI KANNADA DAILY NEWS PAPER
ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

# ಕೈ ಸರ್ಕಾರದ ಅಸಡ್ಡೆಯಿಂದಾಗಿ ಆಂಧ್ರದಲ್ಲಿ ಕೈಗಾರಿಕೆಗಳ ಸ್ಥಾಪನೆ

ಬೆಂಗಳೂರು

ಬಳ್ಳಾರಿ ಜಿಲ್ಲೆಯಲ್ಲಿ ಉಕ್ಕು ಕಾರ್ಖಾನೆ ಸ್ಥಾಪಿಸಲು ಶ್ರೀ ಲಕ್ಷ್ಮಿ ಮಿತ್ತಲ್ ಒಡೆತನದ ಆರ್ಸೆಲರ್ ಮಿತ್ತಲ್ ಕಂಪನಿಗೆ 5 ಸಾವಿರ ಎಕರೆ ಭೂಮಿ ನೀಡಲಾಗಿತ್ತು. ಆದರೆ ನಂತರ ಬಂದ ಕಾಂಗ್ರೆಸ್ ಸರ್ಕಾರವು ಕಾಲಮಿತಿಯಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳದೇ ಇರುವುದರಿಂದ ಅವರು ನಿನ್ನೆಯಷ್ಟೇ ಆಂಧ್ರಪ್ರದೇಶದ ವಿಶಾಖಪಟ್ಟಣದಲ್ಲಿ ತಮ್ಮ ಬೃಹತ್ ಉಕ್ಕು ಕಾರ್ಖಾನೆಯನ್ನು ಸ್ಥಾಪಿಸಲು ಶಂಕುಸ್ಥಾಪನೆ



ನೆರವೇರಿಸಿದ್ದಾರೆ ಎಂದು ಶಾಸಕರಾದ ಜಿ.ಜನಾರ್ಧನ ರೆಡ್ಡಿ ಅವರು ವಿಧಾನಸಭೆಯಲ್ಲಿ ಪ್ರಸ್ತಾಪಿಸಿದರು. ಯಲಬುರ್ಗಾ ಕ್ಷೇತ್ರದ ಶಾಸಕರು ಹಾಗೂ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರಾದ ಬಸವರಾಜ ರಾಯರೆಡ್ಡಿಯವರು ಕರ್ನಾಟಕವನ್ನು 'ಹೂಡಿಕೆದಾರರ ಸ್ನೇಹಿ ರಾಜ್ಯ' ಎಂದು ಬಣ್ಣಿಸಿದ್ದಾರೆ. ಆದರೆ ವಾಸ್ತವ ಏನೆಂದರೆ, ಈ ಹಿಂದೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದ ವೇಳೆ ನಮ್ಮ ಸರ್ಕಾರವು ಬಳ್ಳಾರಿ ಜಿಲ್ಲೆಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಉದ್ಯಮಿಗಳಿಗೆ ಅವಕಾಶಗಳನ್ನು ಒದಗಿತ್ತು. ಈಗ ಕೈಗಾರಿಕೋದ್ಯಮಿಗಳು ನೆರೆರಾಜ್ಯಗಳಿಗೆ ವಲಸೆ ಹೋಗುತ್ತಿರುವುದನ್ನು ಗಮನಿಸಿದರೆ, ಕರ್ನಾಟಕ ಯಾವ ರೀತಿ ಹೂಡಿಕೆದಾರರ ಸ್ನೇಹಿಯಾಗಿದೆ ಹಾಗೂ 5 ಸಾವಿರ ಕೋಟಿ ಹೂಡಿಕೆಯ ಕಂಪನಿ ಕರ್ನಾಟಕ ಬಿಟ್ಟು ಹೋಗಿದ್ದು ಕಾಂಗ್ರೆಸ್ ಸರ್ಕಾರ ತಲೆತಗ್ಗಿಸುವಂಥ ವಿಷಯವಾಗಿದೆ ಎಂದರು.



ಕನಕಪುರದ ಕೋಟೆ ಗಣಪತಿ ದೇವಾಲಯದಲ್ಲ ಗ್ರಾಮಾಂತರ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಅಧ್ಯಕ್ಷೆ ಮಮತಾ, ಉಪಾಧ್ಯಕ್ಷೆ ವಿಜಯಲಕ್ಷ್ಮಿ, ಅಲ್ಪಸಂಖ್ಯಾತ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯೆ ಖಾಸಿಮ್ ಖಾನ್, ದಿಶಾ ಸಮಿತಿ ಸದಸ್ಯೆ ಶೋಭಾ ನೇತೃತ್ವದಲ್ಲಿ ನೆಡೆಯಿತು.

# ವಿದ್ಯಾರ್ಥಿಗಳಿಂದ ಶಕ್ತಿ ಸೌಧ ದರ್ಶನ



ಮಧುಗಿರಿ

ತಾಲೂಕಿನ ಕಾಲೇಜು ವಿದ್ಯಾರ್ಥಿಗಳು ಬೆಂಗಳೂರಿನ ಶಕ್ತಿ ಸೌಧಕ್ಕೆ ಭೇಟಿ ನೀಡಿ, ವಿಧಾನಸೌಧದ ಉಭಯ ಸದನಗಳ ಕಾರ್ಯಕಲಾಪಗಳನ್ನು ಕಣ್ಣಾರೆ ವೀಕ್ಷಿಸುವ ಮೂಲಕ ಪ್ರಜಾಪ್ರಭುತ್ವದ ಸಂಸದೀಯ ವ್ಯವಸ್ಥೆಯ ಬಗ್ಗೆ ಪ್ರಾಯೋಗಿಕ ಜ್ಞಾನ ಪಡೆದರು.


ಅಧ್ಯಾಪಕರು ಹಾಗೂ ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರೊಡಗೂಡಿ ಭೇಟಿ ನೀಡಿದ್ದ ವಿದ್ಯಾರ್ಥಿಗಳು, ಆಡಳಿತ ಮತ್ತು ವಿರೋಧ ಪಕ್ಷಗಳ ನಡುವಿನ ಚರ್ಚೆ, ಮಸೂದೆಗಳ ಅಂಗೀಕಾರದ ಪ್ರಕ್ರಿಯೆ ಹಾಗೂ ಶಾಸಕರ ಕಾರ್ಯವೈಖರಿಯನ್ನು ಹತ್ತಿರದಿಂದ ಅವಲೋಕಿಸಿದರು.

ಈ ಸಂದರ್ಭದಲ್ಲಿ ಮಧುಗಿರಿ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ನಿಕಟಪೂರ್ವ ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ವಿದ್ಯಾರ್ಥಿಗಳಿಗೆ ಕಲಾಪ ವೀಕ್ಷಿಸಲು ವಿಶೇಷ ಅನುವು ಮಾಡಿಕೊಟ್ಟ ಅವರು, "ಇಂತಹ ಭೇಟಿಗಳು ವಿದ್ಯಾರ್ಥಿಗಳ ಜ್ಞಾನದ ವಿಕಾಸಕ್ಕೆ ಹಾಗೂ ಸಂಸದೀಯ ವ್ಯವಸ್ಥೆಯ ತಿಳುವಳಿಕೆಗೆ ಅತ್ಯಂತ ಫಲದಾಯಕ. ಇಂದಿನ ವಿದ್ಯಾರ್ಥಿಗಳು ದೇಶದ ಭವಿಷ್ಯವಾಗಿದ್ದು, ಇಂತಹ ಸಭೆಗಳಿಗೆ ಹಾಜರಾಗುವುದು ಕಲಿಕೆಗೆ ಪೂರಕವಾಗಲಿದೆ," ಎಂದು ಶುಭ ಹಾರೈಸಿದರು. ಅಲ್ಲದೆ, ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಸಲುವಾಗಿ ಉಚಿತವಾಗಿ ಗುಣಮಟ್ಟದ ಫೈಲ್‌ಗಳನ್ನು ವಿತರಿಸಿದರು.

ವಿದ್ಯಾರ್ಥಿಗಳು ವಿಧಾನಸೌಧದ ವಾಸ್ತುಶಿಲ್ಪ ಹಾಗೂ ಸದನದ ಗಂಭೀರತೆಯನ್ನು ಕಂಡು ಸಂತಸ ವ್ಯಕ್ತಪಡಿಸಿದರು. ರಾಜ್ಯಶಾಸ್ತ್ರ ವಿಷಯದ ಪ್ರಾಯೋಗಿಕ ಕಲಿಕೆಯ ಭಾಗವಾಗಿ ಈ ಭೇಟಿಯು ವಿದ್ಯಾರ್ಥಿಗಳಿಗೆ ಸಂಸದೀಯ ಪ್ರಕ್ರಿಯೆಗಳ ಬಗ್ಗೆ ಸ್ಪಷ್ಟ ಚಿತ್ರಣ ನೀಡಿತು.

ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರಾದ ಎಸ್.ಎನ್. ರಾಜು, ಭೀಮರಾಜು, ಮಂಜುನಾಥ್ ಪಿ.ಎಲ್., ಆದಿನಾರಾಯಣ, ಮೆಹಬೂಬ್ ಷರೀಫ್, ಜಿಲ್ಲಾ ನೌಕರರ ಸಂಘದ ಕಾರ್ಯದರ್ಶಿ ನಟರಾಜು, ಕಾಲೇಜಿನ ಪ್ರಾಂಶುಪಾಲ ಪ್ರೊ. ಕೆ.ಸಿ. ಬಸವರಾಜು, ನಿಕಟಪೂರ್ವ ಪ್ರಾಂಶುಪಾಲ ಡಾ. ನಾಗಭೂಷಣ್, ಐಕ್ಯೂಎಸಿ ಸಂಚಾಲಕಿ ಡಾ. ಎಲ್. ಮಂಜು ಭಾರ್ಗವಿ, ಡಾ. ವಿನುತ, ಪ್ರೊ. ಪುಟ್ಟರಾಜು, ಪ್ರೊ. ರಜನಿ ಜಿ.ಸಿ., ಪ್ರೊ. ಚಂದನ, ರಾಜ್ಯಶಾಸ್ತ್ರ ಉಪನ್ಯಾಸಕ ರಾಮಚಂದ್ರಯ್ಯ, ತಿಪ್ಪೇಸ್ವಾಮಿ ಹಾಗೂ ವಿದ್ಯಾರ್ಥಿಗಳು ಈ ವಿಶೇಷ ಕ್ಷಣಕ್ಕೆ ಸಾಕ್ಷಿಯಾದರು.

# 27ಕ್ಕೆ ಶಕ್ತಿ ಪ್ರದರ್ಶನ ಹಾಗೂ ಸಾಂಸ್ಕೃತಿಕ ವೈಭವ



ಕನಕಪುರ

"ರೂರಲ್ ಎಜುಕೇಶನ್ ಸೊಸೈಟಿಯ ಸಂಸ್ಥಾಪಕರು ಹಾಗೂ 'ಕನಕಪುರ ಗಾಂಧಿ' ಎಂದೇ ಜನಮಾನಸದಲ್ಲಿ ಅಮರರಾಗಿರುವ ಪೂಜ್ಯ ಶ್ರೀ ಎಸ್. ಕರಿಯಪ್ಪನವರ 126ನೇ ಜನ್ಮ ದಿನಾಚರಣೆಯನ್ನು ಇದೇ 27ರ ಶ್ರೀರಾಮನವಮಿಯಂದು ಅತ್ಯಂತ ಭವ್ಯವಾಗಿ ಆಚರಿಸಲಾಗುವುದು," ಎಂದು ಸಂಸ್ಥೆಯ ಅಧ್ಯಕ್ಷ ಹೆಚ್. ಕೆ. ಶ್ರೀಕಂಠು ತಿಳಿಸಿದರು.

ನಗರದ ಸಂಸ್ಥೆಯ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವರ್ಷದ ಜಯಂತಿಯ ವಿಶೇಷತೆ ಹಾಗೂ ಕಾರ್ಯಕ್ರಮಗಳ ರೂಪುರೇಷೆಗಳ ಬಗ್ಗೆ ಮಾಹಿತಿ ನೀಡಿದರು.

ಇದೇ 27, ಶುಕ್ರವಾರ ಬೆಳಿಗ್ಗೆ 8ಗಂಟೆಗೆ ಸಂಸ್ಥೆಯ ಆವರಣದಿಂದ ಮೆರವಣಿಗೆ ಆರಂಭವಾಗಲಿದೆ. ಶಿಶುವಿಹಾರದಿಂದ ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ಸುಮಾರು 1,500 ವಿದ್ಯಾರ್ಥಿಗಳು, ಹಳೆಯ ವಿದ್ಯಾರ್ಥಿಗಳು ಹಾಗೂ ವಿವಿಧ ಸಂಘ–ಸಂಸ್ಥೆಗಳ ಮುಖಂಡರು ಭಾಗವಹಿಸಲಿದ್ದಾರೆ. ವಿವಿಧ ಜಾನಪದ ಕಲಾತಂಡಗಳೊಂದಿಗೆ ಪೂಜ್ಯ ಕರಿಯಪ್ಪನವರ ಭಾವಚಿತ್ರವನ್ನು ಭವ್ಯ ಸಾರೋಟಿನಲ್ಲಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಗುವುದು ಎಂದು ಅವರು ವಿವರಿಸಿದರು.

ಪೂಜ್ಯ ಕರಿಯಪ್ಪನವರ ತತ್ವ ಆದರ್ಶಗಳನ್ನು ಇಂದಿನ ಪೀಳಿಗೆಗೆ ತಲುಪಿಸುವ ಉದ್ದೇಶದಿಂದ ಅವರ ಜೀವನದ ಕುರಿತಾದ ಸಾಕ್ಷ್ಯಚಿತ್ರವನ್ನು ಬಿಡುಗಡೆಗೊಳಿಸಿ, ಯೂಟ್ಯೂಬ್ ಮೂಲಕ ಪ್ರಚಾರ ಪಡಿಸಲಾಗುವುದು. ಕಾರ್ಯಕ್ರಮವನ್ನು ಹಿರಿಯ ಮುಖಂಡ ಹಾಗೂ ಮಾಜಿ ಸಚಿವ ಪಿ.ಜಿ.ಆರ್. ಸಿಂಧ್ಯಾ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಸುವರ್ಣಮುಖಿ ಸಂಸ್ಕೃತಿ ಧಾಮದ ಸಂಸ್ಥಾಪಕ ಆಚಾರ್ಯ ಡಾ. ಎಂ. ನಾಗರಾಜು ಪಾಲ್ಗೊಳ್ಳಲಿದ್ದಾರೆ.

ಇದೇ ಸಂದರ್ಭದಲ್ಲಿ ಬೆಂಗಳೂರಿನ ಟ್ರಾನ್ಸ್ ಗ್ಲೋಬಲ್ ಪವರ್ ಲಿಮಿಟೆಡ್ ಸಂಸ್ಥೆಯ ಸಿಎಸ್‌ಆರ್ ನಿಧಿಯಡಿ ಸುಮಾರು 29.50 ಲಕ್ಷ ರೂ. ವೆಚ್ಚದಲ್ಲಿ ಒದಗಿಸಲಾಗಿರುವ 245 ಡೆಸ್ಕ್‌ಗಳು, 15 ಕಂಪ್ಯೂಟರ್‌ಗಳು ಹಾಗೂ ಇಂಟರ್ನೆಟ್ ಬೋರ್ಡ್‌ಗಳನ್ನು ವಿದ್ಯಾರ್ಥಿಗಳ ಬಳಕೆಗಾಗಿ ಲೋಕಾರ್ಪಣೆ ಮಾಡಲಾಗುವುದು ಎಂದು ಶ್ರೀಕಂಠು ತಿಳಿಸಿದರು.

ಗೋಷ್ಠಿಯಲ್ಲಿ ಸಂಸ್ಥೆಯ ಕಾರ್ಯದರ್ಶಿ ಪುಟ್ಟಸ್ವಾಮಿ, ಖಜಾಂಚಿ ಮಂಜುನಾಥ್, ಪದವಿ ಕಾಲೇಜು ಪ್ರಾಂಶುಪಾಲ ಅಪ್ಪಾಜಿ, ಉಪನ್ಯಾಸಕ ಮೋಹನ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

# ಸಮಪಾಲು-ಸಮಬಾಳು ನೀತಿ ಅನುಸರಿಸಿ: ಉದ್ಯೋಗ ನೇಮಕಾತಿಯಲ್ಲಿ ಒಳಮೀಸಲಾತಿಗೆ ಆಗ್ರಹ

ಚಿಕ್ಕಬಳ್ಳಾಪುರ

ಉದ್ಯೋಗ ನೇಮಕಾತಿ, ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಹಾಗೂ ಮುಂಬಡ್ತಿ ಸೇರಿದಂತೆ ಎಲ್ಲಾ ಹಂತಗಳಲ್ಲಿಯೂ ತಕ್ಷಣವೇ ಒಳಮೀಸಲಾತಿ ಕಲ್ಪಿಸಬೇಕು ಎಂದು ಆಗ್ರಹಿಸಿ ಮಾದಿಗ ಸಂಘಟನೆಗಳ ಒಕ್ಕೂಟದ ಜಿಲ್ಲಾ ಶಾಖೆಯ ವತಿಯಿಂದ ಜಿಲ್ಲಾಡಳಿತ ಭವನದ ಆವರಣದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಡಾ. ಬಿ.ಆರ್. ಅಂಬೇಡ್ಕರ್ ಸೇನೆ (ಮಹಾನಾಯಕ) ರಾಜ್ಯಾಧ್ಯಕ್ಷ ಡಿ.ವಿ. ನಾರಾಯಣಸ್ವಾಮಿ, "ಸಹಸ್ರಾರು ವರ್ಷಗಳಿಂದ ಕೀಳು ವೃತ್ತಿಗಳಲ್ಲಿ ತೊಡಗಿಸಿಕೊಂಡು ದಯನೀಯ



ಸ್ಥಿತಿಯಲ್ಲಿರುವ ಮಾದಿಗ ಸಮುದಾಯಕ್ಕೆ ಜನಸಂಖ್ಯೆಗನುಗುಣವಾಗಿ ಉದ್ಯೋಗ ದೊರೆಯಬೇಕು. ಸರ್ಕಾರವು ತಾಂತ್ರಿಕ ಅಡಚಣೆಯ ನೆಪ ಹೇಳುತ್ತಿರುವುದು ಸಮುದಾಯವನ್ನು ವಂಚಿಸುವ ರಾಜಕೀಯ ಹುನ್ನಾರವಾಗಿದೆ," ಎಂದು ಕಿಡಿಕಾರಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಘಟನಾ ಸಂಚಾಲಕ ಬಾಲಕುಂಠಹಳ್ಳಿ ಗಂಗಾಧರಪ್ಪ ಮಾತನಾಡಿ, "ಸುಪ್ರೀಂ ಕೋರ್ಟ್ ತೀರ್ಪಿನಂತೆ ಒಳಮೀಸಲಾತಿ ಜಾರಿಗೊಳಿಸಲು ಸರ್ಕಾರ ನಿರ್ಧಾರ ತೆಗೆದುಕೊಳ್ಳಬೇಕು. ಕಳೆದ 35 ವರ್ಷಗಳಿಂದ ನಿರಂತರ ಹೋರಾಟ ನಡೆಸುತ್ತಿದ್ದರೂ ಯಾವುದೇ ಪ್ರಯೋಜನವಾಗದಿರುವುದು ಅತ್ಯಂತ ನೋವಿನ ಸಂಗತಿ," ಎಂದು ಬೇಸರ ವ್ಯಕ್ತಪಡಿಸಿದರು.

ಮಾದಿಗ ದಂಡೋರ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ವಿ. ರಾಮಪ್ಪ ಮಾತನಾಡಿ, "ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಮುಂದಿನ ದಿನಗಳಲ್ಲಿ 50ಕ್ಕೂ ಹೆಚ್ಚು ಮಾದಿಗ ಮತ್ತು ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳ ನಿವಾಸಕ್ಕೆ ಮುತ್ತಿಗೆ ಹಾಕಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು," ಎಂದು ಎಚ್ಚರಿಸಿದರು.

ಈ ಸಮಾರಂಭದಲ್ಲಿ ಮಾದರ ಮಹಾಸಭಾ ಜಿಲ್ಲಾಧ್ಯಕ್ಷ ಕೃಷ್ಣಪ್ಪ, ಬುಡುಗ ಜಂಗಮ ಅಲೆಮಾರಿ ಸಂಘದ ಜಿಲ್ಲಾಧ್ಯಕ್ಷ ಆರ್. ರಾಮಾಂಜಿನಪ್ಪ, ಜಂಬೂದ್ವೀಪ ಜನಸೇನಾ ಸಂಚಾಲಕ ರಮಣ್ ಅಕೇಶ್, ನಗರಸಭೆ ಮಾಜಿ ಸದಸ್ಯ ಜಿ. ಮುನಿಕೃಷ್ಣ (ಬಂಕ್), ಮಾದಿಗ ದಂಡೋರ ಜಿಲ್ಲಾಧ್ಯಕ್ಷ ರಾಮಕೃಷ್ಣಪ್ಪ ಸೇರಿದಂತೆ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

# ಗೋ ಸಾಗಾಣಿಕೆ ವಿವಾದ: ಮುಸ್ಲಿಂ ಸಮುದಾಯದಿಂದ ಸ್ಪಷ್ಟನೆ

ತಿಪಟೂರು

"ನಗರದ ಹೊರವಲಯದಲ್ಲಿ ಇತ್ತೀಚೆಗೆ ನಡೆದ ಗೋ ಸಾಗಾಣಿಕೆದಾರರು ಹಾಗೂ ಸಂಘಟನೆಗಳ ಕಾರ್ಯಕರ್ತರ ನಡುವಿನ ಗಲಾಟೆಗೂ ಮುಸ್ಲಿಂ ಸಮುದಾಯಕ್ಕೂ ಯಾವುದೇ ಸಂಬಂಧವಿಲ್ಲ. ಕಿಡಿಗೇಡಿಗಳ ಕೃತ್ಯದಿಂದ ಕಲ್ಪತರು ನಾಡಿನ ಸೌಹಾರ್ದತೆ ಹಾಳಾಗಬಾರದು," ಎಂದು ಮುಸ್ಲಿಂ ಸಮುದಾಯದ ಮುಖಂಡರು ಸ್ಪಷ್ಟಪಡಿಸಿದ್ದಾರೆ.


ನಗರದ ಮದೀನಾ ಮಸೀದಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮುಖಂಡರು, ಘಟನೆಯ ಬಗ್ಗೆ ವಿಷಾದ ವ್ಯಕ್ತಪಡಿಸಿದರಲ್ಲದೆ, ಅನಗತ್ಯವಾಗಿ ಸಮುದಾಯವನ್ನು ಗುರಿಯಾಗಿಸಿಕೊಂಡು ಅಪಪ್ರಚಾರ ಮಾಡುವುದನ್ನು ಖಂಡಿಸಿದರು.

ಸಮುದಾಯದ ಮುಖಂಡ ಮಹಮ್ಮದ್ ದಸ್ತಗೀರ್ ಮಾತನಾಡಿ, "ರಂಜಾನ್ ದಿನದಂದು ನಡೆದ ಹಲ್ಲೆ ಘಟನೆ ದುರದೃಷ್ಟಕರ. ತಿಪಟೂರಿನಲ್ಲಿ ಹಿಂದೂ–ಮುಸ್ಲಿಮರು ಅಣ್ಣತಮ್ಮಂದಿರಂತೆ ಬದುಕುತ್ತಿದ್ದಾರೆ. ದನದ ವ್ಯಾಪಾರಿಗಳು ಮತ್ತು ಸಂಘಟನೆಗಳ ನಡುವೆ ನಡೆದ ವೈಯಕ್ತಿಕ ಗಲಾಟೆಗೆ ಇಡೀ ಸಮುದಾಯವನ್ನು ಹೊಣೆ ಮಾಡುವುದು ಸರಿಯಲ್ಲ. ಯಾರೇ ತಪ್ಪು ಮಾಡಿದ್ದರೂ ಪೊಲೀಸ್ ಇಲಾಖೆ ಕಠಿಣ ಕಾನೂನು ಕ್ರಮ ಕೈಗೊಳ್ಳಲಿ, ಅದಕ್ಕೆ ನಮ್ಮ ಸಂಪೂರ್ಣ ಸಹಕಾರವಿದೆ," ಎಂದರು.

ಬಿಲಾಲ್ ಮಸೀದಿ ಮುತ್ತುವಲ್ಲಿ ಶಫಿವುಲ್ಲಾ ಶರೀಫ್ ಮಾತನಾಡಿ, "ದೇಶದ ಕಾನೂನು ಸುವ್ಯವಸ್ಥೆಯ ಮೇಲೆ ನಮಗೆ ಅಪಾರ ಗೌರವವಿದೆ. ಮಾರ್ಚ್ 18ರಂದು ನಡೆದ ಘಟನೆಯು ಕೇವಲ ದನ ವ್ಯಾಪಾರಿಗಳು ಮತ್ತು ಕೆಲವು ಸಂಘಟನೆಗಳ ಕಾರ್ಯಕರ್ತರ ನಡುವಿನ ಘರ್ಷಣೆಯಾಗಿದೆ. ಶಾಂತಿ ಕದಡುವ ಯಾವುದೇ ಕೃತ್ಯವನ್ನು ನಾವು ಬೆಂಬಲಿಸುವುದಿಲ್ಲ. ಸಮಾಜದಲ್ಲಿ ಶಾಂತಿ–ಸೌಹಾರ್ದತೆ ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ," ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಾಬು ಸಾಬ್, ರಹಮತುಲ್ಲಾ, ಅಸ್ಲಾಂ ಪಾಷಾ, ಬ್ಲಾಕ್ ಕಾಂಗ್ರೆಸ್ ಮೈನಾರಿಟಿ ಅಧ್ಯಕ್ಷ ಅಲ್ಲಾಭಕಾಶ್ ಸೇರಿದಂತೆ ಸಮುದಾಯದ ಹಲವು ಪ್ರಮುಖರು ಉಪಸ್ಥಿತರಿದ್ದರು.

# ತುಟ್ಟಿಭತ್ಯೆಗಾಗಿ ಹಕ್ಕೊತ್ತಾಯ!



ಕೋಲಾರ

"ಪಿಂಚಣಿಯು ನಿವೃತ್ತ ಸರ್ಕಾರಿ ನೌಕರರು ಗೌರವಯುತವಾಗಿ ಬದುಕಲು ನೀಡುವ ಜೀವನ ಭತ್ಯೆಯಾಗಿದ್ದು, ಅದು ಸರ್ಕಾರದ ದಾನವಲ್ಲ. ಸುಪ್ರೀಂ ಕೋರ್ಟ್‌ನ ಐತಿಹಾಸಿಕ ತೀರ್ಪಿನ ಅನ್ವಯ ನಿವೃತ್ತರಿಗೆ ತುಟ್ಟಿಭತ್ಯೆ ಹಾಗೂ ವೇತನ ಆಯೋಗದ ಸೌಲಭ್ಯಗಳನ್ನು ನೀಡಲು ಸರ್ಕಾರಗಳು ಕೂಡಲೇ ಕ್ರಮ ಕೈಗೊಳ್ಳಬೇಕು," ಎಂದು ನಿವೃತ್ತ ಎ.ಎಸ್.ಐ ಕೆ.ಎನ್. ರವೀಂದ್ರನಾಥ್ ಆಗ್ರಹಿಸಿದ್ದಾರೆ.

ನಗರದ ಗೌರಿಪೇಟೆ ನಿವಾಸಿಯಾದ ರವೀಂದ್ರನಾಥ್ ಅವರು ಪ್ರಧಾನ ಮಂತ್ರಿಗಳು, ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರಿಗೆ ಈ ಕುರಿತು ವಿಶೇಷ ಮನವಿ ಸಲ್ಲಿಸಿದ್ದಾರೆ.

"1982ರ ಡಿಸೆಂಬರ್ 17ರಂದು ಸುಪ್ರೀಂ ಕೋರ್ಟ್‌ನ ಅಂದಿನ ಮುಖ್ಯ ನ್ಯಾಯಮೂರ್ತಿ ವೈ.ವಿ. ಚಂದ್ರಚೂಡ್ ನೇತೃತ್ವದ ಪಂಚಸದಸ್ಯ ಪೀಠವು ಪಿಂಚಣಿಯು ನೌಕರನ ಮೂಲಭೂತ ಹಕ್ಕು ಎಂದು ಸ್ಪಷ್ಟಪಡಿಸಿದೆ. ಇದನ್ನು ರದ್ದುಪಡಿಸುವ ಅಧಿಕಾರ ಯಾವುದೇ ಸರ್ಕಾರಕ್ಕಿಲ್ಲ ಎಂದು ತೀರ್ಪು ನೀಡಿದ್ದರೂ, ಪ್ರಸ್ತುತ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸದನದಲ್ಲಿ ನಿವೃತ್ತರ ಸೌಲಭ್ಯಗಳ ಕುರಿತು ವ್ಯತಿರಿಕ್ತವಾಗಿ ಚರ್ಚಿಸಿರುವುದು ನಿವೃತ್ತ ನೌಕರರಲ್ಲಿ ತೀವ್ರ ಬೇಸರ ತಂದಿದೆ," ಎಂದು ಅವರು ತಿಳಿಸಿದರು.

ಮಾರುಕಟ್ಟೆಯ ಬೆಲೆ ಏರಿಕೆಯ ಈ ಸಂದರ್ಭದಲ್ಲಿ ನಿವೃತ್ತ ನೌಕರರಿಗೆ ತುಟ್ಟಿಭತ್ಯೆ ಅತ್ಯಗತ್ಯವಾಗಿದೆ. ಸರ್ಕಾರವು ಸುಪ್ರೀಂ ಕೋರ್ಟ್ ಆದೇಶವನ್ನು ಪಾಲಿಸಬೇಕು ಮತ್ತು ನಿವೃತ್ತರ ಬೇಡಿಕೆಗಳನ್ನು ಈಡೇರಿಸುವ ಮೂಲಕ ಅವರ ಜೀವನ ಸಂಧ್ಯಾಕಾಲಕ್ಕೆ ಭದ್ರತೆ ನೀಡಬೇಕು ಎಂದು ರವೀಂದ್ರನಾಥ್ ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

# 5.15 ಲಕ್ಷ ರೂ. ಮೌಲ್ಯದ ಗಾಂಜಾ ಜಪ್ತಿ ಇಬ್ಬರು ಅಂತರರಾಜ್ಯ ಆರೋಪಿಗಳ ಬಂಧನ

ಕೆಜಿಎಫ್

ಕೆಜಿಎಫ್ ಪೊಲೀಸ್ ಜಿಲ್ಲೆಯ ಬಂಗಾರಪೇಟೆ ಠಾಣೆಯ ಪೊಲೀಸರು ಗಾಂಜಾ ಮಾರಾಟ ಜಾಲದ ಮೇಲೆ ಮಿಂಚಿನ ದಾಳಿ ನಡೆಸಿ, ಸುಮಾರು 5,15,000 ರೂ. ಮೌಲ್ಯದ 10 ಕೆಜಿ 320 ಗ್ರಾಂ ಗಾಂಜಾವನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಒಡಿಸ್ಸಾ ಹಾಗೂ ಮುಳಬಾಗಿಲು ಮೂಲದ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ.

ಬಂಗಾರಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯ ಹುಣಸನಹಳ್ಳಿ ಗ್ರಾಮದಿಂದ ಸೆಲಂ ಗುಡಿಸಲು ಕಡೆಗೆ ಹೋಗುವ ತಿರುವಿನ ಬಳಿ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಪೊಲೀಸರಿಗೆ ಖಚಿತ ಮಾಹಿತಿ ಲಭಿಸಿತ್ತು. ಈ ಮಾಹಿತಿಯನ್ನಾಧರಿಸಿ ಬಂಗಾರಪೇಟೆ ಇನ್ಸ್‌ಪೆಕ್ಟರ್ ರವಿಕುಮಾರ್ ಸಿ. ಮತ್ತು ತಂಡವು ತಕ್ಷಣವೇ ದಾಳಿ ನಡೆಸಿತು. ಬಂಧಿತರನ್ನು ಒಡಿಸ್ಸಾ ರಾಜ್ಯದ ಗಂಜಮ್ ಜಿಲ್ಲೆಯ ನಿವಾಸಿ ನಬೀನ್ ಕುಮಾರ್ ಬಾರೀಕ್ (42) ಮತ್ತು ಕೋಲಾರ ಜಿಲ್ಲೆಯ



ಮುಳಬಾಗಿಲು ತಾಲೂಕಿನ ನಿವಾಸಿ ಸಂದೀಪ್ (36) ಎಂದು ಗುರುತಿಸಲಾಗಿದೆ. ಆರೋಪಿಗಳಿಂದ ಒಟ್ಟು 10 ಕೆಜಿ 320 ಗ್ರಾಂ ಗಾಂಜಾ ವಶಪಡಿಸಿಕೊಳ್ಳಲಾಗಿದ್ದು, ಎನ್‌ಡಿಪಿಎಸ್ ಕಾಯ್ದೆಯಡಿ ಕಾನೂನು ಕ್ರಮ ಜರುಗಿಸಲಾಗಿದೆ. ಕೆಜಿಎಫ್ ಎಸ್‌ಪಿ ಶಿವಾಂಶು ರಜಪೂತ್ ಮತ್ತು ಡಿವೈಎಸ್‌ಪಿ ವಿ. ಲಕ್ಷ್ಮಯ್ಯ ಅವರ ಮಾರ್ಗದರ್ಶನದಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ ಪಿಐ ರವಿಕುಮಾರ್ ಸಿ., ಪಿಎಸ್‌ಐ ಪ್ರಕಾಶ್ ನರಸಿಂಗ್, ಎಎಸ್‌ಐ ರಮೇಶ್ ಹಾಗೂ ಸಿಬ್ಬಂದಿಗಳಾದ ಗೋಪಾಲ್, ಚಲಪತಿ, ಸುನೀಲ್, ಮಹೇಂದ್ರ ಕುಮಾರ್, ಮಂಜುನಾಥ್, ರಾಜೇಶ್ ಬಾಬು ಮತ್ತು ವಿಶ್ವನಾಥ್ ಪಾಲ್ಗೊಂಡಿದ್ದರು. ಯಶಸ್ವಿ ಕಾರ್ಯಾಚರಣೆ ನಡೆಸಿದ ಇಡೀ ತಂಡವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

# ಕೇಂದ್ರದ ವಿತ್ತ ಸಚಿವೆ ಹೇಳಿಕೆ ಖಂಡಿಸಿ ಮೌನ ಪ್ರತಿಭಟನೆ

ಚಿಂತಾಮಣಿ

"ನಿವೃತ್ತ ಸರ್ಕಾರಿ ನೌಕರರ ವೇತನ ಪರಿಷ್ಕರಣೆ ಮತ್ತು ತುಟ್ಟಿಭತ್ಯೆ ಕುರಿತಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ನೀಡಿರುವ ಹೇಳಿಕೆಯು ನಿವೃತ್ತರ ಹಿತಾಸಕ್ತಿಗೆ ವಿರುದ್ಧವಾಗಿದೆ," ಎಂದು ಆಕ್ರೋಶ ವ್ಯಕ್ತಪಡಿಸಿ ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಚಿಂತಾಮಣಿ ತಾಲೂಕು ಘಟಕದ ವತಿಯಿಂದ ಬುಧವಾರ ಬೃಹತ್ ಮೌನ ಪ್ರತಿಭಟನೆ ನಡೆಸಲಾಯಿತು.

ರಾಜ್ಯ ಸಂಘದ ಆದೇಶದಂತೆ ನಡೆದ ಈ ಪ್ರತಿಭಟನೆಯಲ್ಲಿ ನೂರಾರು ನಿವೃತ್ತ ನೌಕರರು ಭಾಗವಹಿಸಿ ತಮ್ಮ ಹಕ್ಕೊತ್ತಾಯ ಮಂಡಿಸಿದರು.

ನಗರದ ಫಿಲ್ಟರ್ ಬೆಡ್ ರಸ್ತೆಯಲ್ಲಿರುವ ಸರ್ಕಾರಿ ನೌಕರರ ಭವನದಿಂದ ಪ್ರತಿಭಟನೆ ಆರಂಭವಾಯಿತು. ನಿವೃತ್ತ ನೌಕರರು ತಮ್ಮ ಬಲಗೈಗೆ ಕಪ್ಪು ಪಟ್ಟಿ ಧರಿಸುವ ಮೂಲಕ ಸರ್ಕಾರದ ಧೋರಣೆಯ ವಿರುದ್ಧ ಮೌನವಾಗಿ ಪ್ರತಿಭಟಿಸಿದರು. ನೌಕರರ ಭವನದಿಂದ ಹೊರಟ ಮೆರವಣಿಗೆಯು ನಗರದ ಪ್ರಮುಖ ರಸ್ತೆಗಳ ಮೂಲಕ ತಾಲೂಕು ಕಚೇರಿಯನ್ನು ತಲುಪಿತು.

ತಾಲೂಕು ಕಚೇರಿ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು, ತಹಶೀಲ್ದಾರ್ ಸುದರ್ಶನ್ ಯಾದವ್ ಅವರಿಗೆ ಮನವಿ ಪತ್ರ ಸಲ್ಲಿಸಿದರು. "ಪಿಂಚಣಿದಾರರ ಸೌಲಭ್ಯಗಳ ಕುರಿತು ವ್ಯತಿರಿಕ್ತ ಹೇಳಿಕೆ ನೀಡಿರುವುದು ಸರಿಯಲ್ಲ. ನಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಈ ಮನವಿಯನ್ನು ಕೂಡಲೇ ಪ್ರಧಾನಮಂತ್ರಿಯವರಿಗೆ ತಲುಪಿಸಬೇಕು," ಎಂದು ಸಂಘದ ಪದಾಧಿಕಾರಿಗಳು ಕೋರಿದರು.

ಈ ವೇಳೆ ನಿವೃತ್ತ ಸರ್ಕಾರಿ ನೌಕರರ ಸಂಘದ ರಾಜ್ಯ ಕಾರ್ಯದರ್ಶಿ ಡಾ. ಹೆಚ್. ಮುನಿಯಪ್ಪ, ತಾಲೂಕು ಅಧ್ಯಕ್ಷ ನಾರಾಯಣಸ್ವಾಮಿ, ಗೌರವಾಧ್ಯಕ್ಷ ಚಂದ್ರಶೇಖರ್ ಬಾಬು, ಜಿಲ್ಲಾ ಉಪಾಧ್ಯಕ್ಷ ಎನ್. ಗೋಪಾಲರೆಡ್ಡಿ, ಕೆ.ವಿ. ಚೌಡಪ್ಪ, ತಾಲೂಕು ಉಪಾಧ್ಯಕ್ಷರಾದ ಎ.ಎಸ್. ರಾಮಚಂದ್ರಮೂರ್ತಿ, ಸಿ.ಎನ್. ವೆಂಕಟಾಚಲಪತಿ, ಕಾರ್ಯದರ್ಶಿ ಎಸ್. ಆಂಜಪ್ಪ ಹಾಗೂ ಜಿಲ್ಲಾ ಪ್ರತಿನಿಧಿ ಅಂಜನಾಚಾರಿ ಸೇರಿದಂತೆ ಸಮುದಾಯದ ನೂರಾರು ಹಿರಿಯ ನೌಕರರು ಪಾಲ್ಗೊಂಡಿದ್ದರು.

# 'ಜಯಂತಿಯ ಆಚರಣೆಗಳು ಯಾವುದೇ ಒಂದು ಸಮುದಾಯಕ್ಕೆ ಸೀಮಿತವಾಗದಿರಲಿ'

ದೇವನಹಳ್ಳಿ

"11ನೇ ಶತಮಾನದ ವಚನಕಾರ ದೇವರ ದಾಸಿಮಯ್ಯ ಅವರು ತಮ್ಮ ವಚನಗಳ ಮೂಲಕ ಸಮಾಜದ ಮೌಢ್ಯತೆ ಹಾಗೂ ಅಸಮಾನತೆಯ ವಿರುದ್ಧ ಧ್ವನಿ ಎತ್ತಿದ ಮಹಾನ್ ಮಾನವತಾವಾದಿ," ಎಂದು ತಹಸೀಲ್ದಾರ್ ಅನಿಲ್ ಕುಮಾರ್ ಬಣ್ಣಿಸಿದರು.

ಪಟ್ಟಣದ ಮಿನಿ ಆಡಳಿತ ಸೌಧದ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಆಯೋಜಿಸಲಾಗಿದ್ದ 'ಶ್ರೀ ದೇವರ ದಾಸಿಮಯ್ಯ ಜಯಂತಿ' ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು.

ದಾಸಿಮಯ್ಯನವರ ಜೀವನದ ಬಗ್ಗೆ ವಿವರಿಸಿದ ತಹಸಿಲ್ದಾರ್, "ನೇಕಾರ ವೃತ್ತಿಯವರಾದ ದಾಸಿಮಯ್ಯನವರು 'ರಾಮನಾಥ' ಅಂಕಿತನಾಮದೊಂದಿಗೆ ಸಮಾಜವನ್ನು ನೋಡುವ ಹೊಸ ಕ್ರಮವನ್ನು ಪರಿಚಯಿಸಿದರು. ಅವರ ವಚನಗಳು ಇಂದಿಗೂ ಪ್ರಸ್ತುತವಾಗಿದ್ದು, ಇಂತಹ ಮಹಾಪುರುಷರ ಜಯಂತಿ ಆಚರಣೆಯು ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗದೆ, ಸಮಾಜದ ಎಲ್ಲರೂ ಒಗ್ಗೂಡಿ ಅರ್ಥಪೂರ್ಣವಾಗಿ ಆಚರಿಸಬೇಕು," ಎಂದು ಕರೆ ನೀಡಿದರು.

ತಾಲೂಕು ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಸಿ. ಜಗನ್ನಾಥ್ ಮಾತನಾಡಿ, "ಬಸವಣ್ಣನವರಿಗಿಂತಲೂ ಮುಂಚಿನ ವಚನಕಾರರಾದ ಇವರನ್ನು 'ಆದ್ಯ ವಚನಕಾರ' ಎಂದು ಕರೆಯಲಾಗುತ್ತದೆ.



ಕಾಯಕದ ಮಹತ್ವ ಮತ್ತು ಸಾಮಾಜಿಕ ಸಮಾನತೆಯನ್ನು ಸಾರಿದ ಇವರ ಜೀವನ ನಮಗೆಲ್ಲರಿಗೂ ಪ್ರೇರಣೆಯಾಗಿದೆ," ಎಂದರು.

ಸರ್ಕಾರಿ ಕಾರ್ಯಕ್ರಮದ ನಂತರ, ಪಟ್ಟಣದ ನೆಹರು ಪಾರ್ಕ್ ರಸ್ತೆಯಲ್ಲಿರುವ ಶ್ರೀ ಸರ್ವಶಕ್ತ್ಯಾತ್ಮಕ ಚೌಡೇಶ್ವರಿ ದೇವಾಲಯದಲ್ಲಿ ಸಮುದಾಯದ ವತಿಯಿಂದ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಭಕ್ತಾದಿಗಳಿಗೆ ವಿಶೇಷ ಪ್ರಸಾದ ವಿನಿಯೋಗ ಮಾಡಲಾಯಿತು.

ಸಮಾರಂಭದಲ್ಲಿ ನಿವೃತ್ತ ತಹಸಿಲ್ದಾರ್ ಪಿ. ಗಂಗಾಧರಪ್ಪ, ಪುರಸಭೆ ಅಧ್ಯಕ್ಷ ಮುನಿಕೃಷ್ಣ, ಮುಖಂಡರಾದ ಶ್ರೀ ರಾಮಯ್ಯ, ವಿಜಯಕುಮಾರ್ ಸೇರಿದಂತೆ ಸಮುದಾಯದ ಪ್ರಮುಖರು ಹಾಗೂ ವಿವಿಧ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

# ತುಮುಲ್ ಮರು ಮತ ಎಣಿಕೆ: ಫಲಿತಾಂಶ ಅದಲು–ಬದಲು!

ತುಮಕೂರು

ತುಮಕೂರು ಹಾಲು ಉತ್ಪಾದಕರ ಸಹಕಾರ ಒಕ್ಕೂಟದ (ತುಮುಲ್) ಆಡಳಿತ ಮಂಡಳಿಯ ಮಧುಗಿರಿ ಮತ್ತು ಪಾವಗಡ ಕ್ಷೇತ್ರಗಳಿಗೆ ಹೈಕೋರ್ಟ್ ಆದೇಶದ ಮೇರೆಗೆ ಬುಧವಾರ ನಡೆದ ಮರು ಮತ ಎಣಿಕೆಯಲ್ಲಿ ಫಲಿತಾಂಶ ಉಲ್ಟಾ ಆಗಿದ್ದು, ಇಬ್ಬರು ನೂತನ ನಿರ್ದೇಶಕರು ಆಯ್ಕೆಯಾಗಿದ್ದಾರೆ.

ಚುನಾವಣಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ ನಾಹಿದಾ ಜಮ್ ಜಮ್ ಅವರ ನೇತೃತ್ವದಲ್ಲಿ ನಡೆದ ಮರು ಮತ ಎಣಿಕೆಯು ಭಾರಿ ಕುತೂಹಲಕ್ಕೆ ಕಾರಣವಾಗಿತ್ತು.

2024ರ ನವೆಂಬರ್ 10 ರಂದು ತುಮುಲ್ ಚುನಾವಣೆ ನಡೆದು, ಎರಡು ತಿಂಗಳ ನಂತರ ಮತ ಎಣಿಕೆ ಪ್ರಕ್ರಿಯೆ ಪೂರ್ಣಗೊಂಡಿತ್ತು. ಅಂದು ಪಾವಗಡ ಕ್ಷೇತ್ರದಿಂದ ಚಂದ್ರಶೇಖರರೆಡ್ಡಿ ಮತ್ತು ಮಧುಗಿರಿ ಕ್ಷೇತ್ರದಿಂದ ಬಿ. ನಾಗೇಶ್‌ಬಾಬು ಆಯ್ಕೆಯಾಗಿದ್ದರು. ಆದರೆ, ಈ ಫಲಿತಾಂಶವನ್ನು ಪ್ರಶ್ನಿಸಿ ಪರಾಭವಗೊಂಡಿದ್ದ



ಮಧುಗಿರಿಯ ಕೊಂಡವಾಡಿ ಚಂದ್ರಶೇಖರ್ ಹಾಗೂ ಪಾವಗಡದ ಚನ್ನಮಲ್ಲಯ್ಯ ಹೈಕೋರ್ಟ್ ಮೊರೆ ಹೋಗಿದ್ದರು. ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ವಿಭಾಗೀಯ ಪೀಠವು ಮರು ಮತ ಎಣಿಕೆಗೆ ಆದೇಶ ನೀಡಿತ್ತು.

ಇಂದು ನಡೆದ ಮರು ಮತ ಎಣಿಕೆಯಲ್ಲಿ ಪಾವಗಡ ಕ್ಷೇತ್ರದಿಂದ ಚನ್ನಮಲ್ಲಯ್ಯ ಅವರು 25 ಮತಗಳನ್ನು ಪಡೆಯುವ ಮೂಲಕ ವಿಜಯಶಾಲಿಯಾಗಿದ್ದಾರೆ. ಈ ಹಿಂದೆ ಗೆಲುವು ಸಾಧಿಸಿದ್ದ ಚಂದ್ರಶೇಖರರೆಡ್ಡಿ ಅವರು 21 ಮತಗಳನ್ನು ಪಡೆದಿದ್ದು, ಮರು ಎಣಿಕೆಯಲ್ಲಿ ಸೋಲನ್ನೊಪ್ಪಿಕೊಂಡಿದ್ದಾರೆ. ಇದರೊಂದಿಗೆ ಚನ್ನಮಲ್ಲಯ್ಯ ನೂತನ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ ಎಂದು ಅಧಿಕೃತವಾಗಿ ಘೋಷಿಸಲಾಯಿತು.

ಮಧುಗಿರಿ ಕ್ಷೇತ್ರದಲ್ಲಿ ಈ ಹಿಂದೆ ಗೆದ್ದಿದ್ದ ನಾಗೇಶ್ ಬಾಬು ಅವರು ಅನರ್ಹಗೊಂಡ ಹಿನ್ನೆಲೆಯಲ್ಲಿ, ಅವರ ಪ್ರತಿಸ್ಪರ್ಧಿಯಾಗಿದ್ದ ಕೊಂಡವಾಡಿ ಚಂದ್ರಶೇಖರ್ ಅವರನ್ನು ನೂತನ ನಿರ್ದೇಶಕರೆಂದು ಚುನಾವಣಾಧಿಕಾರಿಗಳು ಘೋಷಿಸಿದರು.

ಫಲಿತಾಂಶ ಪ್ರಕಟವಾಗುತ್ತಿದ್ದಂತೆ ನೂತನ ನಿರ್ದೇಶಕರುಗಳನ್ನು ಅವರ ಬೆಂಬಲಿಗರು ಹೂಮಾಲೆ ಹಾಕಿ, ಸಿಹಿ ಹಂಚಿ ಅಭಿನಂದಿಸಿದರು. ಈ ಮರು ಮತ ಎಣಿಕೆಯಿಂದಾಗಿ ತುಮುಲ್ ಆಡಳಿತ ಮಂಡಳಿಯಲ್ಲಿ ರಾಜಕೀಯ ಸಮೀಕರಣಗಳು ಬದಲಾದಂತಾಗಿವೆ.

Printed by gandasi sadananda swamy, published by gandasi sadanandaswamy, owned by gandasi sadananda swamy. Printed at LAVANYA MUDRANA No. 79, TR mill, compound, 5th main 9th corss, Chamarajpet Bangalore-560018, published at No.531, prakruthi nilaya, kalikanagar, Andrahalli, Vishwaneedam Post, Bangalore-560091. Editor: Gandasi sadanandaswamy